Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–21 ಮೇ 22–28, 2023 ಪುಟ 16 ರೂ. 10/–

Volume-17 Issue-21 May 22-28, 2023 Pages:16 Price: 10/-

ಬಿಜೆಪಿ ಸೋತಿದೆ ಆದರೆ ಆಪಾಯ ತಪ್ಪಿಲ್ಲ



ಮುಕ್ಕಾಲು ಪಾಲು ಶಾಸಕರು ಕೋಟ್ಯಾಧಿಪತಿಗಳು

WFI ಮುಖ್ಯಸ್ಥ ಬಿಜೆಪಿ ಸಂಸದನ ಬಂಧನಕ್ಕೆ ದೇಶಾದ್ಯಂತ ಪ್ರತಿಭಟನೆ

ಮಿಲಿಟರಿ ಮೈತ್ರಿಕೂಟದತ್ತ ಜಾರುತ್ತಿರುವ ಭಾರತ



ನೂತನ ಸರ್ಕಾರ: ಹಲವು ಸವಾಲುಗಳು

ಇದುವರೆಗೆ ಆರು ಮಿಥ್ಯೆಗಳ ವಿಶ್ಲೇಷಣೆಗಳನ್ನು ಓದಿರುವಿರಿ
ಮಿಥ್ಯೆ 1– 'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!?
ಮಿಥ್ಯೆ 2– ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು!?
ಮಿಥ್ಯೆ 3– ಸಾವರ್ಕರ್ ಕ್ಷಮಾಯಾಚನೆಯ ಅರ್ಜಿಗಳು ಸ್ವಾತಂತ್ರ್ಯ ಗಳಿಕೆಗೆ ಒಂದು ತಂತ್ರವಷ್ಟೆ!?
ಮಿಥ್ಯೆ 4– ಮುಸ್ಲಿಂ ಲೀಗಿನ ವಿರುದ್ಧ ಸಾವರ್ಕರ್ ಬಂಡೆಯಂತೆ ನಿಂತಿದ್ದರು !?
ಮಿಥ್ಯೆ 5– ಸಾವರ್ಕರ್ ಒಬ್ಬ ವಿಚಾರವಾದಿ, ಅಸ್ಪೃಶ್ಯತೆಯ ವಿರುದ್ಧ ಹೋರಾಡಿದರು !?
ಮಿಥ್ಯೆ 6– ಗಾಂಧಿ ಹತ್ಯೆಯ ಪ್ರಕರಣದಲ್ಲಿ ಆರೋಪಗಳು ಸಾಬೀತಾಗಲೇ ಇಲ್ಲ!? ಕೊನೆಯದಾಗಿ,
ಮಿಥ್ಯೆ 7– ಸಾವರ್ಕರರ 'ಹಿಂದುತ್ವ': ಭಾರತ ದೇಶಕ್ಕೆ ವೈಜ್ಞಾನಿಕ ಆಧಾರ !?
ಹಿಂದುತ್ವ ಮತ್ತು ಹಿಂದೂ ಧರ್ಮದ ನಡುವೆ ಸ್ಪಷ್ಟ ವ್ಯತ್ಯಾಸ ಇದೆ ಎಂಬುದನ್ನು ಸಾವರ್ಕರ್ ಹೇಗೆ ಮಂಡಿಸಿದ್ದರು ಮತ್ತು ಹೇಗೆ ಅದು ದೇಶವನ್ನು ವಿಭಜಿಸಿದ 'ದ್ವಿರಾಷ್ಟ್ರ' ಸಿದ್ಧಾಂತಕ್ಕೆ ನೆಲೆ ಒದಗಿಸಿತು ಎಂಬುದರ ಬಗ್ಗೆ ಇದುವರೆಗೆ ಓದಿದ್ದೀರಿ.
ಈ ಕೊನೆಯ ಕಂತಿನಲ್ಲಿ, ಅವರ 'ಹಿಂದುತ್ವ' ಹೇಗೆ ಆಧುನಿಕ ಯುಗದಲ್ಲಿ ಪ್ರಜಾಪ್ರಭುತ್ವದ ಪರಿಕಲ್ಪನೆಗಳಿಗೆ ತದ್ವಿರುದ್ಧವಾದದ ನೆಲೆಗಳನ್ನು ಹೊಂದಿರುವ ಸಿದ್ಧಾಂತ ಎಂಬುದನ್ನು ಲೇಖಕರು ಅವರ ಮಾತುಗಳಲ್ಲೇ ತೋರಿಸಿಕೊಟ್ಟಿದ್ದಾರೆ.

ಜನಾಂಗವಾದ, ಜಾತಿವಾದ ಮತ್ತು ಜಾಗತಿಕ ಆಧಿಪತ್ಯ: ಸಾವರ್ಕರ್ 'ಹಿಂದುತ್ವ'ದ ಮೂಲಾಂಶಗಳು

ಸಾವರ್ಕರ್ ಅವರ ಹಿಂದುತ್ವವು ಹೆಚ್ಚಾಗಿ ಅದರ ಮುಸ್ಲಿಂ–ವಿರೋಧಿ ಹಾಗೂ ಕ್ರಿಶ್ಚಿಯನ್–ವಿರೋಧಿ ಭಾವೋದ್ರೇಕದ ನಿಲುವುಗಳಿಂದ ಚಿರಪರಿಚಿತವಾಗಿದೆ; ಆದರೆ ಇನ್ನೂ ಮೂರು ಬಹಳ ಮಹತ್ವಪೂರ್ಣ ಅಂಶಗಳನ್ನೂ ಅದು ಒಳಗೊಂಡಿದೆ ಮತ್ತು ಅವು ಹಿಂದುತ್ವ ರಾಜಕೀಯದ ವಿಕಾಸವನ್ನು ನಿರ್ಧರಿಸಿವೆಯಾದ್ದರಿಂದ ಅವುಗಳನ್ನು ಹೆಚ್ಚು ವಿವರಿಸಬೇಕಾದ ಅಗತ್ಯವಿದೆ. ಒಂದು ದೇಶವಾಗಿ ಹಿಂದೂಗಳು ಅನುಸರಿಸಬೇಕಾದ ದಿಕ್ಕನ್ನೂ ಈ ಅಂಶಗಳು ಸೂಚಿಸುತ್ತವೆ. ಹಿಂದೂ ರಾಷ್ಟ್ರ ಮೊದಲನೆಯದಾಗಿ, ಶ್ರೇಷ್ಠ ಜನಾಂಗದಿಂದ ಬೆಳೆದು ಬಂದಿದೆ ಎಂದು ಸಾವರ್ಕರ್ ವಾದಿಸುತ್ತಾರೆ. ಎರಡನೆಯದಾಗಿ, ಅದು ನಾಲ್ಕು ವರ್ಣಗಳ ಪದ್ಧತಿಯಿಂದಾಗಿ ಬದುಕಿ ಉಳಿದಿದೆ. ಮತ್ತು ಕೊನೆಯದಾಗಿ, ಹಿಂದೂ ಜನಾಂಗವು ಇಡೀ ಜಗತ್ತನ್ನು ಆಳಲು ಸಜ್ಜಾಗಿದೆ.

ಹಿಂದುತ್ವದ ಜನಾಂಗೀಯ ಆಯಾಮಕ್ಕೆ ಒತ್ತು ನೀಡುತ್ತಾ ಸಾವರ್ಕರ್ ಹೀಗೆ ಬರೆಯುತ್ತಾರೆ:

"ಹಿಂದೂಗಳು ಭಾರತ ದೇಶದ ಪ್ರಜೆಗಳು ಮಾತ್ರವಲ್ಲ, ಏಕೆಂದರೆ ಅವರು ಒಂದು ತಾಯ್ನಾಡಿಗೆ ಸೇರಿದವರು ಎಂಬ ಪರಸ್ಪರ ವಿಶ್ವಾಸದ ಬಂಧಗಳಿಂದ ಮಾತ್ರ ಒಗ್ಗೂಡಿಲ್ಲ, ಅವರು ಸಮಾನ ರಕ್ತ ಸಂಬಂಧದ ಬಂಧವನ್ನೂ ಹೊಂದಿದ್ದಾರೆ. ಅವರು ಒಂದು ರಾಷ್ಟ್ರ ಮಾತ್ರವಲ್ಲ ಒಂದು ಜಾತಿ ಯಾಗಿಯೂ ಇದ್ದಾರೆ. ಜಾತಿ ಎಂಬ ಪದ ಜ ದಿಂದ ಉತ್ಪತ್ತಿಯಾಗಿದೆ, ಜ ಅಂದರೆ ಹುಟ್ಟು ಅಂದರೆ ಸೋದರತ್ವ, ಒಂದು ಸಮಾನ ಮೂಲದಿಂದ ನಿರ್ಧರಿತವಾದ ಜನಾಂಗ, ಒಂದೇ ರಕ್ತ ಹೊಂದಿರುವವರು ಎಂಬ ಅರ್ಥ ಹೊಂದಿದೆ. ಒಂದು ಶ್ರೇಷ್ಠ ಜನಾಂಗದ ರಕ್ತವು ತಮ್ಮ ನರನಾಡಿಗಳಲ್ಲಿ ಹರಿಯುತ್ತಿದೆ ಮತ್ತು ವೇದಕಾಲದ ಪೂರ್ವಜರಾದ, ಸಿಂಧೂಗಳ ವಂಶದವರು ಎಂದೂ ಎಲ್ಲಾ ಹಿಂದೂಗಳು ಹೇಳಿಕೊಳ್ಳುತ್ತಾರೆ.

> "ಹಿಂದೂ ರಾಜ್ಯವೆಂಬುದೇನಾದರೂ ವಾಸ್ತವಗೊಂಡರೆ, ಅದು ಈ ದೇಶಕ್ಕೆ ಮಹಾ ಅನಾಹುತ ಎಂಬುದರಲ್ಲಿ ಸಂದೇಹವೇ ಇಲ್ಲ... ಅದು ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಕ್ಕೆ ಒಂದು ಪಿಡುಗು.. ... ಆ ಕಾರಣದಿಂದಾಗಿ ಅದು ಪ್ರಜಾಪ್ರಭುತ್ವಕ್ಕೆ ತಕ್ಕುದಾದುದಲ್ಲ. ಹಿಂದೂರಾಜ್ಯವನ್ನು ಎಷ್ಟೇ ಬೆಲೆ ತೆತ್ತಾದರೂ ತಡೆಯಲೇಬೇಕು."
>
> *–ಡಾ.ಬಿ.ಆರ್.ಅಂಬೇಡ್ಕರ್*

ಸಾವರ್ಕರ್ ತಮ್ಮ ವಾದವನ್ನು ಮುಂದುವರಿಸುತ್ತಾ,

"ಯಾರು ಸಿಂಧೂವಿನಿಂದ ಸಿಂಧೂವಿನವರೆಗೆ ವ್ಯಾಪಿಸಿರುವ ಭೂಮಿಯನ್ನು ತನ್ನ ಪೂರ್ವಜರ ನಾಡು – ತನ್ನ ಪಿತೃಭೂಮಿ ಎಂದು ಭಾವಿಸುತ್ತಾನೋ ಅವನು ಹಿಂದೂ; ವೈದಿಕ ಸಪ್ತಸಿಂಧೂಗಳ ಹಿಮಾಲಯದ ಔನ್ನತ್ಯದಿಂದ ತನ್ನ ಮೊದಲ ಹಾಗೂ ಗ್ರಹೀತ ಮೂಲದ ಶ್ರೇಷ್ಠ ಜನಾಂಗದ ರಕ್ತ ತನ್ನದು ಎಂದು ಭಾವಿಸುತ್ತಾನೋ ಅವನು ಹಿಂದೂ; ಏಕೀಭವಿಸಿದ್ದನ್ನೆಲ್ಲ ತನ್ನದಾಗಿಸಿಕೊಂಡು, ತನ್ನದಾಗಿಸಿಕೊಂಡದ್ದನ್ನೆಲ್ಲ ಔನ್ನತ್ಯಕ್ಕೇರಿಸಿ ಬೆಳೆದುಬಂದವರನ್ನು ಹಿಂದೂ ಜನರು ಎಂದು ತಿಳಿಯಲಾಗಿದೆ; ಈ ವಿಶೇಷ ಲಕ್ಷಣಗಳ ಪರಿಣಾಮವಾಗಿ ಸಮಾನ ಇತಿಹಾಸ, ಸಮಾನ ದೇವಾನುದೇವತೆಗಳನ್ನು, ಸಮಾನ ಸಾಹಿತ್ಯ, ಸಮಾನ ಕಲೆ, ಸಮಾನ ಕಾನೂನು ಹಾಗೂ ಸಮಾನ ನ್ಯಾಯಶಾಸ್ತ್ರ, ಸಮಾನ ಹಬ್ಬ ಹರಿದಿನಗಳು, ಸಂಸ್ಕಾರ ಹಾಗೂ ಮತಕ್ರಿಯಾವಿಧಿಗಳನ್ನು, ಸಮಾರಂಭಗಳು ಹಾಗೂ ಮತಸಂಸ್ಕಾರಗಳನ್ನು ಪ್ರತಿನಿಧಿಸುವ ಹಿಂದೂ ಸಂಸ್ಕೃತಿಯನ್ನು, ಹಿಂದೂ ನಾಗರೀಕತೆಯನ್ನು ತನ್ನದೆಂದು ಸಮರ್ಥಿಸಿಕೊಳ್ಳುವವನು ಹಿಂದೂ ಆಗುತ್ತಾನೆ."

ಹಿಂದೂ ಜನಾಂಗ ಮತ್ತು ಹಿಂದೂಗಳ ನಾಡು ಜಗತ್ತಿನ ಇತರ ಜನರು ಹಾಗೂ ದೇಶಗಳಿಗಿಂತ ಶ್ರೇಷ್ಠವಾದುದು ಎನ್ನುವ ಅಂಶವನ್ನು ಸಾವರ್ಕರ್ ಒತ್ತಿಹೇಳಿದರು. 'ಮ್ಲೇಚ್ಛಸ್ತಾನ (ವಿದೇಶಿಯರ ನಾಡು)ಕ್ಕಿಂತ ಭಿನ್ನವಾಗಿ 'ಸಿಂಧೂಸ್ತಾನವು ರಾಷ್ಟ್ರಮಾರ್ಯಸ್ಯ ಚೋತ್ತಮಂ' (ಆರ್ಯರ ಅತ್ಯುತ್ತಮ ದೇಶ) ಎಂಬ ಹಿರಿಮೆ ಗಳಿಸಿದೆ.'

ಇನ್ನೂ ಮುಂದುವರೆದು, ಹಿಂದೂಗಳು

".. ಮಾತ್ರವೇ ತಮ್ಮ ಇತಿಹಾಸವನ್ನು ಭೂಕಂಪಗಳ ಮೇಲೆ ಸವಾರಿ ಮಾಡಿ ಹಾಗೂ ಪ್ರಳಯಗಳಿಗೆ ಸೇತುವೆ ನಿರ್ಮಿಸಿ ಸಂರಕ್ಷಣೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ! ಅದು ಅವರ ವೇದಗಳಿಂದಲೇ ಆರಂಭವಾಗುತ್ತದೆ, ಅದು ಈಗಲೂ ಪ್ರಚಲಿತವಾಗಿರುವ ನಮ್ಮ ಜನಾಂಗದ ಪೂರ್ವೇತಿಹಾಸದ ಮೊದಲ ಅಧ್ಯಾಯವಾಗಿದೆ

ಎನ್ನುತ್ತಾರೆ ಸಾವರ್ಕರ್.

ಹಿಂದೂಗಳು ಕೇವಲ ಒಂದು ರಾಷ್ಟ್ರವಷ್ಟೇ ಅಲ್ಲ, ಒಂದು ಜಾತಿ(ಜನಾಂಗ)ಯೂ, ಹುಟ್ಟಾ ಸಹೋದರತ್ವ ಹೊಂದಿದವರು ಎನ್ನುವುದು ಅವರ ದೃಢವಾದ ನಂಬಿಕೆಯಾಗಿತ್ತು. ಕಟ್ಟಕಡೆಗೂ ಅದು ಅಂತಃಕರಣದ ಪ್ರಶ್ನೆ, ಮತ್ತೇನೂ ಗಣನೆಗೇ ಬರುವುದಿಲ್ಲ. ಅದೇ ಪ್ರಾಚೀನ ರಕ್ತ ಎಲ್ಲರ ನರನಾಡಿಗಳಲ್ಲಿ, ರಾಮನಲ್ಲಿ, ಕೃಷ್ಣನಲ್ಲಿ, ಬುದ್ಧ ಮತ್ತು ಮಹಾವೀರನಲ್ಲಿ, ನಾನಕ್ ಮತ್ತು ಚೈತನ್ಯನಲ್ಲಿ, ಬಸವ ಮತ್ತು ಮಾಧವನಲ್ಲಿ, ರೋಹಿದಾಸ, ತಿರುವಳ್ಳುವರ್ ಹೀಗೆ ಹಿಂದೂದೇಶದ ಎಲ್ಲರ ಧಮನಿ ಧಮನಿಗಳಲ್ಲಿ ಹರಿದಿದೆ, ಹೃದಯದಿಂದ ಹೃದಯಕ್ಕೆ ಸ್ಪಂದಿಸಿದೆ ಎಂದು ನಾವು ಭಾವಿಸುತ್ತೇವೆ. ನಾವು ಒಂದು ಜಾತಿ (ಜನಾಂಗ), – ಆತ್ಮೀಯರ ರಕ್ತಸಂಬಂಧದಿಂದ ಒಂದುಗೂಡಿದ ಜನಾಂಗ ಎಂದು ಭಾವಿಸುತ್ತೇವೆ – ಮತ್ತು ಆದಕಾರಣವೇ ಅದು ಹಾಗೆಯೇ ಇರಬೇಕು.'

ಸಾವರ್ಕರ್ ಹಿಂದುತ್ವ ಹಿಟ್ಲರ್ ಮುಸೊಲಿನಿಯನ್ನು ಆರಾಧಿಸುತ್ತದೆ

ಜನಾಂಗ ಶ್ರೇಷ್ಠತೆಯ ಬಗೆಗಿನ ನಂಬಿಕೆಯು ಸಾವರ್ಕರ್ ಅವರನ್ನು ಫ್ಯಾಸಿಸ್ಟ್ ಇಟಲಿ ಮತ್ತು ನಾಜಿ ಜರ್ಮನಿಯನ್ನು ಆರಾಧಿಸುವಂತೆ ಮಾಡಿತ್ತು. ಸಾವರ್ಕರರ ಹಿಂದುತ್ವವು ಹಿಟ್ಲರ್ ಮತ್ತು ಮೊಸೊಲಿನಿಯ ಬಗ್ಗೆ ಬಹಳ ಗೌರವ ಹೊಂದಿತ್ತು. ಮದುರಾದಲ್ಲಿ 1940ರಲ್ಲಿ ಹಿಂದೂ ಮಹಾಸಭಾದ ಅಧಿವೇಶನದಲ್ಲಿ ಅಧ್ಯಕ್ಷೀಯ ಭಾಷಣ ಮಾಡುವಾಗ ಅವರು ಹೀಗೆ ಹೇಳಿದರು:

"ನಾಜಿ ಎಂಬ ತಲೆಪಟ್ಟಿ ಕಟ್ಟಿದ ಮಾತ್ರಕ್ಕೆ ಹಿಟ್ಲರ್ ಒಬ್ಬ ಮಾನವ ರಾಕ್ಷದ ಅಥವಾ ತಾನೊಬ್ಬ ಪ್ರಜಾಪ್ರಭುತ್ವವಾದಿ ಎನ್ನುವ ಚರ್ಚಿಲ್ ದೇವಮಾನವ ಎಂದು ಹೇಳಲು ಕಾರಣವೇ ಇಲ್ಲ. ಜರ್ಮನಿಯು ಆಗ ಇದ್ದ ಪರಿಸ್ಥಿತಿಯಲ್ಲಿ ನಾಜಿವಾದ ಜರ್ಮನಿಯ ರಕ್ಷಕವಾಗಿತ್ತು ಎಂದು ನಿರ್ವಿವಾದವಾಗಿ ಸಾಬೀತಾಗಿದೆ . ."

ನಾಜಿವಾದ ಅಥವಾ ಫ್ಯಾಸೀವಾದವನ್ನು ಯಾರಾದರೂ ಟೀಕಿಸಿದರೆ ಅದು ಸಾವರ್ಕರ್ ಅವರಿಗೆ ಇಷ್ಟವಾಗುತ್ತಿರಲಿಲ್ಲ. ಈ ಎರಡು ನಿರಂಕುಶ ಪ್ರಭುತ್ವದ ಸಿದ್ಧಾಂತಗಳನ್ನು ಒಮ್ಮೆ ನೆಹರೂರವರು ತೀವ್ರವಾಗಿ ಟೀಕಿಸಿದಾಗ ಸಾವರ್ಕರ್ ಹರಿತವಾಗಿ ಉತ್ತರಿಸಿದ್ದರು:

"ನಮಗೆ ತಾತ್ವಕ ಆಕರ್ಷನೆಯಿಂದಾಗಿ ಒಂದು ನಿರ್ದಿಷ್ಟ ಸ್ವರೂಪದ ಸರ್ಕಾರದ ಬಗ್ಗೆ ಒಲವಿದೆ ಎಂಬ ಮಾತ್ರಕ್ಕೆ ಜರ್ಮನಿಗಾಗಲಿ, ಇಟಲಿಗಾಗಲೀ ಅಥವಾ ರಷ್ಯಾಕ್ಕಾಗಲೀ ಅದನ್ನೇ ಆರಿಸಿಕೊಳ್ಳಬೇಕು ಎಂದು ಆಜ್ಞಾಪಿಸಲು ನಾವ್ಯಾರು? ಜರ್ಮನಿಗೆ ಏನು ಬೇಕು ಎನ್ನುವುದು ಪಂಡಿತ್ ನೆಹರೂರವರಿಗಿಂತ ಹಿಟ್ಲರಿಗೆ ಚೆನ್ನಾಗಿ ಗೊತ್ತಿದೆ. ನಾಜಿ ಅಥವಾ ಫ್ಯಾಸಿವಾದದ ಮಾಂತ್ರಿಕ ದಂಡದ ಸ್ಪರ್ಶದಿಂದಲೇ ಜರ್ಮನಿ ಅಥವಾ ಇಟಲಿ ಎಷ್ಟು ಆಶ್ಚರ್ಯಕರವಾಗಿ ಚೇತರಿಸಿಕೊಂಡಿದೆ ಮತ್ತು ಹಿಂದೆಂದಿಗಿಂತಲೂ ಹೆಚ್ಚು ಬಲಿಷ್ಠವಾಗಿ ಬೆಳೆದಿದೆ ಎನ್ನುವ ಅಂಶವೇ ಸಾಕು ಆ ರಾಜಕೀಯ 'ವಾದಗಳು' ಅವರ ದೇಶದ ಸ್ಥಿತಿಗೆ ಅನುಗುಣವಾಗಿದೆ ಎಂಬುದನ್ನು ತಿಳಿಯಲು."

ಯಹೂದಿಗಳ ವಿರುದ್ಧದ ಹಿಟ್ಲರನ ಹತ್ಯಾಕಾಂಡಕ್ಕೆ ಸಾವರ್ಕರ್ ಎಲ್ಲಾ ರೀತಿಯ ಬೆಂಬಲ ನೀಡಿದರು ಮತ್ತು ಭಾರತದ ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಸಮಸ್ಯೆಗಳಿಗೂ ಅದೇ ರೀತಿಯ ಪರಿಹಾರವನ್ನು ಅಳವಡಿಸಿಕೊಳ್ಳಬೇಕು ಎಂದು ಸಾವರ್ಕರ್ 1938 ಅಕ್ಟೋಬರ್ 14 ರಂದು ಸುಳಿವು ನೀಡಿದ್ದರು: "ಯಾವುದೇ ಒಂದು ದೇಶವನ್ನು ಅಲ್ಲಿ ನೆಲೆಸಿರುವ ಬಹುಸಂಖ್ಯಾತರು ರೂಪಿಸುತ್ತಾರೆ. ಜರ್ಮನಿಯಲ್ಲಿ ಯೆಹೂದಿಗಳು ಏನು ಮಾಡಿದರು? ಅವರು ಜರ್ಮನಿಯಲ್ಲಿ ಅಲ್ಪಸಂಖ್ಯಾತರಾಗಿದ್ದರಿಂದ ಅವರನ್ನು ಅಲ್ಲಿಂದ ಹೊರಗೆ ಹಾಕಿದರು."

'ವೀರ' ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್‌ಡ' ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.




ಭಾಗ–30

ಡಾ.ಶಮ್ಸುಲ್‌ಇಸ್ಲಾಂ
ಅನು:ಟಿ.ಸುರೇಂದ್ರರಾವ್

ಜಾತಿವಾದದ ಮಹಾನ್ ರಕ್ಷಕನಾಗಿ ಸಾವರ್ಕರ್

ಹಿಂದುತ್ವದ ಒಬ್ಬ ಪ್ರವಾದಿಯಾಗಿರುವ ಸಾವರ್ಕರ್ ಹಿಂದೂ ಸಮಾಜದಲ್ಲಿನ ಜಾತಿವಾದವನ್ನು ಸಮರ್ಥಿಸಿದರು ಮತ್ತು ಒಂದು ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಅದು ತೀರ ಅಗತ್ಯವಾದ ಸಹಜ ಅಂಗವೆಂದು ಪರಿಗಣಿಸಿದರು. ಜಾತಿವಾದವು "ನಮ್ಮ ದೇಶದ ಒಂದು ವಿಶಿಷ್ಟವಾದ ಕುರುಹು" ಎಂದು ಅವರು ಬಣ್ಣಿಸಿದರು; ಅದನ್ನು ಪ್ರಾಚೀನ ಭಾರತದಲ್ಲಿ ಬೌದ್ಧರು ನಾಶಮಾಡಲು ಪ್ರಯತ್ನಿಸಿದರು ಹಾಗೂ ಆ ಮೂಲಕ ಹಿಂದೂ ರಾಷ್ಟ್ರ ನಿರ್ಮಾಣವನ್ನು ಗಂಡಾಂತರಕ್ಕೆ ಈಡುಮಾಡಿದ್ದರು. ಸಾವರ್ಕರ್ ಅವರ ಪ್ರಕಾರ ನಾಲ್ಕು ವರ್ಣಗಳ (ಚಾತುರ್ವರ್ಣ) ಪದ್ಧತಿಯನ್ನು ಬೌದ್ಧರಂತವರ ಆಳ್ವಿಕೆಯಲ್ಲಿ ಕೂಡ ಅಳಿಸಿಹಾಕಲಾಗಲಿಲ್ಲ ಮತ್ತು ಆನಂತರದಲ್ಲಿ ಹಿಂದೂ ರಾಜರುಗಳು ಹಾಗೂ ಚಕ್ರವರ್ತಿಗಳು ಚಾತುರ್ವರ್ಣ ಪದ್ಧತಿಯನ್ನು ಪುನಸ್ಥಾಪಿಸುವುದು ತಮ್ಮ ಪವಿತ್ರ ಕರ್ತವ್ಯವೆಂದು ಬಗೆದರು. "ಈ ಪದ್ಧತಿಯ ಪರವಾದ ಪ್ರತಿಕ್ರಿಯೆಗಳು ಎಷ್ಟು ಪ್ರಬಲವಾಗಿ ಬೆಳೆಯಿತೆಂದರೆ ನಮ್ಮ ರಾಷ್ಟ್ರೀಯತೆಯು ಬಹುಮಟ್ಟಿಗೆ ಅದರೊಂದಿಗೇ ಗುರುತಿಸಲ್ಪಡುವಂತೆ ಆಯಿತು." ಜಾತಿವಾದವು ಹಿಂದೂ ದೇಶದ ಅವಿಭಾಜ್ಯ ಅಂಗವೆಂದು ಸಮರ್ಥಿಸುವಾಗ "ಯಾವ ನಾಡಿನಲ್ಲಿ ಚಾತುರ್ವರ್ಣ ಪದ್ಧತಿಯು ಅಸ್ತಿತ್ವದಲ್ಲಿಲ್ಲವೋ ಅದು ಮ್ಲೇಚ್ಛ ದೇಶವಾಗುತ್ತದೆ" ಎಂದು ಸಾವರ್ಕರ್ ಘೋಷಿಸಿದರು. ಅದಕ್ಕೆ ಪ್ರತಿಯಾಗಿ ಆರ್ಯಾವರ್ತ ಅಥವಾ ಆರ್ಯರ ನಾಡು ಸಾರಭೂತವಾಗಿ ಜಾತಿವಾದದ ಆಧಾರದಲ್ಲಿತ್ತು.



ಒಟ್ಟಾರೆಯಾಗಿ ಸಾವರ್ಕರ್ ಅವರ ಜಾತಿವಾದದ ಸಮರ್ಥನೆಯು ಹಿಂದೂ ರಾಷ್ಟ್ರದ ತಿಳುವಳಿಕೆಯ ಬಗ್ಗೆ ಅವರ ಜನಾಂಗೀಯ ಧೋರಣೆಯ ಉಪಸಿದ್ಧಾಂತವಷ್ಟೆ. ವಾಸ್ತವವಾಗಿ ಈ ಜಾತಿಪದ್ಧತಿಯು ಹಿಂದೂ ಸಮಾಜದಲ್ಲಿ ರಕ್ತದ ಮುಕ್ತ ಹರಿವನ್ನು ತಡೆದಿದೆ ಎಂಬ ಟೀಕೆಯನ್ನು ಅಲ್ಲಗಳೆಯುವಾಗ ಅವರು ಇದು ಅವುಗಳನ್ನು ಪರಸ್ಪರ ಪೂರಕಗೊಳಿಸಿತು ಎಂಬ ಒಂದು ಸ್ವಾರಸ್ಯಕರವಾದ ತರ್ಕವನ್ನು ಮುಂದಿಡುತ್ತಾರೆ–ಜಾತಿಪದ್ಧತಿ ಹಿಂದೂ

ಪುಟ 4 ಕ್ಕೆ

ಸಂಪಾದಕೀಯ

ನೂತನ ಸರಕಾರ: ಹಲವು ಹನ್ನೊಂದು ಕಾರ್ಯಭಾರ

ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಸಿದ್ಧರಾಮಯ್ಯ, ಉಪ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಜೊತೆಗೆ 8 ಸದಸ್ಯರ ಮಂತ್ರಿಮಂಡಲವೂ ಅಸ್ತಿತ್ವಕ್ಕೆ ಬಂದಿದೆ. ಒಟ್ಟು ವಾರದಿಂದಲೂ ಲಂಬಿಸಿದ್ದ ಅನಿಶ್ಚಿತೆಗೆ ತೆರೆ ಬಿದ್ದಿದೆ. ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸಿ ಅನಿಶ್ಚಿತತೆಗೆ ಎಡೆಯೇ ಇಲ್ಲದಂತೆ ಬಹುಮತದ ಜನಾದೇಶ ದೊರೆತರೂ ಮುಖ್ಯಮಂತ್ರಿ ಸ್ಥಾನಕ್ಕಾಗಿ ನಡೆದ ಪೈಪೋಟಿ ಅಗತ್ಯಕ್ಕಿಂತ ದೀರ್ಘ ಸಮಯ ತೆಗೆದುಕೊಂಡದ್ದು ಸಾರ್ವಜನಿಕರಲ್ಲಿ ಬೇಸರ ತರಿಸಿತ್ತು. ಮೇಲಾಗಿ, ಸೋತ ಅಘಾತದಿಂದ ಸೊಲ್ಲೆತ್ತದೇ ಅವಿತಿದ್ದ ವಿರೋಧ ಪಕ್ಷ ಬಿಜೆಪಿ ವಾಗ್ ಧಾಳಿ ನಡೆಸಲು ಅನುವು ಮಾಡಿಕೊಟ್ಟಿತ್ತು.

ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ಧರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ಆಕಾಂಕ್ಷಿಗಳು ಎನ್ನುವ ವಿಷಯ ಗುಟ್ಟಿನದೇನಾಗಿರಲಿಲ್ಲ. ಪರಮೇಶ್ವರ್ ನಂತಹವರೂ ತಾವೂ ಆಕಾಂಕ್ಷಿಗಳೆಂದು ಇಂಗಿತ ವ್ಯಕ್ತ ಪಡಿಸಿದ್ದರೂ ಇಬ್ಬರ ನಡುವೆಯೇ ಸ್ಪರ್ದೆ, ಅವರ ಬೆಂಬಲಿಗರ ಬಹಿರಂಗ ಸಡಿಲ ಮಾತುಗಳು ಸಿಡಿದಿದ್ದವು. ಹೀಗಿರುವಾಗ ಕಾಂಗ್ರೆಸ್ ನ ಹೈಕಮಾಂಡ್ ಕ್ಷಿಪ್ರ ಗತಿಯಲ್ಲಿ ವಿವಾದವನ್ನು ಬಗೆಹರಿಸಿ ಸರಕಾರ ಸುಗಮ ಹಾದಿ ಕಲ್ಪಿಸಬೇಕಿತ್ತು. ಇಬ್ಬರ ಅಹವಾಲು ಕೇಳಲು, ಮನವೊಲಿಸಲು ತೆಗೆದುಕೊಂಡ ಸಮಯ ಮತ್ತು ವಿಧಾನಗಳು, ಆದ ವಿಳಂಬ ಕಾಂಗ್ರೆಸ್ ಒಳಗೆ ಎರಡು ಬಣಗಳಾಗಲು ಹಾಗೂ ಅವು ಮತ್ತಷ್ಟು ಕ್ರೋಢೀಕರಣಗೊಳ್ಳಲು ಅವಕಾಶ ಕಲ್ಪಿಸಿದವು. ಎರಡು ಹುದ್ದೆಗಳು ಸರಕಾರ ಸುಗಮ ಸಾಗಲು ಸೃಷ್ಟಿಸಿದ ಅವಕಾಶಗಳು ಎನ್ನುವುದಕ್ಕಿಂತ ಒಂದು ಪಕ್ಷ, ಒಂದು ಸರಕಾರದೊಳಗೆ ಎರಡು ಶಕ್ತಿ ಕೇಂದ್ರಗಳನ್ನು ಸೃಷ್ಟಿಸಿದಂತೆ ಭಾಸವಾಗುತ್ತಿದೆ. ಇದು ಮುಂದಿನ ದಿನಗಳಲ್ಲಿ ಬಣ ಬಡಿದಾಟಕ್ಕೆ ಎಡೆ ಮಾಡಲೂ ಬಹುದು. ಹಾಗೆ ನೋಡಿದರೆ ಕಾಂಗ್ರೆಸ್ ನ ಹೈಕಮಾಂಡ್ ಸಹ ಬಹುತೇಕ ಇಂತಹ ಗುಂಪುಗಳನ್ನು ಬಯಸುತ್ತದೆ, ಉತ್ತೇಜಿಸುತ್ತದೆ. ರಾಜ್ಯದ ನಾಯಕತ್ವ ಶಕ್ತಿಯುತವಾಗಿರಬಾರದು, ತಮ್ಮ ಅಂಕೆ, ಹಂಗಿನಲ್ಲಿರಬೇಕು ಎಂಬ ಕಡೆಗೆ ಸದಾ ಕ್ರಮ ವಹಿಸುತ್ತದೆ. ಸ್ಥಳೀಯ ನಾಯಕತ್ವ ಬಲಗೊಳ್ಳದಂತೆ ಎಚ್ಚರವನ್ನೂ ವಹಿಸುತ್ತದೆ. ಏಕಸ್ವಾಮ್ಯ ಬಂಡವಾಳಗಾರರ ಪಕ್ಷಗಳು ಇದನ್ನೇ ಬಯಸುತ್ತವೆ. ಸಿ.ಎಂ.ಆಯ್ಕೆ ಆ ಪಕ್ಷದ ಆಂತರಿಕ ವಿಷಯ ಎನ್ನುವುದು ನಿಜ. ಆದರೆ ಇಂತಹ ರಂಪಾಟಗಳು ಸಾರ್ವಜನಿಕರಲ್ಲಿ ಎಂತಹ ಭಾವನೆಗಳನ್ನು ಹುಟ್ಟು ಹಾಕಬಲ್ಲವು ಎಂದು ನಾಯಕರು ಯೋಚಿಸುವುದು ಅಗತ್ಯವಿತ್ತು.

ಸಿದ್ದರಾಮಯ್ಯ ಎರಡನೆಯ ಬಾರಿ ಸಿಎಂ ಸ್ಥಾನ ವಹಿಸಿಕೊಳ್ಳುತ್ತಿದ್ದಾರೆ. ಡಿ.ಕೆ. ಶಿವಕುಮಾರ್ ಇಬ್ಬರು ಒಂದೊಂದು ರಂಗದಲ್ಲಿ ಅನುಭವಿಗಳು, ಸಮರ್ಥರು ಎನ್ನುವುದು ಯಾರೂ ಅಲ್ಲಗೆಳೆಯುವಂತಿಲ್ಲ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಇಬ್ಬರೂ ದುಡಿದಿದ್ದಾರೆ. ಹಾಗೇ ಇನ್ನೂ ಅನೇಕ ನಾಯಕರು, ಸಾವಿರಾರು ಕಾರ್ಯಕರ್ತರ ಪರಿಶ್ರಮ ಇದರ ಹಿಂದಿದೆ ಎನ್ನುವುದನ್ನು ಮರೆಯಬಾರದು. ಅನುಭವಿ ಸಾಮಾಜಿಕ ಕಳಕಳಿ ಇರುವ ಸಿದ್ದರಾಮಯ್ಯನವರ ಸಾರಥ್ಯದಲ್ಲಿ ಇಡೀ ಸಚಿವ ಸಂಪುಟ ಜನತೆಯ ನಿರೀಕ್ಷೆಗೆ ಅನುಗುಣವಾಗಿ ಜನತೆಗೆ ಮತ್ತು ರಾಜ್ಯಕ್ಕೆ ನ್ಯಾಯ ಒದಗಿಸುವಂತೆ ಕರ್ತವ್ಯ ನಿರ್ವಹಿಸಲಿ ಎಂದು ಎಲ್ಲರೂ ಆಶಿಸೋಣ, ಹಾರೈಸೋಣ.

ಈ ಸರಕಾರದ ಮುಂದೆ ಹಲವಾರು ಗಂಭೀರ ಸವಾಲುಗಳಿವೆ, ಕರ್ತವ್ಯಗಳಿವೆ. ಬಿಜೆಪಿ ನಾಡಿನ ಸಾಮರಸ್ಯದ ಬದುಕಿಗೆ ಉಂಟು ಮಾಡಿರುವ ಹಾನಿಯನ್ನು ಸರಿಪಡಿಸಿ ಜನತೆಯಲ್ಲಿ ಪರಸ್ಪರ ವಿಶ್ವಾಸ, ನಂಬಿಕೆ ಬಲಗೊಳಿಸಬೇಕು. ಕೋಮುವಾದದ ನಂಜಿನಿಂದ ವಿಷಮಯಗೊಳಿಸಿರುವ ಶಿಕ್ಷಣ, ಸಾಂಸ್ಕೃತಿಕ ಪರಿಸರವನ್ನು ವಿಷಮುಕ್ತಗೊಳಿಸಬೇಕು. ಹಾದಿ ತಪ್ಪಿರುವ ಆರ್ಥಿಕತೆ, ಆಡಳಿತವನ್ನು ನಾಗರಿಕರ ಪರವಾಗಿಸಬೇಕು, ಸರಿ ಹಳಿಗೆ ತರಬೇಕು. ರಾಜ್ಯಕ್ಕೆ ಸಲ್ಲಬೇಕಾದ ಸಂಪನ್ಮೂಲದ ನ್ಯಾಯ ಸಮ್ಮತ ಪಾಲು ಪಡೆಯಲು ಹೋರಾಡಬೇಕು. ನರಕ ಸದೃಶ್ಯಗೊಳಿಸಿರುವ ಶ್ರಮಿಕರ ಜೀವನಕ್ಕೆ ಪರಿಹಾರ ನೀಡಬೇಕು. ವಿರೂಪಗೊಳಿಸಲಾದ ಸಾಮಾಜಿಕ ನ್ಯಾಯ ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಅನುಷ್ಠಾನಗೊಳ್ಳಬೇಕು. ತಾನೇ ನೀಡಿದ ಭರವಸೆಗಳನ್ನು ಈಡೇರಿಸಬೇಕು. ಹೀಗೆ ಹಲವು ಹನ್ನೊಂದು ಮಹಾ ಕಾರ್ಯಭಾರಗಳು ಈ ಸರಕಾರದ ಮುಂದಿವೆ. ಮೇಲಾಗಿ, ಮುಂದಿನ ವರ್ಷ ಬರಲಿರುವ ಸಂಸತ್ತಿನ ಚುನಾವಣೆಯಲ್ಲಿ ಕೋಮುವಾದಿ ಫ್ಯಾಶಿಸ್ಟ್ ಮನೋಭಾವದ ಬಿಜೆಪಿಯನ್ನು ಅಧಿಕಾರದಿಂದ ತೊಲಗಿಸಲು ಅಗತ್ಯವಾದ ರಾಜಕೀಯ ಸನ್ನದ್ಧತೆ, ಮುತುವರ್ಜಿಗಳೂ ಅವಶ್ಯಕ ಇವೆ. ಪ್ರಮಾಣ ವಚನದ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಹಾಗೂ ಬಿಜೆಪಿಯೇತರ ಪಕ್ಷಗಳ ಮುಖ್ಯಮಂತ್ರಿಗಳು, ಎಡ ಪಕ್ಷಗಳ ಹಾಗೂ ಇತರ ನಾಯಕರುಗಳನ್ನು ಆಹ್ವಾನಿಸಿರುವುದು ಸ್ವಾಗತಾರ್ಹ. ಕರ್ನಾಟಕದಲ್ಲಿ ಜನತೆ ನೀಡಿದ ತೀರ್ಪಿನ ಸಂದೇಶ ದೇಶದ ಜನತೆಗೆ ತಲುಪಿಸಲು ಮಾಡಿದ ಪ್ರಯತ್ನ ಮಹತ್ವದ್ದು.

ಈ ಸರಕಾರದ ಕಾರ್ಯ ವೈಖರಿ, ಸಾಗುವ ಹಾದಿಯ ಬಗ್ಗೆ ಜನತೆ ಎಚ್ಚರ ಇರಲೇಬೇಕು. ಕಾಂಗ್ರೆಸ್ ಪಕ್ಷ ಹುಟ್ಟಿಸಿರುವ ನಿರೀಕ್ಷೆ, ಕೊಟ್ಟ ಭರವಸೆ ಈಡೇರಿಸಲು ತನ್ನ ಎಂದಿನ ಉದಾರೀಕರಣ ಆರ್ಥಿಕತೆಯ ನೀತಿಗಳ ಜಾಡನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ ಎಂಬುದು ಮರೆಯದಿರೋಣ. ಈ ಸರಕಾರ ಅದರತ್ತ ದಿಟ್ಟ ಹೆಜ್ಜೆ ಇಡುವುದೇ?

ಗ್ಯಾರಂಟಿಗಳ ಬಗ್ಗೆ ಬಿಜೆಪಿಗೇಕೆ ಅತ್ಯವಸರ?

ಎಸ್.ವೈ. ಗುರುಶಾಂತ್

ಈ ವಾರ

'ಕಾಂಗ್ರೆಸ್ ನೀಡಿರುವ ಗ್ಯಾರಂಟಿಗಳು ಜಾರಿಯಾಗೋದು ಯಾವಾಗ?'

'ಗ್ಯಾರಂಟಿಗಳ ಬಗ್ಗೆ ಏನು ಗ್ಯಾರಂಟಿ?'

'ಸರ್ಕಾರ ಮಾಡೋದೇ ಗ್ಯಾರಂಟಿ ಇಲ್ಲ, ಇನ್ನು ಕೊಟ್ಟ ಗ್ಯಾರಂಟಿಗಳಿಗೆ ಏನ್ ಗ್ಯಾರಂಟಿ?'

ಇಂತಹ ಮಾತು, ಹೇಳಿಕೆಗಳು ಚುನಾವಣಾ ಫಲಿತಾಂಶ ಹೊರ ಬಿದ್ದ ಕೂಡಲೇ ಪ್ರತಿದಿನವೂ ಕೇಳಿ ಬರುತ್ತಿವೆ. ಅವು ಬಹುತೇಕ ಬಿಜೆಪಿ ಯವರ ಬಾಯಲ್ಲೇ ಕೇಳಿದವು. ಕಾಂಗ್ರೆಸ್ ಪಕ್ಷ ಚುನಾವಣಾ ಸಮಯದಲ್ಲಿ ನೀಡಿದ ಐದು ಗ್ಯಾರಂಟಿಗಳು ಹೆಚ್ಚಿನ ಮತ ತರಲು ಒಂದು ಬಹು ಮುಖ್ಯ ಕಾರಣ ಎನ್ನಲಾಗುತ್ತಿದೆ. ಸೋಲಿನ ಹತಾಶೆಯಲ್ಲಿರುವ ಬಿಜೆಪಿ ಗ್ಯಾರಂಟಿ ಕೇಳುವ ಮಾತುಗಳಿಂದ ಜನರು ಕಾಂಗ್ರೆಸ್ ಗೆ ವಿರೋಧವಾಗಿ, ತಮ್ಮ ಪರವಾಗಿ ಬದಲಾಗುತ್ತಾರೆ ಎಂದು ನಂಬಿದಂತಿದೆ! ಹೊಸ ಸರಕಾರ ನಿಶ್ಚಿತವಾದ ನಂತರ 10ಕೆ.ಜಿ. ಉಚಿತವಾಗಿ ಅಕ್ಕಿ ನೀಡುವುದು, 200 ಯೂನಿಟ್ ವಿದ್ಯುತ್ ಉಚಿತ, ನಿರುದ್ಯೋಗಿ ಯುವಜನರಿಗೆ ರೂ.2000 ನಿರುದ್ಯೋಗ ಭತ್ಯೆ, ಗೃಹಿಣಿಗೆ ರೂ. 3000 ಸಹಾಯಧನ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಹೀಗೆ ಕೂಡಲೇ ನೀಡಬೇಕು.ಜಾರಿ ಮಾಡಲು ಇನ್ನೇನು ಪ್ರಾಬ್ಲಂ ಎನ್ನುವಂತೆ ಲೇವಡಿ ಮಾಡಿ ಪ್ರಚಾರ ಮಾಡಲಾಯಿತು. ಅದರ ಪರಿಣಾಮ ರಾಜ್ಯದ ಕೆಲವೆಡೆ 'ಆ ಹಿಂದಿನ ತಿಂಗಳ ವಿದ್ಯುತ್ ಬಿಲ್ ಕಟ್ಟುವುದಿಲ್ಲ' ಎಂದು ತಕರಾರು ತೆಗೆಯುವಲ್ಲಿಯೂ ಆದಂತಿದೆ. ಆದರೆ ಬಿಜೆಪಿಯ ವಾದ ವೈಖರಿಯನ್ನು ಗಮನಿಸಿದರೆ ಜನಸಾಮಾನ್ಯರಿಗೆ ಪರಿಹಾರ ಬೇಗನೆ ತಲುಪಲಿ ಎನ್ನುವುದಕ್ಕಿಂತ ಜನತೆಗೆ ಒಂದಿಷ್ಟು ಪರಿಹಾರ ಕಲ್ಪಿಸಲು ಇಚ್ಚಿಸಿದ ಸರ್ಕಾರವನ್ನು ಟೀಕಿಸುವುದು ಒಂದು ಕಡೆ ಯಾದರೆ, ಜೊತೆಗೆ ಇಂತಹ ಯೋಜನೆಗಳು ಅನವಶ್ಯಕ ಮತ್ತು ಹಾನಿಕಾರಕ ಎನ್ನುವ ಬಹುದೊಡ್ಡ ಪ್ರಚಾರ ಮತ್ತೊಂದು ಕಡೆ. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸರಕಾರ ಇದಕ್ಕೆ ಮಾಡುವ ವೆಚ್ಚ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ ಮತ್ತು ಸಾಲದ ಬಲೆಯಲ್ಲಿ ನೂಕುತ್ತದೆ ಎಂದು ಇನ್ನೊಂದು ಕಡೆ ವಾದಿಸುತ್ತಿದ್ದಾರೆ. ಒಟ್ಟು ಸಾರಾಂಶದಲ್ಲಿ ಬಿಜೆಪಿ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಯವರು ಚುನಾವಣೆಗೂ ಮೊದಲು ಪುಕ್ಕಟೆ ಯೋಜನೆಗಳನ್ನು ನಿಲ್ಲಿಸಬೇಕು ಎಂದೇ ಹೂಂಕರಿಸಿದ್ದರು. ಆದರೆ ಅದೇ ನರೇಂದ್ರ ಮೋದಿಯವರು ಕಾಂಗ್ರೆಸ್ಸಿನ ಪ್ರಣಾಳಿಕೆ ಬಿಡುಗಡೆಯಾದ ಮರು ದಿನವೇ ತಾವು ಸಹ ಅನೇಕ ಪುಕ್ಕಟೆ ನೀಡುವ ಯೋಜನೆಗಳನ್ನ ಪ್ರಕಟಿಸಿದ್ದು ವಿಚಿತ್ರವೇ ಆಗಿತ್ತು. ಇದನ್ನು ಬೊಮ್ಮಾಯಿವರು ಮತ್ತು ಬಿಜೆಪಿ ನಾಯಕರು ಮರೆತು ಬಿಟ್ಟಿದ್ದಾರೆ.

ವಿಚಿತ್ರವೆಂದರೆ, ಬಿಜೆಪಿಯ ಈ ನಾಯಕರು ನರೇಂದ್ರ ಮೋದಿ ಯವರು 'ಎಲ್ಲರ ಖಾತೆಗೆ 15 ಲಕ್ಷ ರೂಪಾಯಿ' ಹಾಕುವ ಮತ್ತು ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಿ 9 ವರ್ಷಗಳು ಕಳೆದಿದ್ದರೂ ಅವನ್ನೇಕೆ ಇನ್ನೂ ಜಾರಿ ಮಾಡಲಿಲ್ಲ ಎಂದು ಕೇಳಲಿಲ್ಲ. ಸಾರ್ವಜನಿಕವಾಗಿಯಾದರೂ ಹೋಗಲಿ ಖಾಸಗಿ ಆದರೂ ಪ್ರಧಾನಿಗಳಿಗೆ ಒತ್ತಾಯಿಸಿದ್ದರೆ ಅದಕ್ಕೊಂದು ಅರ್ಥ ಇರುತ್ತಿತ್ತು. ಅದಕ್ಕಿಲ್ಲದ ಅವಸರ ಸಿದ್ಧರಾಮಯ್ಯ. ನವರು ಅಧಿಕಾರ ಪ್ರಮಾಣ ವಚನ ಸ್ವೀಕರಿಸುವ ಮೊದಲೇ ಬಿಜೆಪಿ ವಾದಿಸುತ್ತಿರುವುದರ ಅರ್ಥವೇನು? ಒಣ ರಾಜಕೀಯ ಅಲ್ಲದೆ ಬೇರೇನು ಕಾಣಿಸುವುದಿಲ್ಲ.

ಮೂಲತಃ ಬಿಜೆಪಿಗೆ ಬೆಲೆ ಏರಿಕೆ, ನಿರುದ್ಯೋಗ, ಜೀವನ ನಿರ್ವಹಣೆಯ ವೆಚ್ಚಗಳ ದುಬಾರಿ ಯಂತಹ ಸಮಸ್ಯೆಗಳು, ಸಂಕಷ್ಟದಲ್ಲಿರುವ ಜನಸಾಮಾನ್ಯರಿಗೆ ಏನಾದರೂ ಪರಿಹಾರ ಒದಗಿಸಿಕೊಡಬೇಕು ಎನ್ನುವ ಕಿಂಚಿತ್ತು ಕಾಳಜಿ ಇಲ್ಲ. 'ಈ ಗ್ಯಾರಂಟಿ ಯೋಜನೆಗೆ 50–60 ಸಾವಿರ ಕೋಟಿ ರೂಪಾಯಿಗಳು ಖರ್ಚಾಗುತ್ತವೆ, ಅಭಿವೃದ್ಧಿಗೆ ಹಣ ಎಲ್ಲಿಂದ ಬರುತ್ತದೆ' ಎಂದು ಬೊಬ್ಬೆ ಹೊಡೆಯುವ ಈ ನಾಯಕರು ಇದೇ ಬಿಜೆಪಿಯ ಕೇಂದ್ರ ಸರ್ಕಾರ ಕಾರ್ಪೊರೇಟ್ ಕಂಪನಿಗಳಿಗೆ 10 ಲಕ್ಷಕ್ಕೂ ಅಧಿಕ ಕೋಟಿ ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿಲ್ಲವೇ?! ಅದನ್ನು ಯಾಕೆ ಪ್ರಶ್ನಿಸುವುದಿಲ್ಲ? ಸರಕಾರದ ಹಣ ಹಾಳಾಗುತ್ತಿದೆ ಎಂದು ಕೂಗಾಡುವ ಇವರು ಈ ಸರಕಾರದ ಹಣ ಎನ್ನುವುದು ಯಾರದ್ದು? ಅದು ಜನಸಾಮಾನ್ಯರೇ ಕಟ್ಟಿದ ತೆರಿಗೆಯ ಹಣ ಅಲ್ಲವೇ? ಆರ್ಥಿಕ ಶಿಸ್ತು ಇರಬೇಕು ಎನ್ನುವುದನ್ನು ಗಮನದಲ್ಲಿರಿಸಿ ಸಂಕಟದಲ್ಲಿರುವವರಿಗೆ ಅವರ ಹಣದಿಂದಲೇ ನೆರವು ಕೊಟ್ಟರೆ ತಪ್ಪೇನಿದೆ? ನಿಜ, ಉದಾರಿಕರಣದ ನೀತಿಗಳನ್ನು ಅನುಸರಿಸುತ್ತಿರುವ ಕಾಂಗ್ರೆಸ್–ಬಿಜೆಪಿ ಸರ್ಕಾರಗಳು ಜನತೆಯ ಜೀವನದ ಮೂಲ ಪ್ರಶ್ನೆಗಳನ್ನು ಇತ್ಯರ್ಥ ಗೊಳಿಸಲು ಕನಿಷ್ಠ ಪರಿಹಾರ ನೀಡಲು ಪ್ರಯತ್ನಿಸುವುದಿಲ್ಲ ಎನ್ನುವ ವಾಸ್ತವೂ ಇದೆ. ಹೇಗೂ ಅಧಿಕಾರಕ್ಕೆ ಬರಲು ಜನಪ್ರಿಯ ಅಥವಾ ಜನ ಮರಳು ಯೋಜನೆಗಳನ್ನು ಪ್ರಕಟಿಸುವುದು ಇತ್ತೀಚಿನ ದಿನಗಳಲ್ಲಿ ಕೆಲವು ಸರ್ಕಾರಗಳ ಅಭ್ಯಾಸವಾಗಿದೆ ಎನ್ನುವುದನ್ನು ಗಮನಿಸುತ್ತಲೇ ನೆರವು ಅತ್ಯಗತ್ಯ ಎನ್ನುವುದನ್ನು ಮರೆಯಬೇಕಿಲ್ಲ.

ಜನಸಾಮಾನ್ಯರಿಗೆ ಅಗತ್ಯವಿರುವ ಎಲ್ಲಾ ರೇಷನ್–ಪಡಿತರ ವಸ್ತುಗಳನ್ನು ಉಚಿತವಾಗಿ, ಕೆಲವು ವಿಭಾಗಗಳಿಗೆ ರಿಯಾಯಿತಿಯಾಗಿ ನೀಡಬೇಕು. ಉದ್ಯೋಗ ವಂಚಿತರಾಗಿ, ಉದ್ಯೋಗದ ಸಲುವಾಗಿ ಕಾದು ಕುಳಿತಿರುವ ನಿರುದ್ಯೋಗಿಗಳಿಗೆ ಕನಿಷ್ಠ ಆತ್ಮವಿಶ್ವಾಸ ತುಂಬಿಸಲು ನಿರುದ್ಯೋಗ ಭತ್ಯೆ ನೀಡಬೇಕೆಂದು ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐ ನಂತಹ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಯುವಜನ ಚಳುವಳಿಗಳು ಅನೇಕ ದಶಕಗಳಿಂದ ಹೋರಾಡುತ್ತಾ ಬಂದಿವೆ. ಹಿಂದೆ ಕಾಂಗ್ರೆಸ್ ಅಧಿಕಾರದಲ್ಲಿರುವ ಹಲವು ದಶಕಗಳಲ್ಲೂ ಬೇಡಿಕೆಯನ್ನು ನಿರಾಕರಿಸುತ್ತಲೇ ಬಂದಿತ್ತು. ಈಗಲಾದರೂ ನಿರುದ್ಯೋಗ ಭತ್ಯೆ ನೀಡುವ ಸರ್ಕಾರದ ಕ್ರಮ ಸ್ವಾಗತಾರ್ಹ. ಅದು ಎಲ್ಲರಿಗೂ ನೀಡುವಂತಾಗಬೇಕು.

ಒಟ್ಟಾರೆ, ಜನತೆಯ ಸಂಕಷ್ಟಗಳಿಗೆ ಪರಿಹಾರದ ನೆರವು ಒದಗಿಸುತ್ತಾ, ಜೊತೆಯಲ್ಲೇ ಆತ್ಮವಿಶ್ವಾಸ ಉಂಟುಮಾಡುವುದು ಮೂಲಭೂತ ಪ್ರಶ್ನೆಗಳನ್ನು ಪರಿಹರಿಸುವ ಕಾರ್ಯದೊಂದಿಗೆ ನಡೆಯಬೇಕು. ಇದೀಗ ಹತ್ತು ಜನರ ಮಂತ್ರಿಮಂಡಲ ಅಸ್ತಿತ್ವಕ್ಕೆ ಬಂದಿದೆ, ನೋಡೋಣ.

"ಡಬ್ಲ್ಯುಎಫ್ಐ ಮುಖ್ಯಸ್ಥ ಬಿಜೆಪಿ ಸಂಸದನನ್ನು ಬಂಧಿಸಿ" ದೇಶಾದ್ಯಂತ ಸಾಮೂಹಿಕ ಸಂಘಟನೆಗಳ ಪ್ರತಿಭಟನಾ ದಿನಾಚರಣೆ



ಲೈಂಗಿಕ ಅಪರಾಧದದ ಆರೋಪಿಗಳಾದ ಭಾರತ ಕುಸ್ತಿ ಫೇಡರೇಷನ್ ಅಧ್ಯಕ್ಷ ಮತ್ತು ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಮತ್ತು ಹರಿಯಾಣದ ಮಂತ್ರಿ ಸಂದೀಪ್ ಸಿಂಗ್‌ರನ್ನು ಬಂಧಿಸಬೇಕು ಎಂದು ಮೇ 18ರಂದು ದೇಶಾದ್ಯಂತ ಪ್ರತಿಭಟನಾ ದಿನಾಚರಣೆ ನಡೆಸಲಾಗಿದೆ. ಎಐಕೆಎಸ್, ಸಿಐಟಿಯು, ಎಐಎಡಬ್ಲ್ಯುಯು, ಎಐಡಿಬ್ಲ್ಯುಎ, ಎಸ್ಎಫ್ಐ ಮತ್ತು ಡಿವೈಎಫ್ಐ ಸಂಘಟನೆಗಳ ಕರೆಯ ಮೇರೆಗೆ ದೇಶಾದ್ಯಂತ ಕಾರ್ಮಿಕರು, ರೈತರು, ಕೃಷಿಕೂಲಿಕಾರರು, ಮಹಿಳೆಯರು, ವಿದ್ಯಾರ್ಥಿ–ಯುವಜನರು ಇದರಲ್ಲಿ ಭಾಗವಹಿಸಿದರು. ದಿಲ್ಲಿಯ ಜಂತರ್ ಮಂತರ್‌ನಲ್ಲಿ ಎಐಕೆಎಸ್‌ನ ಉಪಾಧ್ಯಕ್ಷ ಹನ್ನನ್ ಮೊಲ್ಲ ಮತ್ತು ಇತರ ಸಾಮೂಹಿಕ ಸಂಘಟನೆಗಳ ಮುಖಂಡರು ಅಲ್ಲಿ ಮೂರು ವಾರಕ್ಕೂ ಹೆಚ್ಚು ಸಮಯದಿಂದ ಧರಣಿ ಕುಳಿತಿರುವ ಮಹಿಳಾ ಕುಸ್ತಿಪಟುಗಳಿಗೆ ಬೆಂಬಲವಾಗಿ ಮಾತಾಡುತ್ತ ಕೂಡಲೇ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯದಲ್ಲೂ ಹಲವು ಕಡೆಗಳಲ್ಲಿ ಪ್ರತಿಭಟನೆಗಳು ನಡೆದಿರುವ ವರದಿಗಳು ಬಂದಿವೆ.

ಮಂಡ್ಯ:

ನಗರದಲ್ಲಿ ಜಿಲ್ಲಾಧಿಕಾರಿ ಕಛೇರಿ ಎದುರು ನಡೆದ ಪ್ರತಿಭಟನೆಯಲ್ಲಿ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ಪ್ರಾಂತ ರೈತ ಸಂಘ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ, ಸಿಐಟಿಯು, ಎಸ್ಎಫ್ಐ ಮತ್ತು ಡಿವೈಎಫ್ಐ ಕಾರ್ಯಕರ್ತರು ಭಾಗಿಯಾಗಿದ್ದರು. ಜೆಎಂಎಸ್‌ನ ಸಿ. ಕುಮಾರಿ ಮಾತನಾಡಿ, ಒಲಿಂಪಿಂಕ್ ಪದಕ ವಿಜೇತರು, ವಿಶ್ವ ಚಾಂಪಿಯನ್ ಕುಸ್ತಿ ಪಟುಗಳು ಸೇರಿದಂತೆ ಕ್ರೀಡಾಪಟುಗಳು 2023 ಏಪ್ರಿಲ್ 24ರಿಂದ ದೆಹಲಿಯಲ್ಲಿ ಅನಿರ್ಧಿಷ್ಟಾವಧಿ ಪ್ರತಿಭಟನೆ ನಡೆಸಿ, ಪೋಲೀಸ್ ದೂರು ನೀಡಿದ್ದರೂ ಎಫ್ ಐ ಆರ್ ದಾಖಲಿಸಿರಲಿಲ್ಲ. ಸುಪ್ರೀಕೋರ್ಟ್ ಮಧ್ಯ ಪ್ರವೇಶದ ನಂತರವಷ್ಟೇ ಎಫ್ ಐ ಆರ್ ದಾಖಲಾಗಿದೆ. ಇಷ್ಟಾದರೂ ಆರೋಪಿಗಳನ್ನು ಬಂಧಿಸಿಲ್ಲ ಎಂದು ಆರೋಪಿಸಿದರು.

ಮಳವಳ್ಳಿ:

ಮಂಡ್ಯ ಜಿಲ್ಲೆಯ ಮಳವಳ್ಳಿ ಪಟ್ಟಣದ ಅನಂತ್ ವೃತ್ತದ ಬಳಿ ಮೋಂಬತ್ತಿ

➚





ಜನಾಂಗವಾದ, ಜಾತಿವಾದ ಮತ್ತು ಜಾಗತಿಕ ಆಧಿಪತ್ಯ: ಸಾವರ್ಕರ್ 'ಹಿಂದುತ್ವ'ದ ಮೂಲಾಂಶಗಳು.......

ಪುಟ 2 ರಿಂದ

ಜನಾಂಗದ ಪರಿಶುದ್ಧತೆಯನ್ನು ಕಾಪಾಡಿಕೊಂಡು ಬಂದಿದೆ ಎನ್ನುತ್ತ ಹೀಗೆ ಬರೆಯುತ್ತಾರೆ:

"ಈ ಜಾತಿಗಳನ್ನು ಸರಿಯಾದ ದೃಷ್ಟಿಕೋನದಲ್ಲಿ ಅರ್ಥಮಾಡಿಕೊಳ್ಳುವಲ್ಲಿ ಹಾಗೂ ಕಾಣುವಲ್ಲಿ ನೀವು ಸಂಪೂರ್ಣ ವಿಫಲವಾಗಿರುವುದರಿಂದ, ನಮ್ಮ ಜನಾಂಗದೊಳಗೆ ಸಮಾನ ರಕ್ತ ಹರಿಯುವುದನ್ನು ನಿರ್ಬಂಧಿಸಿದೆ ಎಂದು ನೀವು ಒತ್ತಿ ಹೇಳುವ ಜಾತಿಗಳೇ ಹೆಚ್ಚು ನಿಜವಾಗಿ ಹಾಗೂ ಹೆಚ್ಚು ಪರಿಣಾಮಕಾರಿಯಾಗಿ ನಮ್ಮದಲ್ಲದ ವಿದೇಶಿ ರಕ್ತವನ್ನು ತಡೆದಿವೆ... . ಒಟ್ಟಾರೆಯಾಗಿ ಈ ಜಾತಿ ಪದ್ಧತಿ ಮಾಡುತ್ತಿರುವುದು ಏನೆಂದರೆ ನಮ್ಮ ಸಂತ ಸದೃಶ ಹಾಗೂ ದೇಶಪ್ರೇಮಿ ಶಾಸನಕಾರರು ಮತ್ತು ರಾಜರುಗಳು ನಂಬಿದಂತೆ ಮತ್ತು ಸರಿಯಾಗಿಯೇ ನಂಬಿದಂತೆ– ಸಮೃದ್ಧವಾಗಿರುವ ಹಾಗೂ ಔನ್ನತ್ಯವುಳ್ಳ ಯಾವುದನ್ನೂ ಹಾಳುಗೆಡವದೆ ಮತ್ತು ಕೀಳಾಗಿಸದೆ ಗೊಡ್ಡಾದ ಹಾಗೂ ಸತ್ವಹೀನವಾದುದೆಲ್ಲವನ್ನೂ ಫಲವತ್ತಾಗಿಸಲು ಹಾಗೂ ಪುಷ್ಟೀಕರಿಸಲು ಉನ್ನತ ಹರಿವನ್ನು ನಿಯಂತ್ರಿಸುವುದೇ ಆಗಿದೆ.

ಸ್ವಾರಸ್ಯಕರ ಸಂಗತಿಯೆಂದರೆ, ಜಾತಿವಾದದ ಪರವಾಗಿ ದೃಢವಾದ ನಿಲುವನ್ನು ಹೊಂದಿರುವ ಸಾವರ್ಕರ್, ಹಿಂದೂ ಸಮಾಜದ ಅಸ್ಪೃಶ್ಯರ ಸಾಮಾಜಿಕ ಸ್ಥಾನಮಾನವನ್ನು ಮೇಲೆತ್ತಬೇಕೆಂದು ಕೂಡ ಪ್ರತಿಪಾದಿಸಿದರು. ಅಸ್ಪೃಶ್ಯತೆಯ ವಿರುದ್ಧ ಕಾರ್ಯಕ್ರಮಗಳನ್ನು ಸಂಘಟಿಸಿದರು, ಕೆಲವು ವೇಳೆ ಹಿಂದೂ ದೇವಸ್ಥಾನಗಳಿಗೆ ಪ್ರವೇಶ ನೀಡಬೇಕೆಂದು ಮತ್ತು ಬಾವಿಗಳು ಹಾಗೂ ಕೆರೆಗಳಲ್ಲಿನ ನೀರನ್ನು ಹಂಚಿಕೊಳ್ಳಲು ಅನುವು ಮಾಡಿಕೊಡಿ ಎಂದೂ ಇತರರೊಂದಿಗೆ ವಾದಿಸುತ್ತಿದ್ದರು. ಅದು ಅವರ ಸಮಾನತಾವಾದದ ಧೋರಣೆ ಅಥವಾ ಅಸ್ಪೃಶ್ಯರಿಗೆ ಸಮಾನತೆಯನ್ನು ಕಲ್ಪಿಸಬೇಕು ಎಂಬ ಪ್ರೇರಣೆಯಿಂದಾಗಿ ಅಲ್ಲ; ಬದಲಿಗೆ ಹೆಚ್ಚು ಸಾಮಾಜಿಕ ಸಮಾನತೆಯನ್ನು ಖಾತರಿಪಡಿಸುತ್ತಿರುವ ಇಸ್ಲಾಂ ಮತ್ತು ಕ್ರೈಸ್ತ ಮತಕ್ಕೆ ಆ ವಿಭಾಗದ ಜನರು ಬಹಳ ಸಂಖ್ಯೆಯಲ್ಲಿ ಮತಾಂತರವಾಗುತ್ತಿದ್ದು ಅದು ಹಿಂದೂ ಸಮುದಾಯಕ್ಕೆ ಸಾಂಖ್ಯಿಕವಾಗಿ ಅಪಾಯಕಾರಿಯಾಗಿದೆ ಎಂಬ ಪ್ರಮುಖ ಕಾರಣದಿಂದಾಗಿಯಷ್ಟೆ.

ಅದೂ ಅಲ್ಲದೆ, ಅವರನ್ನು ಜಾತಿಬಾಹಿರರು ಎಂದು ಪರಿಗಣಿಸುತ್ತಿರುವುದರಿಂದ ಅವತ್ತಿನ 7 ಕೋಟಿ ಬಲಿಷ್ಠ 'ಹಿಂದೂ ಜನರ ಶಕ್ತಿ' 'ನಮ್ಮ' (ಮೇಲ್ಜಾತಿ ಹಿಂದೂಗಳ) ಪರವಾಗಿ ನಿಲ್ಲುವುದಿಲ್ಲ ಎಂಬುದನ್ನು ಸಾವರ್ಕರ್ ಅವರೇ ಒಪ್ಪಿಕೊಂಡಿದ್ದರು. ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರ ವಿರುದ್ಧ ಹಿಂದುತ್ವದ ಕಾಲಾಳುಗಳಾಗಿ ನಿಲ್ಲಲು ಅಸ್ಪೃಶ್ಯರ ಸೇವೆ ಹಿಂದುತ್ವಕ್ಕೆ ಬಹಳ ಅಗತ್ಯವಿದೆ ಎನ್ನುವುದನ್ನು ಸಾವರ್ಕರ್ ತಿಳಿದಿದ್ದರು. ಅಸ್ಪೃಶ್ಯರು ತಮ್ಮ ಜತೆಯಲ್ಲಿ ನಿಲ್ಲದಿದ್ದರೆ, ಅದು ಮೇಲ್ಜಾತಿ ಹಿಂದೂಗಳಿಗೆ ಬಹಳ ದೊಡ್ಡ ಬಿಕ್ಕಟ್ಟನ್ನು ತಂದೊಡ್ಡುತ್ತದೆ ಎಂದು ಸಾವರ್ಕರ್ ಹಿಂದುತ್ವ ಕಾರ್ಯಕರ್ತರನ್ನು ಎಚ್ಚರಿಸುತ್ತಿದ್ದರು. "ಅವರು ನಮ್ಮ ಅನುಕೂಲಕ್ಕೆ ಸಿಗದಿರುವುದಷ್ಟೇ ಅಲ್ಲ, ನಮ್ಮ 'ಮನೆ'ಯ ವಿಭಜನೆಗೆ ಸುಲಭ ಸಾಧನವಾಗುತ್ತಾರೆ ಮತ್ತು ಆ ಮೂಲಕ ಅವರು ನಮ್ಮ ಅಗಾಧ ಹಾನಿಗೆ ಕಾರಣರಾಗುತ್ತಾರೆ." ಎಂದು ಎಚ್ಚರಿಸಿದರು.

ಇದೇ ರೀತಿಯ ವ್ಯಥೆಯು ಹಿಂದುತ್ವದ ಮಹಾನ್ ಮುಖಂಡ ಹಾಗೂ ಸಾವರ್ಕರ್ ಅವರ ಮತ್ತೊಬ್ಬ ಸಮಕಾಲೀನರಾದ ಶ್ಯಾಮ ಪ್ರಸಾದ್ ಮುಖರ್ಜಿಯವರ ಚಿಂತನೆಗಳಲ್ಲಿ ಕೂಡ ಮರುಕಳಿಸುತ್ತದೆ. ಕೆಳ ಜಾತಿಗಳ ದೈಹಿಕ ಬಲ ಹಿಂದೂಗಳ ಬೆಂಬಲಕ್ಕೆ ಅಗತ್ಯವಿದೆ ಎಂಬುದನ್ನು ಅವರ ಈ ಭಾಷಣದಲ್ಲಿ ಸ್ಪಷ್ಟವಾಗಿ ನೋಡಬಹುದು:

"ಕೆಳಗಿನ ಜಾತಿಯವರು ಎನಿಸಿಕೊಳ್ಳುವ ಜನರು ಹಿಂದೂಗಳಲ್ಲಿ ಅದಮ್ಯ ಶಕ್ತಿವಂತರು ಹಾಗೂ ಎದೆಗಾರಿಕೆಯುಳ್ಳವರು ಎನ್ನುವುದನ್ನು ನಾವು ಮರೆಯಬಾರದು. ಬೇರೆಯವರಿಗಿಂತ ಹೆಚ್ಚಾಗಿ ಅವರಲ್ಲಿ ನಿಸ್ವಾರ್ಥ ಭಕ್ತಿ ಹಾಗೂ ಧರ್ಮಶ್ರದ್ಧೆಯ ವಾತಾವರಣದಲ್ಲಿ ಹಿಂದೂವಾದ ಭಾವೋದ್ರೇಕವನ್ನು ಉಂಟುಮಾಡುತ್ತದೆ ಮತ್ತು ಅಂಥವರನ್ನು ಸಾಮಾಜಿಕವಾಗಿ ಅಥವಾ ಆರ್ಥಿಕವಾಗಿ ದುರ್ಬಲಗೊಳಿಸುವುದೆಂದರೆ ಭಾರತದಲ್ಲಿ ಹಿಂದೂ ಕ್ರೋಢೀಕರಣದ ಬುಡಕ್ಕೇ ಕೊಡಲಿ ಏಟು ಕೊಟ್ಟಂತಾಗುತ್ತದೆ."

ಬಹಳ ಮುಖ್ಯವಾಗಿ, ಸಾವರ್ಕರ್ ತಮ್ಮ ಬದುಕಿನುದ್ದಕ್ಕೂ ಜಾತಿವಾದ ಹಾಗೂ ಮನುಸ್ಮೃತಿಯ ಅಥವಾ ಮನುವಾದದ ಒಬ್ಬ ಮಹಾನ್ ಆರಾಧಕರಾಗಿಯೇ ಉಳಿದುಕೊಂಡರು. 'ಮನುಸ್ಮೃತಿಯು ವೇದಗಳ ನಂತರ ಹೆಚ್ಚು ಪೂಜನೀಯವಾದುದು' ಎಂದು ಬಣ್ಣಿಸುತ್ತಿದ್ದರು.

ಹಿಂದುತ್ವದ ಸಾಮ್ರಾಜ್ಯವಾದಿ–ತೆರನ ಸಂಚು: ಹಿಂದೂಗಳು ಜಗತ್ತನ್ನು ಆಳಬೇಕು

ಸಾವರ್ಕರ್ ಹಿಂದುತ್ವವು ಇಡೀ ಜಗತ್ತನ್ನೇ ಆಳಬೇಕೆಂಬ ಪ್ರಬಲ ಸಾಮ್ರಾಜ್ಯವಾದಿ–ತೆರನ ಮಹತ್ವಾಕಾಂಕ್ಷೆಯನ್ನು ಹೊಂದಿತ್ತು. 'ಸ್ಪೈನ್, ಪೋರ್ಚುಗಲ್ ನಂತಹ ಸಣ್ಣ ದೇಶಗಳು ಇತಿಹಾಸದಲ್ಲಿ ಜಗತ್ತಿನ ಹಲವು ಭಾಗಗಳಲ್ಲಿ ಆಳ್ವಿಕೆ ಮಾಡಿರಬೇಕಾದರೆ, ಅತ್ಯಂತ ಶ್ರೇಷ್ಠರಾಗಿರುವ ಹಿಂದೂಗಳು ಏಕೆ ಜಗತ್ತನ್ನು ಆಳಬಾರದು?' ಎನ್ನುವುದು ಸಾವರ್ಕರ್ ಅವರ ವಾದವಾಗಿತ್ತು. ಇಡೀ ಜಗತ್ತನ್ನು ಆಳಬೇಕೆಂಬ ಹಿಂದೂ ಮಹತ್ವಾಕಾಂಕ್ಷೆಯನ್ನು ಬಹಿರಂಗವಾಗಿ ಘೋಷಿಸುತ್ತಾ ಸಾವರ್ಕರ್ ಅವರ ಪ್ರಬಂಧವು ಹೀಗೆ ಮುಕ್ತಾಯಗೊಂಡಿತ್ತು:

"ತಮ್ಮ ಕಾರ್ಯಾಚರಣೆಯ ನೆಲೆಯಾಗಿ, ತಮ್ಮ ಪಿತೃಭೂಮಿಯಾಗಿ, ತಮ್ಮ ಪುಣ್ಯಭೂಮಿಯಾಗಿ ತಮ್ಮ ಹಿಂದೆ ಅಂತಹ ಇತಿಹಾಸವನ್ನು ಇರಿಸಿಕೊಂಡ ಭಾರತದ ಇಪ್ಪತ್ತೆರಡು ಕೋಟಿ ಜನರು (ಭಾರತದ ಅಂದಿನ ಜನಸಂಖ್ಯೆ) ಒಂದೇ ರಕ್ತ ಮತ್ತು ಸಮಾನ ಸಂಸ್ಕೃತಿಯ ಬಂಧದೊಂದಿಗೆ ಒಗ್ಗೂಡಿದರೆ ಇಡೀ ಜಗತ್ತಿಗೆ ತಮ್ಮ ಷರತ್ತುಗಳನ್ನು ವಿಧಿಸಬಹುದು, ಅಂತಹ ಒಂದು ದಿನ ಬಂದಾಗ ಮಾನವ ಕುಲ ಆ ಶಕ್ತಿಯನ್ನು ಎದುರಿಸಬೇಕಾಗುತ್ತದೆ."

ಸಾವರ್ಕರರ ಹಿಂದುತ್ವವು ನಿಜಕ್ಕೂ ಭಾರತೀಯ ಸಮಾಜದ ಮೇಲೆ ಮೇಲ್ಜಾತಿಯ ಯಜಮಾನಿಕೆಯನ್ನು ಉಳಿಸಿಕೊಳ್ಳುವ ಸಲುವಾಗಿ ಹಿಂದೂ ಪ್ರತ್ಯೇಕತಾವಾದವನ್ನು ಆಕ್ರಾಮಕವಾಗಿ ಬೋಧಿಸಿದ ರಾಜಕೀಯ ಹಿಂದೂವಾದ. ಈ ಯಜಮಾನಿಕೆಯನ್ನು ಅಂತರ್ರಾಷ್ಟ್ರೀಯ ವಲಯಕ್ಕೂ ವಿಸ್ತರಿಸಲು ಅದು ಬಯಸುತ್ತದೆ. ಸಾವರ್ಕರರ ಹಿಂದುತ್ವ ಎಂಬ ಹೆಸರಿನ ಈ ಸರ್ವಾಧಿಕಾರಿ ಚಿಂತನೆಗಳಿಂದ ದಿಗಿಲುಗೊಂಡ, ಅವರ ಸಮಕಾಲೀನರಾದ ಬಿ.ಆರ್. ಅಂಬೇಡ್ಕರ್ ದನ್ನು ಈ ರೀತಿ ವ್ಯಾಖ್ಯಾನಿಸಲೇಬೇಕಾಯಿತು:

"ಹಿಂದ'ೂರಾಜ್ಯವ'ೀನಾದ'ರ'ೂ ವಾಸ್ತವಗೊಂಡರೆ, ಅದು ಈ ದೇಶಕ್ಕೆ, ಮಹಾ ಅನಾಹುತ ಎಂಬುದರಲ್ಲಿ ಸಂದೇಹವೇ ಇಲ್ಲ... ಅದು ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಕ್ಕೆ ಒಂದು ಪಿಡುಗು.. ... ಆ ಕಾರಣದಿಂದಾಗಿ ಅದು ಪ್ರಜಾಪ್ರಭುತ್ವಕ್ಕೆ ತಕ್ಕುದಾದುಲ್ಲ. ಹಿಂದೂರಾಜ್ಯವನ್ನು ಎಷ್ಟೇ ಬೆಲೆ ತೆತ್ತಾದರೂ ತಡೆಯಲೇಬೇಕು."

ಮೆರವಣಿಗೆ ನಡೆಸಿ ಪ್ರತಿಭಟನೆ ನಡೆಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಎನ್. ಎಲ್. ಭರತ್ ಮಾತನಾಡಿ ಮಹಿಳಾ ಕುಸ್ತಿಪಟುಗಳಿಗೆ ನ್ಯಾಯ ಒದಗಿಸುವಂತೆ ಒತ್ತಾಯಿಸಿದರು. ಸಿಐಟಿಯು ಮುಖಂಡ ಜಿ. ರಾಮಕೃಷ್ಣ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರು ಭಾಗಿಯಾಗಿದ್ದರು.

ತುಮಕೂರು:

ಸಿಐಟಿಯು, ಜೆಎಂಎಸ್ ಮತ್ತು ಕೆಪಿಆರ್ ಎಸ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ನಗರದ ಬಿಜಿಎಸ್ ವೃತ್ತದಲ್ಲಿ ನಡೆದ ಪ್ರತಿಭಟನೆಯಲ್ಲಿ ಟಿ.ಆರ್. ಕಲ್ಪನ, ಬಿ. ಉಮೇಶ್, ಚನ್ನಬಸವಣ್ಣ, ಎಸ್.ಕೆ. ಸುಬ್ರಮಣ್ಯ, ಸಾಮಾಜಿಕ ಹೋರಾಟಗಾರ ಚಂದ್ರು ಮುಂತಾದವರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.

ಹಾವೇರಿ:

ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಅವರ ನೇತೃತ್ವದಲ್ಲಿ ರಾಷ್ಟ್ರಪತಿ ಹಾಗೂ ಲೋಕಸಭಾ ಸ್ಪೀಕರ್ ಅವರಿಗೆ ಬರೆದ ಮನವಿ ಪತ್ರವನ್ನು ಹಾವೇರಿಯ ಉಪ ತಹಸಿಲ್ದಾರ್ ಅವರಿಗೆ ಸಲ್ಲಿಸಿದರು. ಡಿವೈಎಫ್ಐ, ಎಸ್ಎಫ್ಐ, ಸಿಐಟಿಯು ಜಿಲ್ಲಾ ಸಮಿತಿಗಳು ಜಂಟಿಯಾಗಿ ಮನವಿ ಪತ್ರ ಸಲ್ಲಿಸಿದರು. ಸಂಘಟನೆಗಳ ಜಿಲ್ಲಾ ಮುಖಂಡರಾದ ಕಾವ್ಯಾ ಹನಗೋಡಿಮಠ, ರಾಜು ಮಲ್ಲೂರು, ಐಶ್ವರ್ಯ ಕಹಾರ, ಮೇಘನಾ ಆರ್.ಕೆ., ರಜಿಯಾ, ವೀಣಾ ಬಡಿಗೇರ ಇತರರು ಭಾಗಿಯಾಗಿದ್ದರು.

ಸಂಡೂರು:


ತಾಲೂಕಿನ ಸಿಐಟಿಯು, ಕೆಪಿಆರ್ ಎಸ್, ಕರ್ನಾಟಕ ದೇವದಾಸಿ ಮಹಿಳೆಯರ ವಿಮೋಚನಾ ಸಂಘ, ಕರ್ನಾಟಕ ರಾಜ್ಯ ಮಸಣ ಕಾರ್ಮಿಕರ ಸಂಘಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ನಂತರ ತಹಸಿಲ್ದಾರ್ ಅವರ ಮುಖಾಂತರ ಪ್ರಧಾನ ಮಂತ್ರಿಯವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಈ ಎಲ್ಲಾ ಸಂಘಗಳ ಮುಖಂಡರು ಮತ್ತು ಕಾರ್ಯಕರ್ತರು ಭಾಗಿಯಾಗಿದ್ದರು.

ಕಲಬುರಗಿ:

ಜೆಎಂಎಸ್, ಸಿಐಟಿಯು, ಎಐಕೆಎಸ್, ಎಐಎಡ್ಬ್ಲ್ಯೂ, ಡಿವೈಎಫ್ ಐ, ಎಸ್ ಎಫ್ ಐ, ಮತ್ತು ಇತರ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗೆ ಮನವಿ ಪತ್ರ ಸಲ್ಲಿಸಲಾಯಿತು. ಡಾ. ಮೀನಾಕ್ಷಿ ಬಾಳಿ, ಶರಣಬಸಪ್ಪ ಮಮಶೆಟ್ಟಿ, ಎಂ.ಬಿ. ಸಜ್ಜನ್, ಭೀಮಶೆಟ್ಟಿ ಯಂಪಳ್ಳಿ, ಸಾಯಬಣ್ಣ ಗುಡುಬಾ ಮತ್ತಿರರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಮಂಗಳೂರು:

ನಗರದ ಕ್ಲಾಕ್ ಟವರ ಎದುರು ಪ್ರತಿಭಟನಾ ಪ್ರದರ್ಶನ ನಡೆಯಿತು. ಸಿಐಟಿಯು ಮುಖಂಡರಾದ ವಸಂತ ಆಚಾರಿ, ಸುನಿಲ್ ಕುಮಾರ್ ಬಜಾಲ್, ಕೆಪಿಆರ್ ಎಸ್ ನ ಕೃಷ್ಣಪ್ಪ ಸಾಲಿಯಾನ್, ಡಿವೈಎಫ್ ಐ ನ ಬಿ.ಕೆ. ಇಮ್ತಿಯಾಜ್, ಜೆಎಂಎಸ್ ನ ಜಯಂತಿ ಶೆಟ್ಟಿ ಮಾತನಾಡಿ ಮೋದಿ ಸರ್ಕಾರವು ಘಟನೆಯ ಪ್ರಮುಖ ಆರೋಪಿಗಳ ರಕ್ಷಣೆಗೆ ನಿಂತಿರುವುದನ್ನು ಖಂಡಿಸಿದರು. ಪ್ರತಿಭಟನೆಯಲ್ಲಿ ಜೆ. ಬಾಲಕೃಷ್ಣ ಶೆಟ್ಟಿ, ಯೋಗೀಶ್ ಜಪ್ಪಿನಮೊಗರು, ಸುಕುಮಾರ್, ಪದ್ಮಾವತಿ ಶೆಟ್ಟಿ, ಸದಾಶಿವದಾಸ್, ಸಂತೋಷ್ ಬಜಾಲ್, ನವೀನ್ ಕೊಂಚಾಡಿ, ಭಾರತಿ ಬೋಳಾರ ಮುಂತಾದವರು ಭಾಗವಹಿಸಿದ್ದರು.



ಜನಮತ 2023: ಶಾಕ್, ಅಚ್ಚರಿ ನೀಡಿದ ಕರ್ನಾಟಕ ಚುನಾವಣೆ

ತೀವ್ರ ಕುತೂಹಲ ಕೆರಳಿಸಿದ್ದ ಕರ್ನಾಟಕ ವಿಧಾನಸಭಾ ಚುನಾವಣೆಯ ಫಲಿತಾಂಶ ಹಲವು ಅಚ್ಚರಿಗಳನ್ನು, ಶಾಕ್‌ಗಳನ್ನು ನೀಡಿದೆ. ನಾನೇ ಗೆಲ್ಲೋದು ನನ್ನ ಬಿಟ್ರೆ ಬೇರೆ ಯಾರು ಗೆಲ್ತಾರೆ ಎಂದಿದ್ದ ಶಾಸಕ, ಸಚಿವರನ್ನು ಮನೆಕಡೆಗೂ ಕಳಿಹಿಸಿದ್ದಾರೆ. ಹಾಗಾದರೆ ಈ ಚುನಾವಣೆಯಲ್ಲಿ ಕಂಡ ಅಚ್ಚರಿಗಳೇನು? ಅಂಕಿಅಂಶಗಳು ಇಲ್ಲಿವೆ...

ಗುರುರಾಜ ದೇಸಾಯಿ

ಆಡಳಿತವನ್ನು ನಡೆಸುತ್ತಿದ್ದ ಬಿಜೆಪಿ ಸೋಲುಂಡು ಕಾಂಗ್ರೆಸ್ ಬಹುಮತವನ್ನು ಗಳಿಸಿದೆ. ಕಾಂಗ್ರೆಸ್ 135 ಸ್ಥಾನಗಳಲ್ಲಿ ಗೆಲುವು ದಾಖಲಿಸಿದರೆ, ಬಿಜೆಪಿ 66 ಕ್ಷೇತ್ರಗಳಲ್ಲಿ, ಜೆಡಿಎಸ್ 19 ಹಾಗೂ ಇತರರು 04 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದಾರೆ.

ಈ ಬಾರಿಯ ಚುನಾವಣೆಯಲ್ಲಿ ಶೇ.73ರಷ್ಟು ದಾಖಲೆಯ ಪ್ರಮಾಣದ ಮತದಾನವಾಗಿದೆ. ಕಾಂಗ್ರೆಸ್, 2018 ರಲ್ಲಿ ಶೇ.38ರಷ್ಟು ಮತಗಳನ್ನು ಪಡೆದಿದ್ದ ಕಾಂಗ್ರೆಸ್ ಈ ಬಾರಿಯ ಚುನಾವಣೆಯಲ್ಲಿ ಶೇ.43ರಷ್ಟು ಮತ ಗಳಿಕೆಯನ್ನು ಹೊಂದಿದ್ದು ಶೇ. 05 ರಷ್ಟು ಮತಪ್ರಮಾಣವನ್ನು ಹೆಚ್ಚಿಸಿಕೊಂಡಿದೆ. 2018ರಲ್ಲಿ ಬಿಜೆಪಿ ಶೇ.36 ರಷ್ಟು ಮತ ಗಳಿಕೆಯೊಂದಿಗೆ 104 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಈ ಬಾರಿ ಬಿಜೆಪಿ 38 ಸ್ಥಾನಗಳಲ್ಲಿ ಸೋತರು ಮತ ಪ್ರಮಾಣದಲ್ಲಿ ಯತಾಸ್ಥಿತಿಯನ್ನು ಕಾಯ್ದುಕೊಂಡಿದೆ. ಜೆಡಿಎಸ್ 06% ಮತ ಪ್ರಮಾಣವನ್ನು ಕಳೆದುಕೊಂಡಿದೆ.

ಇನ್ನೂ ವಲಯವಾರು ನೋಡುವುದಾದರೆ, ಅಲ್ಲಿಯೂ ಕಾಂಗ್ರೆಸ್ ಮೇಲುಗೈ ಸಾಧಿಸಿದೆ.

ಪ್ರದೇಶ	ಒಟ್ಟು ಕ್ಷೇತ್ರಗಳು	ಬಿಜೆಪಿ	ಕಾಂಗ್ರೆಸ್	ಜೆಡಿಎಸ್	ಇತರೆ
ಮೈಸೂರು ಕರ್ನಾಟಕ	57	5	36	14	2
ಕಿತ್ತೂರು ಕರ್ನಾಟಕ	50	16	33	1	0
ಕಲ್ಯಾಣ ಕರ್ನಾಟಕ	40	10	26	3	2
ಬೆಂಗಳೂರು	32	17	15	0	0
ಮಧ್ಯಕರ್ನಾಟಕ	26	5	19	1	0
ಕರಾವಳಿ ಕರ್ನಾಟಕ	19	13	6	0	0

ಇನ್ನೂ ಈ ಬಾರಿಯ ಚುನಾವಣೆಯಲ್ಲಿ ಹಲವು ಅಚ್ಚರಿಗಳನ್ನು ನಾವು ನೋಡಬಹುದು. ಅವುಗಳನ್ನು ಒಂದೊಂದಾಗಿ ನೋಡ್ತಾ ಹೋಗೋಣ. ಪಕ್ಷಾಂತರಿಗಳಿಗೆ ಮತದಾರ ಶಾಕ್ ನೀಡಿದ್ದು, 30 ಮಂದಿಯ ಪೈಕಿ 8 ಮಂದಿ ಮಾತ್ರ ಜಯಗಳಿಸಿದ್ದಾರೆ. ಅಥಣಿಯಲ್ಲಿ ಬಿಜೆಪಿಯಿಂದ ಕಾಂಗ್ರೆಸ್‌ಗೆ ಬಂದಿದ್ದ ಲಕ್ಷ್ಮಣ ಸವದಿ ಗೆಲುವು ಸಾಧಿಸಿದ್ದಾರೆ. ಅರಕಲಗೂಡಿನಲ್ಲಿ ಬಿಜೆಪಿಯಿಂದ ಕಾಂಗ್ರೆಸ್‌ಗೆ ಬಂದಿದ್ದ ಎ ಮಂಜು, ಕಾಗವಾಡದಲ್ಲಿ ಬಿಜೆಪಿಯಿಂದ ಕಾಂಗ್ರೆಸ್‌ಗೆ ಬಂದಿದ್ದ ರಾಜೂ ಕಾಗೆ ಅರಸೀಕೆರೆಯಲ್ಲಿ ಜೆಡಿಎಸ್ ನಿಂದ ಕಾಂಗ್ರೆಸ್‌ಗೆ ಬಂದಿದ್ದ ಶಿವಲಿಂಗೇಗೌಡ ಗುಬ್ಬಿಯಲ್ಲಿ ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಬಂದಿದ್ದ ಎಸ್ ಆರ್ ಶ್ರೀನಿವಾಸ್, ಹಗರಿಬೊಮ್ಮನಹಳ್ಳಿಯಲ್ಲಿ ಬಿಜೆಪಿಯಿಂದ ಜೆಡಿಎಸ್‌ಗೆ ಬಂದಿದ್ದ ನೇಮಿರಾಜನಾಯ್ಕ್, ಮೊಳಕಾಲ್ಮೂರಿನಲ್ಲಿ ಬಿಜೆಪಿಯಿಂದ ಕಾಂಗ್ರೆಸ್‌ಗೆ ಬಂದಿದ್ದ ಎನ್ ವೈ ಗೋಪಾಲಕೃಷ್ಣ ಮತ್ತು ಚಿಕ್ಕಮಗಳೂರಿನಲ್ಲಿ ಬಿಜೆಪಿಯಿಂದ ಕಾಂಗ್ರೆಸ್‌ಗೆ ಬಂದಿದ್ದ ಎಚ್ ಡಿ ತಮ್ಮಣ್ಣ ಗೆಲುವು ಸಾಧಿಸಿದ್ದಾರೆ.

ಬಿಜೆಪಿಯಿಂದ ಕಾಂಗ್ರೆಸ್ ಬಂದಿದ್ದ, ಜಗದೀಶ್ ಶೆಟ್ಟರ್, ಪುಟ್ಟಣ್ಣ ಬಾಬುರಾವ್ ಚಿಂಚನಸೂರ್, ಕಾಂಗ್ರೆಸ್ ನಿಂದ ಜೆಡಿಎಸ್ ಗೆ ಸೇರಿದ್ದ ರಘು ಆಚಾರ್, ತೇಜಸ್ವಿ ಪಟೇಲ್, ಎಲ್ ಎಲ್ ಘೋಟ್ನೆಕರ್, ಮನೋಹರ್ ತಹಶೀಲ್ದಾರ್, ಮೊಯ್ದಿನ್ ಬಾವಾ, ಸೌರಭ್ ಚೋಪ್ರಾ, ಅನಿಲ್ ಲಾಡ್ ಸೋಲುಕಂಡಿದ್ದಾರೆ.ಬಿಜೆಪಿಯಿಂದ ಜೆಡಿಎಸ್ ಸೇರ್ಪಡೆಯಾಗಿದ್ದ ಎಬಿ ಮಾಲಕರೆಡ್ಡಿ, ಆಯನೂರು ಮಂಜುನಾಥ್, ಭಾರತಿ ಶಂಕರ್, ಎನ್ ಆರ್ ಸಂತೋಷ್, ವೀರಭದ್ರಪ್ಪ ಹಾಲರವಿ, ದೊಡ್ಡಪ್ಪಗೌಡ ನರಿಬೋಳ, ಸೂರ್ಯಕಾಂತ್ ಸೋಲು ಕಂಡಿದ್ದಾರೆ.

ಬಿಜೆಪಿಗೆ ಸೋಲೇ ಇಲ್ಲದ ಜಿಲ್ಲೆಗಳಲ್ಲೂ ಬಿಜೆಪಿ ಮಕಾಡೆ ಮಲಗಿದೆ. ಚಿಕ್ಕಮಗಳೂರು, ಯಾದಗಿರಿ, ಬಳ್ಳಾರಿ, ಚಿಕ್ಕಬಳ್ಳಾಪುರ, ಕೋಲಾರ, ಕೊಡಗು, ರಾಮನಗರ, ಮಂಡ್ಯ, ಚಾಮರಾನಗರ ಸೇರಿದಂತೆ 9 ಜಿಲ್ಲೆಗಳಲ್ಲಿ ಬಿಜೆಪಿ ಒಂದು ಸ್ಥಾನವನ್ನು ಗೆದ್ದಿಲ್ಲ. 8 ಜಿಲ್ಲೆಗಳಲ್ಲಿ ಕೇವಲ ಒಂದು ಸ್ಥಾನವನ್ನು ಹಾಗೂ 07 ಜಿಲ್ಲೆಗಳಲ್ಲಿ ಎರಡು ಸ್ಥಾನಗಳಲ್ಲಿ ಗೆದ್ದುಕೊಂಡಿದೆ. ಕರಾವಳಿ ಕರ್ನಾಟಕ ಮತ್ತು ಬೆಂಗಳೂರು ನಗರದ ಮತದಾರರು ಬಿಜೆಪಿಗೆ ಮತ ಕೊಡದೆ ಇದ್ದರೆ ಇನ್ನಷ್ಟು ಸ್ಥಾನಗಳನ್ನು ಬಿಜೆಪಿ ಕಳೆದುಕೊಳ್ಳುತ್ತಿತ್ತು ಎಂಬ ಲೆಕ್ಕಾಚಾರಗಳು ಕೇಳಿ ಬರುತ್ತಿವೆ.

ಇನ್ನೂ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಹಾಲಿ 14 ಸಚಿವರು ಸೋಲು ಕಂಡಿದ್ದಾರೆ. ಗೋವಿಂದ ಕಾರಜೋಳ, ಜೆ.ಸಿ.ಮಾಧುಸ್ವಾಮಿ, ಬಿ.ಸಿ.ಪಾಟೀಲ, ಶಂಕರ ಪಾಟೀಲ ಮುನೇನ ಕೊಪ್ಪ, ಹಾಲಪ್ಪ ಆಚಾರ್, ಬಿ.ಶ್ರೀರಾಮುಲು, ಡಾ.ಕೆ.ಸುಧಾಕರ್, ವಿ.ಸೋಮಣ್ಣ, ನಾರಾಯಣಗೌಡ, ಬಿ.ಸಿ.ನಾಗೇಶ್, ಮುರುಗೇಶ ನಿರಾಣಿ, ಬಿ.ಸಿ.ಪಾಟೀಲ, ಎಂ.ಟಿ.ಬಿ.ನಾಗರಾಜ್ ಸೋಲುಂಡ ಸಚಿವರಾಗಿದ್ದಾರೆ.

ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಹೊಸ ಮುಖಗಳಿಗೆ ಟಿಕೆಟ್ ನೀಡಿತ್ತು, ಕಾಂಗ್ರೆಸ್‌ಗೆ ಇದು ವರ್ಕೌಟ್ ಆಗಿದ್ದರೆ ಬಿಜೆಪಿಗೆ ಇದು ವರ್ಕೌಟ್ ಆಗಿಲ್ಲ, ಕಾಂಗ್ರೆಸ್ 42 ಮಂದಿ ಹೊಸಬರಿಗೆ ಟಿಕೆಟ್ ನೀಡಿತ್ತು ಅದರಲ್ಲಿ 35 ಮಂದಿ ಗೆಲುವು ಸಾಧಿಸಿದ್ದಾರೆ. ಇನ್ನೂ ಬಿಜೆಪಿಯಿಂದ 75 ಮಂದಿ ಹೊಸಬರಿಗೆ ಟಿಕೆಟ್ ನೀಡಲಾಗಿತ್ತು. ಇವರಲ್ಲಿ 14 ಜನ ಮಾತ್ರ ಗೆಲುವು ಕಂಡಿದ್ದಾರೆ.

ಮೀಸಲು ಕ್ಷೇತ್ರದಲ್ಲಿ ಕಾಂಗ್ರೆಸ್ ಹೆಚ್ಚು ಗೆಲುವು ದಾಖಲಿಸಿದೆ, 36 ಎಸ್‌ಸಿ ಮೀಸಲು ಕ್ಷೇತ್ರದಲ್ಲಿ ಕಾಂಗ್ರೆಸ್ 21 ಕ್ಷೇತ್ರಗಳಲ್ಲಿ, ಬಿಜೆಪಿ 12 ಕ್ಷೇತ್ರಗಳಲ್ಲಿ ಜೆಡಿಎಸ್ 03 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ. 15 ಎಸ್‌ಟಿ ಮೀಸಲು ಕ್ಷೇತ್ರದಲ್ಲಿ ಕಾಂಗ್ರೆಸ್ 14 ಕ್ಷೇತ್ರಗಳಲ್ಲಿ ಜಯಗಳಿಸಿದ್ದರೆ, ಜೆಡಿಎಸ್ 01 ಕ್ಷೇತ್ರದಲ್ಲಿ ಜಯಗಳಿಸಿದೆ. ಇನ್ನೂ ಈ ಬಾರಿಯ 184 ಜನ ಮಹಿಳೆಯರು ಸ್ಪರ್ಧೆ ಮಾಡಿದ್ದರು ಅದರಲ್ಲಿ ಕಾಂಗ್ರೆಸ್‌ನಿಂದ ನಾಲ್ವರು, ಬಿಜೆಪಿಯಿಂದ ಮೂವರು ಮತ್ತು ಜೆಡಿಎಸ್‌ನಿಂದ ಇಬ್ಬರು ಮಹಿಳಾ ಅಭ್ಯರ್ಥಿಗಳು ಗೆಲುವು ದಾಖಲಿಸಿದ್ದಾರೆ. ಕಳೆದ ಬಾರಿ 10 ಜನ ಮಹಿಳಾ ಶಾಸಕರಿದ್ದರು.

ಅಭ್ಯರ್ಥಿಗಳು	ಕ್ಷೇತ್ರ	ಪಕ್ಷ
ಲಕ್ಷ್ಮಿ ಹೆಬ್ಬಾಳ್ಕರ್	ಬೆಳಗಾವಿ ಗ್ರಾಮೀಣ	ಕಾಂಗ್ರೆಸ್
ನಯನ ಮೋಟಮ್ಮ	ಮೂಡಿಗೆರೆ	ಕಾಂಗ್ರೆಸ್
ರೂಪಾ ಶಶಿಧರ್	ಕೆಜಿಎಫ್	ಕಾಂಗ್ರೆಸ್
ಖನಿಜ ಫಾತಿಮಾ	ಕಲಬುರಗಿ ಉತ್ತರ	ಕಾಂಗ್ರೆಸ್
ಶಶಿಕಲಾ ಜೊಲ್ಲೆ	ನಿಪ್ಪಾಣಿ	ಬಿಜೆಪಿ
ಮಂಜುಳಾ ಅರವಿಂದ್ ಲಿಂಬಾವಳಿ	ಮಹದೇವಪುರ	ಬಿಜೆಪಿ
ಭಾಗೀರಥಿ ಮುರಳ್ಯ	ಸುಳ್ಯ	ಬಿಜೆಪಿ
ಕರೆಮ್ಮ ನಾಯಕ್	ದೇವದುರ್ಗ	ಜೆಡಿಎಸ್
ಶಾರದಾ ಪೂರ್ಯಾ ನಾಯಕ್	ಶಿವಮೊಗ್ಗ ಗ್ರಾಮಾಂತರ	ಜೆಡಿಎಸ್

ಈ ಬಾರಿಯ ರಾಜ್ಯ ವಿಧಾನಸಭಾ ಚುನಾವಣೆಯ ಇಡೀ ಪ್ರಚಾರ ಕಾರ್ಯವನ್ನು ಬಿಜೆಪಿ ಹೈಕಮಾಂಡ್ ನೇರವಾಗಿ ತನ್ನ ತೆಕ್ಕೆಗೆ ತೆಗೆದುಕೊಂಡಿತ್ತು. ಪ್ರಧಾನಿ ನರೇಂದ್ರ ಮೋದಿ ಹಾಗು ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜ್ಯದಲ್ಲಿ ಅಬ್ಬರದ ಪ್ರಚಾರ ಕಾರ್ಯ ನಡೆಸಿದರು. ಆದರೂ ಮೋದಿ ಹಾಗು ಅಮಿತ್ ಶಾ ಅವರ ರೋಡ್ ಶೋಗಳು, ಚುನಾವಣಾ ರ್‍ಯಾಲಿಗಳು ಮಾತ್ರ ಬಿಜೆಪಿ ಕೈ ಹಿಡಿಯಲಿಲ್ಲ. ರ್‍ಯಾಲಿಗೆ ಜನ ಬಂದರೂ ಪಕ್ಷ ಅಧಿಕಾರಕ್ಕೆ ಬರಲಿಲ್ಲ ಮತ ಹಾಕಲಿಲ್ಲ. ಕಳೆದ ಎರಡೂವರೆ ತಿಂಗಳಿನಲ್ಲಿ 17 ಬಾರಿ ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜ್ಯಕ್ಕೆ ಭೇಟಿ ನೀಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ 10ಕ್ಕೂ ಹೆಚ್ಚು ಬಾರಿ ಬಂದಿದ್ದಾರೆ. 31 ನಾಯಕರು ಹೊರ ರಾಜ್ಯದಿಂದ ಪ್ರಚಾರ ಕಾರ್ಯಕ್ಕೆ ಬಂದಿದ್ದರು. ನರೇಂದ್ರ ಮೋದಿ ರಾಜ್ಯದಲ್ಲಿ 19 ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡಿದ್ದು, 6 ರೋಡ್ ಶೋ ನಡೆಸಿದ್ದರು, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ 10 ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡಿದ್ದು, 16 ರೋಡ್ ಶೋ ನಡೆಸಿದ್ದರು, ಅಮಿತ್ ಶಾ 16 ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡಿದ್ದು, 17 ರೋಡ್ ಶೋ ನಡೆಸಿದ್ದರು. ಆದರೆ ಮತದಾರ ಮಾತ್ರ ಈ ಮೋಡಿಗೆ ಒಳಗಾಗದೆ 40% ಸರ್ಕಾರವನ್ನು, ಜನವಿರೋಧಿ ಸರ್ಕಾರವನ್ನು ಕಿತ್ತೆಸೆದಿದ್ದಾನೆ.

ಲೋಕಸಭೆ ಚುನಾವಣೆಗೂ ಮುನ್ನವೇ ಶುರುವಾಗಿದೆ ಬಿಜೆಪಿಯ ಅಂತ್ಯ..!

ಹಲವು ನಾಯಕರ ಅಭಿಮತ

2024ರ ಲೋಕಸಭೆ ಚುನಾವಣೆಗೂ ಮುನ್ನವೇ ಬಿಜೆಪಿ ಅಂತ್ಯ ಆರಂಭವಾಗಿದೆ ಎಂದು ದೇಶದ ಹಲವು ಹಿರಿಯ ರಾಜಕೀಯ ನಾಯಕರು ಭವಿಷ್ಯ ನುಡಿದಿದ್ದಾರೆ. ಕರ್ನಾಟಕ ಚುನಾವಣಾ ಫಲಿತಾಂಶಗಳ ಸಂದರ್ಭದಲ್ಲಿ ಈ ಅಂದಾಜು ಪ್ರಸ್ತುತಪಡಿಸಿದ ಅವರು, "ಹಣದುಬ್ಬರ, ನಿರುದ್ಯೋಗ, ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತದ ವಿರುದ್ಧ ಜನರು ಧನಾತ್ಮಕ ಭಾರತವನ್ನು ಬಯಸುತ್ತಾರೆ ಎಂಬುದನ್ನು ಕರ್ನಾಟಕ ಚುನಾವಣಾ ಫಲಿತಾಂಶಗಳು ಪ್ರತಿಬಿಂಬಿಸುತ್ತವೆ" ಎಂದು ಹೇಳಿದ್ದಾರೆ.

ಮೋದಿಯಿಂದ ಎಲ್ಲವೂ ಸಾಧ್ಯ ಎಂಬ ಘೋಷಣೆ ಸುಳ್ಳಾಗಿದೆ

"ಕರ್ನಾಟಕ ವಿಧಾನಸಭಾ ಚುನಾವಣಾ ಫಲಿತಾಂಶಗಳ ಟ್ರೆಂಡ್ 2024 ರ ಸಂಸತ್ ಚುನಾವಣೆಯ ವಾತಾವರಣವನ್ನು ಪ್ರತಿಬಿಂಬಿಸುತ್ತದೆ. ಬಿಜೆಪಿಯನ್ನು ಸೋಲಿಸುವುದೇ ನಮ್ಮ ಗುರಿ. ಕೇರಳ, ತಮಿಳುನಾಡು, ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ, ರಾಜಸ್ಥಾನ, ದೆಹಲಿ, ಜಾರ್ಖಂಡ್, ಪಂಜಾಬ್ ಮತ್ತು ಪಶ್ಚಿಮ ಬಂಗಾಳದಂತಹ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿಲ್ಲ. ರಾಹುಲ್ ಗಾಂಧಿಯವರ ಭಾರತ ಏಕತಾ ನಡಿಗೆ ಕರ್ನಾಟಕವನ್ನು ಗೆಲ್ಲಲು ಕಾಂಗ್ರೆಸ್ ಗೆ ಸಹಾಯ ಮಾಡಿದೆ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಕರ್ನಾಟಕದಲ್ಲಿ ಬಿಜೆಪಿಯ 'ಮೋದಿ ಹೈ ತೋ ಮುಮ್ಕಿನ್ ಹೈ' (ಮೋದಿಯಿಂದ ಎಲ್ಲವೂ ಸಾಧ್ಯ) ಘೋಷಣೆಯನ್ನು ಜನರು ತಿರಸ್ಕರಿಸಿದ್ದಾರೆ. ಒಬ್ಬನೇ ವ್ಯಕ್ತಿ ಎಲ್ಲಾ ಅಧಿಕಾರಗಳನ್ನು ಹೊಂದಿರುವುದನ್ನು ಜನರು ತಿರಸ್ಕರಿಸಿದ್ದಾರೆ ಎಂಬುದು ಸ್ಪಷ್ಟವಾಗಿದೆ" ಎಂದು ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಶರದ್ ಪವಾರ್ ಹೇಳಿದ್ದಾರೆ.

ದ್ವೇಷದ ರಾಜಕಾರಣವನ್ನು ಜನ ತಿರಸ್ಕರಿಸಿದ್ದಾರೆ

"ಕರ್ನಾಟಕದ ಜನರು ದ್ವೇಷದ ರಾಜಕಾರಣವನ್ನು ತಿರಸ್ಕರಿಸಿದ್ದಾರೆ ಮತ್ತು ಪ್ರೀತಿಯ ರಾಜಕೀಯವನ್ನು ಸ್ವೀಕರಿಸಿದ್ದಾರೆ. ನಾನು ಅವರಿಗೆ ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ" ಎಂದು ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಹೇಳಿದ್ದಾರೆ.

ಬಿಜೆಪಿಯ ಮೇಲೆಯೇ ಹನುಮಂತನ ಗದೆ ಬಿದ್ದಿದೆ

"ಕರ್ನಾಟಕ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಬಜರಂಗದಳವನ್ನು ನಿಷೇಧಿಸುವುದಾಗಿ ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿತು. ಇದನ್ನು, ಚುನಾವಣಾ ಪ್ರಚಾರದ ವೇಳೆ ಪ್ರಧಾನಿ ಮೋದಿ ತೀವ್ರವಾಗಿ ಟೀಕಿಸಿದ್ದರು. ಇದೂ ಅಲ್ಲದೆ, ಭಗವಾನ್ ಹನುಮಂತನ ಹೆಸರು ಘೋಷಣೆ ಮಾಡುತ್ತ ಬಿಜೆಪಿಯನ್ನು ವಿರೋಧಿಸುವವರನ್ನೂ ಟೀಕಿಸಿದರು. ಇವೇ ಕರ್ನಾಟಕದಲ್ಲಿ ಬಿಜೆಪಿ ಪತನಕ್ಕೆ ಕಾರಣ. ಬಿಜೆಪಿ ಮೇಲೆ ಹನುಮಂತನ ಗದೆ ಬಿದ್ದಿದೆ. ಇದು ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ವೈಫಲ್ಯ. ಕರ್ನಾಟಕದಲ್ಲಿ ಈಗ ಏನಾಗಿದೆಯೋ ಅದು 2024ರ ಸಂಸತ್ ಚುನಾವಣೆಯಲ್ಲೂ ಆಗುತ್ತದೆ" ಎಂದು ಶಿವಸೇನೆ (ಉದ್ಧವ್ ಬಾಳಾಸಾಹೇಬ್ ಠಾಕ್ರೆ) ಪಕ್ಷದ ಹಿರಿಯ ನಾಯಕ, ಸಂಸದ ಸಂಜಯ್ ರಾವತ್ ಹೇಳಿದ್ದಾರೆ. ಸಂಜಯ್ ರಾವತ್ ಕೂಡ "ಮೋದಿ ಅಲೆ ಕಡಿಮೆಯಾಗಿದೆ ಮತ್ತು ಈಗ ನಮ್ಮ (ವಿರೋಧ) ಅಲೆ ದೇಶಾದ್ಯಂತ ಬರುತ್ತಿದೆ" ಎಂದು ಹೇಳಿದರು.

ಬಿಜೆಪಿಯ ಹಣ ಮತ್ತು ಜನಬಲದ ವಿರುದ್ಧ ಜನ ನಿಂತಿದ್ದಾರೆ

"ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಅಭೂತಪೂರ್ವ ವಿಜಯವನ್ನು ನೀಡಿದ ಜನರಿಗೆ ಅಭಿನಂದಿಸುತ್ತೇನೆ ಮತ್ತು ಅವರಿಗೆ ನನ್ನ ಧನ್ಯವಾದಗಳು. ಒಂದು ರಾಜ್ಯದ ವಿಧಾನಸಭೆ ಚುನಾವಣೆಗಿಂತ ಮುಖ್ಯವಾಗಿ ಪರಿಗಣಿಸಲ್ಪಟ್ಟ ಈ ಚುನಾವಣೆಯು ಭಾರತದ ಸಂವಿಧಾನದ ಮೂಲಭೂತ ಮೌಲ್ಯಗಳು ಮತ್ತು ಪ್ರಬಲ ತತ್ವಗಳನ್ನು ಎತ್ತಿ ಹಿಡಿದಿದೆ, ತಾರತಮ್ಯದಿಂದ ದೇಶಕ್ಕೆ ಆಗುವ ಹಾನಿಯನ್ನು ತಡೆದಿದೆ. ಡಬಲ್ ಎಂಜಿನ್ ಸರ್ಕಾರ ಎಂದು ಹೇಳಿಕೊಂಡಿದ್ದ ಬಿಜೆಪಿಯ ಹಣಬಲ ಮತ್ತು ಜನಬಲದ ವಿರುದ್ಧ ಕರ್ನಾಟಕದ ಜನತೆ ನಿಂತಿದ್ದಾರೆ," ಎಂದು ಕಾಂಗ್ರೆಸ್ ಹಿರಿಯ ನಾಯಕ ಹಾಗೂ ಕೇಂದ್ರದ ಮಾಜಿ ಸಚಿವ ಪಿ. ಚಿದಂಬರಂ ಹೇಳಿದ್ದಾರೆ.





ಚುನಾವಣಾ ಫಲಿತಾಂಶಗಳು ಧನಾತ್ಮಕ ಭಾರತಕ್ಕೆ ಹೊಸ ಆರಂಭ

"ಕರ್ನಾಟಕ ಚುನಾವಣಾ ಫಲಿತಾಂಶಗಳು ಬಿಜೆಪಿಯ ನಕಾರಾತ್ಮಕ, ಕೋಮುವಾದ, ಭ್ರಷ್ಟಾಚಾರ–ಕಲುಷಿತ, ಬಂಡವಾಳಶಾಹಿ ಪರ, ಮಹಿಳಾ ವಿರೋಧಿ, ಯುವಜನ ವಿರೋಧಿ, ವಿಭಜಕ ಮತ್ತು ವ್ಯಕ್ತಿಗತ ರಾಜಕಾರಣದ ಅಂತ್ಯದ ಆರಂಭವಾಗಿದೆ" ಎಂದು ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮತ್ತು ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಹೇಳಿದ್ದಾರೆ. ಹಣದುಬ್ಬರ, ನಿರುದ್ಯೋಗ, ಭ್ರಷ್ಟಾಚಾರ ಮತ್ತು ಹಗೆತನದ ವಿರುದ್ಧ ಧನಾತ್ಮಕ ಭಾರತಕ್ಕೆ ಇದು ಹೊಸ ಆರಂಭವಾಗಿದೆ ಎಂದು ಅಖಿಲೇಶ್ ಹೇಳಿದ್ದಾರೆ.

ಸಮಸ್ಯೆಯಿಂದ ಜನರನ್ನು ಬೇರೆಡೆಗೆ ಸೆಳೆಯುವ ಪ್ರಯತ್ನಗಳು ಇನ್ನು ಮುಂದೆ ನಡೆಯುವುದಿಲ್ಲ


"ಜನರ ಸಮಸ್ಯೆಗಳ ಬಗ್ಗೆ ಮಾತನಾಡದೆ ಜನರ ಗಮನವನ್ನು ಬೇರೆಡೆ ಸೆಳೆಯುವ ರಾಜಕೀಯ ಪ್ರಯತ್ನಗಳು ಇನ್ನು ಮುಂದೆ ನಡೆಯುವುದಿಲ್ಲ ಎಂಬುದನ್ನು ಕರ್ನಾಟಕದ ಚುನಾವಣಾ ಗೆಲುವು ತೋರಿಸುತ್ತದೆ. ಇದನ್ನು ನಾವು ಕರ್ನಾಟಕದ ಹಿಮಾಚಲ ಪ್ರದೇಶದಲ್ಲಿ ನೋಡಿದ್ದೇವೆ. ಜನರು ತಮ್ಮ ಸಮಸ್ಯೆಗಳನ್ನು ಚರ್ಚಿಸಿ ಪರಿಹರಿಸಬೇಕೆಂದು ಬಯಸುತ್ತಾರೆ" ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ.

ಕರ್ನಾಟಕ ವಿಧಾನವನ್ನು ಇನ್ನಷ್ಟು ವಿಸ್ತರಿಸಬೇಕಾಗಿದೆ

"ಬಡವರ ಕಲ್ಯಾಣ ಯೋಜನೆಗಳು ಮತ್ತು ಜಾತ್ಯತೀತ ನಿಲುವು ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಐತಿಹಾಸಿಕ ಗೆಲುವು ತಂದುಕೊಟ್ಟಿದೆ. ಈ ಗೆಲುವಿನಿಂದ ಕಾಂಗ್ರೆಸ್ ಸರಿಯಾದ ಪಾಠ ಕಲಿತು ರಾಷ್ಟ್ರ ರಾಜಕಾರಣದತ್ತಲೂ ಸರಿಯಾಗಿ ಗಮನ ಹರಿಸಬೇಕು. ಮೋದಿ ಅಜೇಯ ಅಲ್ಲ. ಎಲ್ಲ ಜಾತ್ಯಾತೀತ ಶಕ್ತಿಗಳು ಒಂದಾದರೆ ಮುಂದಿನ ವರ್ಷದಲ್ಲಿ ಬಿಜೆಪಿಯ ಆಡಳಿತ ಕೊನೆಗೊಳ್ಳಲಿದೆ" ಎಂದು ಭಾರತ ಕಮ್ಯುನಿಸ್ಟ್ ಪಕ್ಷದ ಸಂಸದ ಬಿನೋಯ್ ವಿಶ್ವಂ ಹೇಳಿದ್ದಾರೆ.

ಜನತೆಗೆ ಹೊಸ ಭರವಸೆಯ ಬೆಳಕು ಹುಟ್ಟಿದೆ

"ಕರ್ನಾಟಕ ಚುನಾವಣೆಯಲ್ಲಿ ಕೋಮುಭಾವನೆ ಕೆರಳಿಸಿ ಗೆಲ್ಲಲು ಬಿಜೆಪಿ ಎಂದಿನಂತೆ ತಂತ್ರ ಮಾಡಿದೆ. ಆದರೆ ಬಿಜೆಪಿಯ ಯೋಜಿತ ಪ್ರಚಾರವನ್ನು ಬದಿಗೊತ್ತಿದ ಜನ, ಪ್ರಗತಿಪರ ವಿಚಾರಗಳ ಮೇಲೆ ಪ್ರಚಾರ ಮಾಡಿದ ಕಾಂಗ್ರೆಸ್‌ಗೆ ಜಯ ತಂದುಕೊಟ್ಟರು. ಲೋಕಸಭೆ ಚುನಾವಣೆಗೂ ಮುನ್ನ ಕರ್ನಾಟಕದಲ್ಲಿ ಕಾಂಗ್ರೆಸ್‌ನ ಈ ಗೆಲುವು ಸಂತಸ ತಂದಿದೆ. ಭರವಸೆಯ ಹೊಸ ಬೆಳಕು ಮೂಡಿದೆ" ಎಂದು ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಮತ್ತು ಪೀಪಲ್ಸ್ ಡೆಮಾಕ್ರಟಿಕ್ ಪಕ್ಷದ ನಾಯಕಿ ಮೆಹಬೂಬಾ ಮುಫ್ತಿ ಹೇಳಿದ್ದಾರೆ.



ಒಡೆದು ಆಳುವ ರಾಜಕೀಯವನ್ನು ತಿರಸ್ಕರಿಸಿದ್ದಕ್ಕಾಗಿ ಜನರಿಗೆ ಧನ್ಯವಾದಗಳು

"ಕೆಟ್ಟ ಮತ್ತು ವಿಭಜಕ ರಾಜಕಾರಣವನ್ನು ತಿರಸ್ಕರಿಸಿದ್ದಕ್ಕಾಗಿ ಕರ್ನಾಟಕದ ಜನತೆಗೆ ಧನ್ಯವಾದಗಳು. ಹೈದರಾಬಾದ್ ಮತ್ತು ಬೆಂಗಳೂರು ರಾಷ್ಟ್ರದ ಹಿತಾಶಕ್ತಿಗಾಗಿ ಹೂಡಿಕೆಗಳನ್ನು ಆಕರ್ಷಿಸುವ ಮತ್ತು ಮೂಲಸೌಕರ್ಯಗಳನ್ನು ನಿರ್ಮಿಸುವ ವಿಷಯದಲ್ಲಿ ಆರೋಗ್ಯಕರವಾಗಿ ಸ್ಪರ್ಧಿಸಲಿವೆ. ಕರ್ನಾಟಕದಲ್ಲಿರುವ ಕಾಂಗ್ರೆಸ್ ಸರ್ಕಾರಕ್ಕೆ ಅಭಿನಂದನೆಗಳು" ಎಂದು ಭಾರತ್ ರಾಷ್ಟ್ರ ಸಮಿತಿ ಪಕ್ಷದ ಕಾರ್ಯಾಧ್ಯಕ್ಷ ಹಾಗೂ ತೆಲಂಗಾಣ ಸಚಿವ ಕೆ.ಟಿ. ರಾಮರಾವ್ ಹೇಳಿದ್ದಾರೆ.

ಇನ್ನು ಬಿಜೆಪಿಯ ಕಸರತ್ತು ನಡೆಯುವುದಿಲ್ಲ

"ಬಿಜೆಪಿ ಅಧಿಕಾರದಲ್ಲಿದ್ದಾಗ ಕೆಲಸ ಮಾಡುವುದಿಲ್ಲ. ಆದರೆ ಪ್ರಚಾರದ ವೇಳೆ ಕೊಳಕು ವಿಷಯಗಳನ್ನು ಎತ್ತಿ ಗೆಲ್ಲಲು ಯತ್ನಿಸುತ್ತಾರೆ. ಇಂತಹ ತಂತ್ರಗಳು ಇನ್ನು ಮುಂದೆ ಕೆಲಸ ಮಾಡುವುದಿಲ್ಲ ಎಂಬುದನ್ನು ಬಿಜೆಪಿ ಅರಿತುಕೊಳ್ಳಬೇಕು," ಎಂದು ದೆಹಲಿ ಮುಖ್ಯಮಂತ್ರಿ ಹಾಗೂ ಆಮ್ ಆದ್ಮಿ ಪಕ್ಷದ ನಾಯಕ ಅರವಿಂದ್ ಕೇಜ್ರಿವಾಲ್ ಹೇಳಿದ್ದಾರೆ.

ತೆಲಂಗಾಣದಲ್ಲಿ ಬಿಜೆಪಿಗೆ ಠೇವಣಿ ಕೂಡ ಸಿಗುವುದಿಲ್ಲ

ಕರ್ನಾಟಕದಲ್ಲಿ ಬಿಜೆಪಿ ಸೋಲಿನ ಬಗ್ಗೆ ತೆಲಂಗಾಣ ಹಣಕಾಸು ಸಚಿವ ಹರೀಶ್ ರಾವ್ ನೀಡಿರುವ ಸಂದರ್ಶನದಲ್ಲಿ, "ಇದು ದಕ್ಷಿಣ ಭಾರತದ ಕಥೆ. ಅರ್ಥಾತ್ ದಕ್ಷಿಣ ಭಾರತ ಬಿಜೆಪಿಯ ಹಿಡಿತದಿಂದ ಮುಕ್ತವಾಗಿದೆ. ದಕ್ಷಿಣ ಭಾರತದಿಂದಲೇ ಬಿಜೆಪಿ ಪತನ ಆರಂಭವಾಗಿದೆ. ತೆಲಂಗಾಣದಲ್ಲಿ ಬಿಜೆಪಿಗೆ ಠೇವಣಿ ಕೂಡ ಸಿಗುವುದಿಲ್ಲ ಎಂಬುದನ್ನು ನೆನಪಿನಲ್ಲಿಡಬೇಕು' ಎಂದು ಎಚ್ಚರಿಸಿದರು.

ಕರ್ನಾಟಕದ ಸೋಲಿನ ನಂತರ ಬಿಜೆಪಿ ಕಾಶ್ಮೀರದಲ್ಲಿ ಚುನಾವಣೆ ನಡೆಸುವುದಿಲ್ಲ

"ಕರ್ನಾಟಕದಲ್ಲಿ ಸೋತಿರುವ ಬಿಜೆಪಿಗೆ ಈಗ ಕಾಶ್ಮೀರದಲ್ಲಿ ವಿಧಾನಸಭೆ ಚುನಾವಣೆ ನಡೆಸುವ ಧೈರ್ಯವಿಲ್ಲ" ಎಂದು ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಹಾಗೂ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ನಾಯಕ ಒಮರ್ ಅಬ್ದುಲ್ಲಾ ಹೇಳಿದ್ದಾರೆ. 2014ರಿಂದ ಕಾಶ್ಮೀರದಲ್ಲಿ ವಿಧಾನಸಭೆ ಚುನಾವಣೆ ನಡೆಯದೇ ಇರುವುದರಿಂದ ಬಿಜೆಪಿಯ ಹೊರತಾಗಿ ಕಾಶ್ಮೀರದ ಹಲವು ರಾಜಕೀಯ ಪಕ್ಷಗಳು ಕೂಡ ಅಲ್ಲಿಗೆ ಚುನಾವಣೆ ನಡೆಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿರುವುದು ಗಮನಿಸಬೇಕಾದ ಅಂಶವಾಗಿದೆ.





ಮಿಲಿಟರಿ ಮೈತ್ರಿಕೂಟದತ್ತ ಜಾರುತ್ತಿರುವ ಭಾರತ

ಜಗತ್ತಿನಲ್ಲಿ ಬಹುಪಕ್ಷೀಯತೆ ಹೆಚ್ಚುತ್ತಿರುವಾಗ ಮತ್ತು ಅಮೆರಿಕದ ಮಿತ್ರರಾಗಿರುವ ಮಧ್ಯಮ ಪ್ರಮಾಣದ ಬಲಿಷ್ಠ ದೇಶಗಳು ಕೂಡ ತಮ್ಮ ಮಿಲಿಟರಿ ಕಾರ್ಯತಂತ್ರದ ಸ್ವಾಯತ್ತೆಯನ್ನು ಪ್ರತಿಪಾದಿಸಲು ಬಯಸುತ್ತಿರುವಾಗ, ಅಮೆರಿಕ ನೇತೃತ್ವದ ಕಾರ್ಯತಂತ್ರಾತ್ಮಕ ಮತ್ತು ಭದ್ರತಾ ಗುಂಪುಗಳಲ್ಲಿ ಭಾರತ ಸಿಕ್ಕಿ ಹಾಕಿಕೊಳ್ಳುವುದು ದೂರದೃಷ್ಟಿಯ ಕೊರತೆಯ ಪ್ರತೀಕವಾಗಿದೆ.

— ಪ್ರಕಾಶ್ ಕಾರತ್ —

ಅಮೆರಿಕ, ಜಪಾನ್, ಆಸ್ಟ್ರೇಲಿಯಾ ಮತ್ತು ಭಾರತ–ಹೀಗೆ ನಾಲ್ಕು ದೇಶಗಳನ್ನು ಒಳಗೊಂಡ ಕೂಟ ಕ್ವಾಡ್, ನಿಧಾನಕ್ಕೆ ಒಂದು ಭದ್ರತಾ ಮೈತ್ರಿಕೂಟವಾಗಿ ರೂಪುಗೊಳ್ಳುತ್ತಿದೆ. ವಾಸ್ತವವಾಗಿ ಕೂಟದ ಮೂಲ ಹೆಸರು ಚತುಷ್ಪಕ್ಷೀಯ ಭದ್ರತಾ ಮಾತುಕತೆ (ಕ್ವಾಡ್ರಿಲೇಟರಲ್ ಸೆಕ್ಯುರಿಟಿ ಡೈಲಾಗ್) ಎಂದಾಗಿದ್ದು ಮೂಲ ಹೆಸರಿಗೆ ತಕ್ಕಂತೆ ಭದ್ರತಾ ಮೈತ್ರಿಕೂಟವಾಗಿ ರೂಪುಗೊಳ್ಳುವತ್ತ ಸಾಗಿದೆ.

ನಾಲ್ಕು ಕ್ವಾಡ್ ಸದಸ್ಯ ದೇಶಗಳ ಮಿಲಿಟರಿ ಮುಖ್ಯಸ್ಥರ ಸಭೆ ಕ್ಯಾಲಿಫೋರ್ನಿಯಾದ ಸನ್ನಿಲ್ಯಾಂಡ್ಸ್‌ನಲ್ಲಿ ಮೇ 15ರಿಂದ 17ರ ವರೆಗೆ ನಡೆದಿದ್ದು ಭದ್ರತಾ ಆಯಾಮಕ್ಕೆ ಹೆಚ್ಚಿನ ಒತ್ತು ಕೊಡಲಾಗಿತ್ತು. ಭಾರತದ ಮೂರೂ ರಕ್ಷಣಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಅನಿಲ್ ಚೌಹಾಣ್ ಸಭೆಯಲ್ಲಿ ಭಾಗವಹಿಸಿದ್ದರು. ಇಂಡೋ–ಪೆಸಿಫಿಕ್ ಕಮಾಂಡ್‌ನ ಕಮಾಂಡರ್, ಅಡ್ಮಿರಲ್ ಜಾನ್ ಸಿ ಅಕ್ವಿಲಿನೋ ಅಮೆರಿಕವನ್ನು ಪ್ರತಿನಿಧಿಸಿದ್ದರು.

ಜಪಾನ್‌ನ ಹಿರೋಷಿಮಾದಲ್ಲಿ ನಡೆಯಲಿರುವ ಜಿ–7 ಶೃಂಗಸಭೆಯ ಸಂದರ್ಭದಲ್ಲಿ ಮಿಲಿಟರಿ ಮುಖ್ಯಸ್ಥರ ಈ ಮೊದಲ ಸಭೆ ನಡೆದಿದೆ. ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಆಸ್ಟ್ರೇಲಿಯಾ ಪ್ರವಾಸವನ್ನು ರದ್ದುಪಡಿಸಿದ್ದರಿಂದ, ಮೇ 24ರಂದು ಆಸ್ಟ್ರೇಲಿಯಾದಲ್ಲಿ ನಡೆಯಬೇಕಿದ್ದ ಕ್ವಾಡ್ ಶೃಂಗಸಭೆಯನ್ನು ರದ್ದುಪಡಿಸಲಾಗಿದೆ. ಜಿ–7 ಶೃಂಗದ ಸಂದರ್ಭದಲ್ಲೇ ಕ್ವಾಡ್ ಶೃಂಗವನ್ನೂ ನಡೆಸಲು ಯೋಜಿಸಲಾಗಿದ್ದು ಇದು ನಾಲ್ಕೂ ದೇಶಗಳ ನಾಯಕರ ಮೂರನೇ ಮುಖಾಮುಖಿ ಸಭೆಯಾಗಲಿದೆ. ಪ್ರಧಾನಿ ನರೇಂದ್ರ ಮೋದಿ ಅದರಲ್ಲಿ ಭಾಗವಹಿಸಲಿದ್ದಾರೆ.

ಅಮೆರಿಕದ ಬಗ್ಗೆ ಹೇಳುವುದಾದರೆ, ಕ್ವಾಡ್ ಕೂಟ ಚೀನಾದ ವಿರುದ್ಧ ನಿರ್ದೇಶಿತ ಭದ್ರತಾ ಮೈತ್ರಿಕೂಟ ಆಗಬೇಕೆಂಬ ಬಯಕೆಯನ್ನು ಆರಂಭದಿಂದಲೇ ಹೊಂದಿದೆ. ಭಾರತ ಕ್ವಾಡ್ ಸೇರುವಾಗ, 'ಸ್ವತಂತ್ರ ಹಾಗೂ ಮುಕ್ತ ಇಂಡೋ–ಪೆಸಿಫಿಕ್' (ಹಿಂದೂ ಮಹಾಸಾಗರ–ಶಾಂತಸಾಗರ), ಸಾಗರಯಾನ ಭದ್ರತೆ ಮತ್ತು ಮಾನವೀಯ ಹಾಗೂ ದುರಂತ ಪರಿಹಾರಗಳ ಕಾರ್ಯಾಚರಣೆ' ಮುಂತಾದ ಸಾರ್ವತ್ರಿಕ ಸೂತ್ರಗಳ ಮರೆಯನ್ನು ಬಳಸಿಕೊಂಡಿತ್ತು.

2022ರ ಫೆಬ್ರವರಿಯಲ್ಲಿ ನಡೆದ ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ಭಾರತದ ವಿದೇಶಾಂಗ ಮಂತ್ರಿ ಎಸ್. ಜೈಶಂಕರ್, 'ಕ್ವಾಡ್ ಯಾವುದೋ ಒಂದು ಉದ್ದೇಶಕ್ಕಾಗಿದೆಯೇ ಹೊರತು ಯಾರ ವಿರುದ್ಧವೂ ಅಲ್ಲ' ಎಂದು ಹೇಳಿದ್ದರು. ಇದು ಕೇವಲ ನಿಷ್ಫಲ ಮಾತಷ್ಟೇ ಆಗಿದೆ. ಚೀನಾವನ್ನು ಎದುರಿಸಲು ಹಾಗೂ ಪ್ರತ್ಯೇಕಿಸುವ ಅಮೆರಿಕದ ಇಂಡೋ–ಪೆಸಿಫಿಕ್ ಕಾರ್ಯತಂತ್ರಕ್ಕೆ ಭಾರತ ಬಲಿಯಾಗಿದೆ ಎನ್ನುವುದು ವಾಸ್ತವ ಸಂಗತಿಯಾಗಿದೆ. ಮಿಲಿಟರಿ ಸಹಕಾರದ ಇನ್ನೊಂದು ವಿಸ್ತರಣೆಯಾಗಿ ಈ ವರ್ಷ ಆಗಸ್ಟ್‌ನಲ್ಲಿ ನಡೆಯುವ ಮಲಬಾರ್ ನೇವಿ ಸಮರ ಕಸರತ್ತಿನಲ್ಲಿ ಆಸ್ಟ್ರೇಲಿಯಾವನ್ನು ಸೇರಿಸಿಕೊಳ್ಳಲು ನಿರ್ಧರಿಸಲಾಗಿದೆ.

ಕ್ಯಾಲಿಫೋರ್ನಿಯಾ ಸಭೆಯಲ್ಲಿ ಭಾರತದ ಪಾಲ್ಗೊಳ್ಳುವಿಕೆ ಬಗ್ಗೆ ಮಾಧ್ಯಮದವರಿಗೆ ವಿವರಿಸಿದ ಭಾರತದ ಭದ್ರತಾ ವ್ಯವಸ್ಥೆಯ ಅನಾಮಿಕ ಅಧಿಕಾರಿಯೊಬ್ಬರು, ಗಡಿಯಲ್ಲಿ ಚೀನಾದ ಆಕ್ರಮಣಕಾರಿ ನಡೆ ಹಾಗೂ ಗಡಿ ವಿವಾದವನ್ನು ದ್ವಿಪಕ್ಷೀಯವಾಗಿ ಬಗೆಹರಿಸಲು ಮನಸ್ಸು ಮಾಡದಿರುವುದನ್ನು ಗಮನಿಸಿದರೆ ಭೂಮಿ ಹಾಗೂ ಇಂಡೋ–ಪೆಸಿಫಿಕ್‌ನಲ್ಲಿ ಪಿಎಲ್‌ಎದ ಆಕ್ರಮಣವನ್ನು ನಿಯಂತ್ರಿಸಲು 'ಭಾರತ ಕ್ವಾಡ್‌ನಂಥ ಬಹುಪಕ್ಷೀಯ ವೇದಿಕೆಗಳ ನೆರವನ್ನು ಪಡೆಯಲು ನಿರ್ಧರಿಸಬೇಕು' ಎಂದು ಹೇಳಿದ್ದರು. ಇಂಡೋ–ಪೆಸಿಫಿಕ್ ವಲಯದಲ್ಲಿ ಅಮೆರಿಕ ಮತ್ತದರ ಮಿತ್ರ ದೇಶಗಳೊಂದಿಗೆ ಮಿಲಿಟರಿ ಸಹಕಾರ ಮಾಡಿಕೊಳ್ಳಲು ಇದನ್ನೊಂದು ಸಮರ್ಥನೆಯಾಗಿ ಬಳಸಿಕೊಳ್ಳಲಾಗುತ್ತಿದೆ.

ಇಂಡೋ–ಪೆಸಿಫಿಕ್ ಕಾರ್ಯತಂತ್ರದಲ್ಲಿ ಭಾರತವನ್ನು ಸೇರಿಸಿಕೊಳ್ಳುವುದು ಯಾಕೆ ಎನ್ನುವ ಬಗ್ಗೆ ಮತ್ತು ಅದರಲ್ಲಿ ಭಾರತ ನಿರ್ವಹಿಸಬೇಕಾದ ಪಾತ್ರದ ಬಗ್ಗೆ ಅಮೆರಿಕ ಯಾವುದೇ ತಕರಾರು ಮಾಡಿಲ್ಲ. ಮೋದಿ ಸರ್ಕಾರ ಅಮೆರಿಕದೊಂದಿಗೆ ಕೈಜೋಡಿಸಿರುವುದು ಇಂಡೋ–ಪೆಸಿಫಿಕ್ ವಲಯದಲ್ಲಿ ಮಾತ್ರವೇ ಅಲ್ಲ; ಪಶ್ಚಿಮ ಏಷ್ಯಾದಲ್ಲಿ ಕೂಡ ಅದು ಚತುಷ್ಪಕ್ಷೀಯ ವ್ಯವಸ್ಥೆಯನ್ನು ಸೇರಿದೆ. ಅದುವೇ ಭಾರತ, ಇಸ್ರೇಲ್ ಮತ್ತು ಇಸ್ರೇಲ್ ಒಳಗೊಂಡ ತಥಾಕಥಿತ ಐ2–ಯೂ2 ವ್ಯವಸ್ಥೆ.

ಅಮೆರಿಕದ ಆಶ್ರಯದಲ್ಲಿ ಮೇ 7ರಂದು ಸೌದಿ ಅರೇಬಿಯಾದಲ್ಲಿ ಸಭೆಯೊಂದು ನಡೆಯಿತು. ಆ ಸಭೆಯಲ್ಲಿ ಸೌದಿ ಪ್ರಧಾನಿ ಮಹಮದ್ ಬಿನ್ ಸಲ್ಮಾನ್ ಅಮೆರಿಕ, ಯುಎಇ ಮತ್ತು ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರರನ್ನು ಭೇಟಿಯಾದರು. ಭಾರತವನ್ನು ಜೋಡಿಸುವ ವಲಯದಲ್ಲಿ ಸಹಕಾರವನ್ನು ಬಲಪಡಿಸುವುದು ಮತ್ತು ಮೂಲಸೌಕರ್ಯವನ್ನು ನಿರ್ಮಿಸುವುದು ಸಭೆಯ ಕಾರ್ಯಸೂಚಿಯಾಗಿತ್ತು. ಚೀನಾದ ಹೆಚ್ಚುತ್ತಿರುವ ಪ್ರಭಾವದಿಂದ ಅಮೆರಿಕಕ್ಕೆ ಚಿಂತೆ ಉಂಟಾಗಿರುವುದು ಮತ್ತು ಚೀನಾದ ರಾಜತಾಂತ್ರಿಕ ಮಧ್ಯಪ್ರವೇಶದಿಂದಾಗಿ ಸೌದಿ ಅರೇಬಿಯಾ ಹಾಗೂ ಇರಾನ್ ನಡುವೆ ರಾಜತಾತ್ರಿಕ ಸಂಬಂಧಗಳು ಹಾಗೂ ಬಾಂಧವ್ಯ ಮರುಸ್ಥಾಪನೆಯಾಗಿದ್ದು ಕೂಡ ಅಮೆರಿಕಕ್ಕೆ ತಲೆಬಿಸಿ ಉಂಟು ಮಾಡಿರುವ ಹಿನ್ನೆಲೆಯಲ್ಲಿ ಈ ಕ್ರಮವನ್ನು ನೋಡಬೇಕಾಗಿದೆ.

ಚೀನಾದ ವಿರುದ್ಧ ಅಮೆರಿಕದ ಆಕ್ರಮಣಕಾರಿ ತಂತ್ರಗಳಲ್ಲಿ ಭಾರತವನ್ನು ಸೇರಿಸಿಕೊಳ್ಳುವ ಬೆಳವಣಿಗೆಯನ್ನು ಕಾರ್ಪೊರೇಟ್ ಮಾಧ್ಯಮ ಮತ್ತು ರಕ್ಷಣಾ ವಿಶ್ಲೇಷಕರು ಕೊಂಡಾಡುತ್ತಿದ್ದಾರೆ. ಭಾರತ–ಅಮೆರಿಕ ಮೈತ್ರಿಯಿಂದ ದೇಶಕ್ಕೆ ಲಾಭವಾಗುತ್ತದೆ ಎಂಬ ಹಳಸಲು ಮಾತುಗಳ ಪ್ರತಿಪಾದನೆಗೆ ವಿರುದ್ಧವಾಗಿ ಪರ್ಯಾಯವಾದ ಚರ್ಚೆಗೆ ಸಾರ್ವಜನಿಕ ವಲಯದಲ್ಲಿ ಯಾವುದೇ ಸ್ಥಾನ ಸಿಗುತ್ತಿಲ್ಲ. ಇಂಡೋ–ಪೆಸಿಫಿಕ್ ವಲಯದಲ್ಲಿ ಪ್ರಾಬಲ್ಯವನ್ನು ಉಳಿಸಿಕೊಳ್ಳುವುದೊಂದೇ ಅಮೆರಿಕದ ಆಸಕ್ತಿಯಾಗಿದ್ದು ಅದನ್ನು ಬಲವಾಗುತ್ತಿರುವ ಚೀನಾ ವಿರೋಧಿಸುತ್ತಿದೆ ಎಂಬ ವಿಚಾರವನ್ನು ಜನರು ಮನವರಿಕೆ ಮಾಡಿಕೊಳ್ಳುವುದು ಅಗತ್ಯ. ಜಗತ್ತಿನಲ್ಲಿ ಬಹುಪಕ್ಷೀಯತೆ ಹೆಚ್ಚುತ್ತಿರುವಾಗ ಮತ್ತು ಅಮೆರಿಕದ ಮಿತ್ರರಾಗಿರುವ ಮಧ್ಯಮ ಪ್ರಮಾಣದ ಬಲಿಷ್ಠ ದೇಶಗಳು ಕೂಡ ತಮ್ಮ ಮಿಲಿಟರಿ ಕಾರ್ಯತಂತ್ರದ ಸ್ವಾಯತ್ತೆಯನ್ನು ಪ್ರತಿಪಾದಿಸಲು ಬಯಸುತ್ತಿರುವಾಗ, ಅಮೆರಿಕ ನೇತೃತ್ವದ ಕಾರ್ಯತಂತ್ರಾತ್ಮಕ ಮತ್ತು ಭದ್ರತಾ ಗುಂಪುಗಳಲ್ಲಿ ಭಾರತ ಸಿಕ್ಕಿ ಹಾಕಿಕೊಳ್ಳುವುದು ದೂರದೃಷ್ಟಿಯ ಕೊರತೆಯ ಪ್ರತೀಕವಾಗಿದೆ.

ಚೀನಾದೊಂದಿಗೆ ಭಾರತದ ಸಮಸ್ಯೆಯಿರುವುದು ಮೂಲಭೂತವಾಗಿ ಗಡಿ ವಿಚಾರದಲ್ಲಿ. ಹಾಗೂ ಚೀನಾದ ಇತ್ತೀಚಿನ ಕ್ರಮಗಳಿದಾಗಿ ವಾಸ್ತವ ನಿಯಂತ್ರಣ ರೇಖೆಯಲ್ಲಿ ಶಾಂತಿ ಮತ್ತು ಸೌಹಾರ್ದ ಕಾಯ್ದುಕೊಳ್ಳುವುದು ಕಷ್ಟವಾಗುತ್ತಿದೆ. ಇವು ಉಭಯ ದೇಶಗಳು ಮಾತುಕತೆ ನಡೆಸಿ ಪರಸ್ಪರ ಬಗೆಹರಿಸಿಕೊಳ್ಳಬೇಕಾದ ವಿಚಾರಗಳಾಗಿವೆ. ಅದನ್ನು ತಾಳ್ಮೆ ಮತ್ತು ದೃಢ ಸಂಕಲ್ಪದಿಂದ ಸಾಧಿಸಬೇಕಾಗುತ್ತದೆ.

ಚೀನಾದೊಂದಿಗೆ ವಾಣಿಜ್ಯ ಮತ್ತು ಆರ್ಥಿಕ ಸಂಬಂಧಗಳನ್ನು ದುರ್ಬಲಗೊಳಿಸುವುದರಿಂದ ಭಾರತಕ್ಕೆ ಯಾವುದೇ ಲಾಭವಾಗುವುದಿಲ್ಲ. ಜಾಗತಿಕ ಆರ್ಥಿಕ ಮತ್ತು ವಾಣಿಜ್ಯ ಸಂಬಂಧಗಳಲ್ಲಿ ಚೀನಾ ಒಂದು ಪ್ರಮುಖ ಪಾತ್ರಧಾರಿ ಎನ್ನುವುದನ್ನು ಗಮನಿಸಿದಾಗ ಇದು ನಿಜವಾಗಿದೆ.

ಗಲ್ವಾನ್ ಕಣಿವೆ ಘರ್ಷಣೆಗಳ ನಂತರ, ಸಂಬಂಧದಲ್ಲಿ ಉಂಟಾದ ವ್ಯತ್ಯಯದ ನಂತರವೂ ದ್ವಿಪಕ್ಷೀಯ ವಾಣಿಜ್ಯ ಹೆಚ್ಚಾಗಿದೆ. ಅದು 2022ರಲ್ಲಿ 135.98 ಶತಕೋಟಿ ಡಾಲರ್ ಆಗಿತ್ತು. ಸ್ವತಃ ಅಮೆರಿಕವೇ ಚೀನಾದ ಆರ್ಥಿಕತೆಯಿಂದ 'ಡಿಕಪ್ಲಿಂಗ್' (ಬಾಂಧವ್ಯ ಕಡಿತ) ಕುರಿತು ಮಾತನಾಡುವುದನ್ನು ನಿಲ್ಲಿಸಿದೆ. ಅದರ ಬದಲು ಆರ್ಥಿಕ ಸಂಬಂಧಗಳನ್ನು 'ಅಪಾಯಕ್ಕೆ ಸಿಲುಕುವುದನ್ನು ತಪ್ಪಿಸುವ' ವಿಚಾರದ ಬಗ್ಗೆ ಮಾತನಾಡುತ್ತಿದೆ. ಚೀನಾದೊಂದಿಗೆ ಆರ್ಥಿಕ ಸಂಬಂಧ ಕಡಿದುಕೊಳ್ಳಬೇಕೆಂಬ ಭಾರತದ ಆಡಳಿತ ವ್ಯವಸ್ಥೆಯ ಕೆಲವು ವಿಭಾಗಗಳ ಚಿಂತನೆ ನಿಶ್ಚಯವಾಗಿಯೂ ಸ್ವಯಂ–ಹಾನಿಗೆ ಕಾರಣವಾಗಲಿದೆ.

ಅಪಾರ ಆರ್ಥಿಕ ಅವಕಾಶಗಳೊಂದಿಗೆ ಅಭಿವೃದ್ಧಿ ಹೊಂದುತ್ತಿರುವ ದೊಡ್ಡ ದೇಶವಾಗಿ ಭಾರತ, ಇತರ ಎಲ್ಲ ಪ್ರಮುಖ ದೇಶಗಳು ಮತ್ತು ವಲಯಗಳೊಂದಿಗೆ ಫಲಪ್ರದ ಸಂಬಂಧವನ್ನು ಬೆಳೆಸಿಕೊಂಡು ಬಹುಧ್ರುವೀಯ ಅಭಿವೃದ್ಧಿಯ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಸ್ಥಾನದಲ್ಲಿದೆ. ತನ್ನದೇ ಹಿತಾಸಕ್ತಿಗಳ ಮುನ್ನಡೆಗೆ ಇದು ಅಗತ್ಯವಾಗಿದೆ. ಅಮೆರಿಕದ ರಥಕ್ಕೆ ಕಟ್ಟಿಕೊಳ್ಳುವುದು ಖಂಡಿತವಾಗಗಿಯೂ ಮುನ್ನಡೆ ಸಾಧಿಸುವ ಮಾರ್ಗ ಅಲ್ಲ.

ಅನು: ವಿಶ್ವ

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ
ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ಬಿಜೆಪಿ ಸೋತಿದ್ದರೂ ಅದರ ಅಪಾಯ ತಪ್ಪಿಲ್ಲ



ರಾಷ್ಟ್ರದ ಗಮನ ಸೆಳೆದಿದ್ದ ರಾಜ್ಯ ವಿಧಾನಸಭಾ ಚುನಾವಣೆಯ ಫಲಿತಾಂಶ ಬಂದಿದೆ. ಬಿಜೆಪಿಯನ್ನು ಜನತೆ ನಿರ್ಣಾಯಕವಾಗಿ ಸೋಲಿಸಿದ್ದಾರೆ. ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ ನೀಡಿದ್ದಾರೆ. ದೀರ್ಘ ಕಸರತ್ತು ರಾಜಿ ಕಬೂಲಿಯ ನಂತರ ನೂತನ ಸರ್ಕಾರ ಸಿದ್ಧರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಪ್ರಮಾಣ ವಚನ ಸ್ವೀಕರಿಸಿದೆ.

ಬಿಜೆಪಿಯು ತನ್ನೆಲ್ಲಾ ಶಕ್ತಿ ಸಾಮರ್ಥ್ಯವನ್ನು ಪಣಕ್ಕಿಟ್ಟು ಸ್ವತಃ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹಸಚಿವರಾದ ಅಮಿತ್ ಶಾ ರವರೆ ಬೀದಿಗಿಳಿದು ರಾಜ್ಯದ 2 ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದೆಲ್ಲಾ ಜಿಲ್ಲೆಗಳಲ್ಲೂ ಸುತ್ತಿ ಪ್ರಚಾರ ನಡೆಸಿದ್ದಾರೆ. ಚುನಾವಣೆಯಲ್ಲಿ ಮತ ಚಲಾಯಿಸಿದ ನಂತರ ಜೈ ಭಜರಂಗಬಲಿ ಎಂದು ಘೋಷಣೆ ಹಾಕಿ ಎನ್ನುವ ಬಹಿರಂಗ ಹೇಳಿಕೆಯನ್ನು ಪ್ರಧಾನಿಗಳೇ ನೀಡಿದ್ದರು, ಮುಸ್ಲಿಂ ಮೀಸಲಾತಿ ಕಸಿದು ಒಕ್ಕಲಿಗರು ಮತ್ತು ಲಿಂಗಾಯತರಿಗೆ ಹಂಚಿಕೆ ಮಾಡಿದ್ದರು, ಒಕ್ಕಲಿಗರನ್ನು ಮುಸ್ಲಿಂ ವಿರುದ್ಧ ಅಣಿನೆರೆಸಿಕೊಳ್ಳಲು ಕಾಲ್ಪನಿಕ ಉರಿಗೌಡ ದೊಡ್ಡನಂಜೇಗೌಡರನ್ನ ಸೃಷ್ಟಿಸಿದ್ದರು. ಹಿಜಾಬ್, ಹಲಾಲ್, ಹಜಾನ್, ಮುಸ್ಲಿಂ ವ್ಯಾಪಾರಿಗಳಿಗೆ ಹಿಂದು ದೇವಾಲಯ ಬಳಿ ಮತ್ತು ಜಾತ್ರೆಗಳಲ್ಲಿ ವ್ಯಾಪಾರಕ್ಕೆ ನಿಷೇಧ ಮುಂತಾದ ಅಂಶಗಳನ್ನು ವ್ಯಾಪಕವಾಗಿ ಹರಿಬಿಟ್ಟಿದ್ದರು. ಅಪಾರ ಹಣ, ಆಮಿಷ, ಜಾತಿ, ಪ್ರದೇಶ ಸಮೀಕರಣ ಉಪಜಾತಿ, ಒಳಮೀಸಲಾತಿ, ಮತಾಂತರ, ಏನ್ನೆಲ್ಲಾ ಹಿಂದುತ್ವವಾದಿ ಅಸ್ತ್ರಗಳನ್ನೆಲ್ಲಾ ಪ್ರಯೋಗಿಸಿದ್ದರು. ರಾಜ್ಯವನ್ನು ಮತ್ತೊಂದು ಗುಜರಾತ್ ಅಥವಾ ಉತ್ತರಪ್ರದೇಶ ಮಾಡುವ ಭರವಸೆ ಬಿತ್ತಲು ಯತ್ನಿಸಿದ್ದರು. ಆದರೂ ಸಹಾ ರಾಜ್ಯದ ಜನತೆ ಬಿಜೆಪಿಯನ್ನು ಅಧಿಕಾರದಿಂದ ಇಳಿಸಿಯೇ ಬಿಟ್ಟಿದ್ದಾರೆ.

ಬಿಜೆಪಿ 66 ಸ್ಥಾನಗಳನ್ನು, ಕಾಂಗ್ರೆಸ್ 135 ಸ್ಥಾನಗಳನ್ನು ಪಡೆದಿದೆ. ಪ್ರಾದೇಶಿಕ ಪಕ್ಷದ ಪಾತ್ರವನ್ನು ನಿರ್ಣಾಯಕವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಸ್ಪರ್ಧಿಸಿದ್ದ ಜೆಡಿ(ಎಸ್) ಕೇವಲ 19 ಸ್ಥಾನಗಳನ್ನು ಪಡೆದು ಬಲಹೀನವಾಗಿದೆ. ಚುನಾವಣೋತ್ತರ ಸಮೀಕ್ಷೆಯಂತೆ ಅತಂತ್ರ ವಿಧಾನಸಭೆ ರೂಪಿತವಾಗುವ ಮತ್ತು ಆ ಮೂಲಕ ಮತ್ತೆ ಪರೋಕ್ಷವಾಗಿ ಅಧಿಕಾರ ಹಿಡಿಯುವ ಬಿಜೆಪಿಯ ಯತ್ನಗಳಿಗೂ ಅವಕಾಶವಿಲ್ಲದಂತೆ ಫಲಿತಾಂಶವು ಹೊರಹೊಮ್ಮಿರುವುದು ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸಬೇಕೆಂಬ ಜನತೆಯ ಆಶಯವನ್ನು ತೋರುತ್ತದೆ. ಒಟ್ಟಾರೆ ಚುನಾವಣೆ ಫಲಿತಾಂಶವು ಕಾಂಗ್ರೆಸ್ ಹಾಗೂ ಬಿಜೆಪಿ ನಡುವಿನ ಧೃವೀಕರಣವನ್ನು ತೋರುತ್ತದೆ.

2018ಕ್ಕೆ ಹೋಲಿಸಿದ್ದಲ್ಲಿ ಬಿಜೆಪಿಯು 37 ಸ್ಥಾನಗಳನ್ನು ಕಳೆದುಕೊಂಡಿದ್ದರೆ 2019ರ ಆಪರೇಷನ್ ಕಮಲ ನಂತರದ

ಕರ್ನಾಟಕ ವಿಧಾನಸಭಾ ಚುನಾವಣೆಯ ಕುರಿತು ಸಿಪಿಐ(ಎಂ) ರಾಜ್ಯ ಸಮಿತಿ ಅವಲೋಕಿಸಿದ ಪ್ರಾಥಮಿಕ ವಿಮರ್ಶೆಯ ಸಾರವನ್ನು ಸಾದರಪಡಿಸಿದ್ದಾರೆ ಕೇಂದ್ರ ಸಮಿತಿಯ ಸದಸ್ಯರಾದ ಕೆ.ಎನ್. ಉಮೇಶ್ ರವರು.

ಉಪಚುನಾವಣೆಯಲ್ಲಿನ ಅದರ 116 ಸ್ಥಾನಗಳಿಗೆ ಹೋಲಿಸಿದ್ದಲ್ಲಿ 50 ಸ್ಥಾನಗಳನ್ನು ಕಳೆದುಕೊಂಡಿದೆ. ಆದರೆ ಶೇಕಡವಾರು ಮತಪ್ರಮಾಣದಲ್ಲಿ ತನ್ನ ಹಿಂದಿನ 36 ಶೇಕಡವನ್ನು ಉಳಿಸಿಕೊಂಡಿದ್ದು ಕೇವಲ 0.35 ಶೇಕಡವನ್ನು ಮಾತ್ರ ಕಳೆದುಕೊಂಡಿದೆ. ತನ್ನ ಎಂದಿನ ಕರಾವಳಿ, ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಪ್ರದೇಶದಲ್ಲಿ ಒಟ್ಟಾರೆ 11 ಶೇಕಡ ಮತವನ್ನು ಕಳೆದುಕೊಂಡಿರುವ ಬಿಜೆಪಿಯು ದಕ್ಷಿಣ ಮತ್ತು ಮಲೆನಾಡು ಕರ್ನಾಟಕ ಹಾಗೂ ಬೆಂಗಳೂರು ನಗರದಲ್ಲಿ ಬಹುತೇಕ 9 ಶೇಕಡ ಮತಗಳನ್ನು ಹೆಚ್ಚುವರಿಯಾಗಿ ಪಡೆಯುವ ಮೂಲಕ ತನ್ನ ಶೇಕಡವಾರು ಮತಪ್ರಮಾಣವನ್ನು ಉಳಿಸಿಕೊಂಡಿದೆ. ಹಾಗಾಗಿ ತನ್ನ ನೆಲೆಗಳಲ್ಲಿ ಶೇಕಡವಾರು ಮತಪ್ರಮಾಣ ಕಳೆದುಕೊಂಡಿದ್ದರೂ ಇತರೆ ಪ್ರದೇಶಗಳಲ್ಲಿ ಗಳಿಸಿಕೊಳ್ಳುವ ಮೂಲಕ ತನ್ನ ಒಟ್ಟಾರೆ ಪ್ರಮಾಣವನ್ನು ಕಾಯ್ದುಕೊಂಡಿದೆ. ಬಿಜೆಪಿ ಶಾಸಕ ಸ್ಥಾನಗಳ ಪ್ರಮಾಣದಲ್ಲಿ ಕಡಿಮೆ ಸ್ಥಾನಗಳನ್ನು ಪಡೆದಿದ್ದರೂ ಶೇಕಡವಾರು ಮತ ಪ್ರಮಾಣದ ಲೆಕ್ಕದಲ್ಲಿ ತೀವ್ರ ಹಿನ್ನಡೆಯನ್ನೇನೂ ಕಂಡಿಲ್ಲ. ಹಾಗಾಗಿ ಬಿಜೆಪಿ ನಿರ್ಣಾಯಕವಾಗಿ ಸೋತ್ತಿದ್ದರೂ ಮೂಲೆಗುಂಪಾಗಿಲ್ಲದಿರುವುದರ ಅಪಾಯವನ್ನು ಮನಗಾಣಬೇಕಿದೆ.

ಕಾಂಗ್ರೆಸ್ ತನ್ನ ಸ್ಥಾನಗಳನ್ನು 55ರಷ್ಟು ಹೆಚ್ಚಿಸಿಕೊಂಡು ಶೇಕಡವಾರು ಮತಪ್ರಮಾಣವನ್ನು ಸಹಾ 4.74 ರಷ್ಟು ಹೆಚ್ಚಿಸಿಕೊಂಡಿದೆ. ಬಿಜೆಪಿ ಸರ್ಕಾರದ ವಿರೋಧಿ ಅಲೆ ಮತ್ತು ಜೆಡಿ(ಎಸ್) ಮೇಲಿನ ವಿಶ್ವಾಸದ ಕೊರತೆ ಕಾಂಗ್ರೆಸ್‌ಗೆ ಸಹಕಾರಿಯಾಗಿದೆ. ಬಿಜೆಪಿ ಸರ್ಕಾರದ ಬೆಲೆ ಏರಿಕೆ, ಭ್ರಷ್ಟಾಚಾರ, ಕೋಮು ವಿಭಜಕ ಯತ್ನಗಳು, ಕೇಂದ್ರದ ನೀತಿಗಳು ಮತ್ತು ಅವುಗಳ ವಿರುದ್ಧ ನಿರಂತರವಾಗಿ ನಡೆಯುತ್ತಿರುವ ಜನ ಚಳುವಳಿಗಳು ಹಾಗೂ ಈ ಕಾಲಾವಧಿಯಲ್ಲಿ ಕಾಂಗ್ರೆಸ್‌ನ ಕ್ರಿಯಾಶೀಲತೆ, ಐಕ್ಯತೆಯ ಪ್ರದರ್ಶನ, ಭಾರತ್ ಜೊಡೊ ಯಾತ್ರೆಯು ಸಹಾ ಕಾಂಗ್ರೆಸ್‌ನ ಗೆಲುವಿಗೆ ಕೊಡುಗೆ ನೀಡಿವೆ. ನವಉದಾರವಾದಿ ಆರ್ಥಿಕ ನೀತಿಯ ಜಾರಿಯಿಂದ ಸಂಕಷ್ಟ ಎದುರಿಸುತ್ತಿರುವ ಜನತೆಗೆ ಕಾಂಗ್ರೆಸ್‌ನ ಗ್ಯಾರಂಟಿಗಳು ಆಶಾದಾಯಕವಾಗಿ ಗೋಚರಿಸಿವೆ. ಕೋಮು ವಿಭಜಕ ಯತ್ನಗಳ ವಿರುದ್ಧ ಅಲ್ಪಸಂಖ್ಯಾತರು, ದಲಿತರು ಮತ್ತಿತರೆ ಹಿಂದುಳಿದ ವರ್ಗಗಳು ನಿರ್ಣಾಯಕವಾಗಿ ಕಾಂಗ್ರೆಸ್ ಪರ ಮತ ಚಲಾಯಿಸಿರುವುದನ್ನು ಕಾಣಬಹುದಾಗಿದೆ.

ಬಿಜೆಪಿ ಶಾಸಕ ಸ್ಥಾನಗಳ ಪ್ರಮಾಣದಲ್ಲಿ ಕಡಿಮೆ ಸ್ಥಾನಗಳನ್ನು ಪಡೆದಿದ್ದರೂ ಶೇಕಡವಾರು ಮತ ಪ್ರಮಾಣದ ಲೆಕ್ಕದಲ್ಲಿ ತೀವ್ರ ಹಿನ್ನಡೆಯನ್ನೇನೂ ಕಂಡಿಲ್ಲ. ಹಾಗಾಗಿ ಬಿಜೆಪಿ ನಿರ್ಣಾಯಕವಾಗಿ ಸೋತ್ತಿದ್ದರೂ ಮೂಲೆಗುಂಪಾಗಿಲ್ಲದಿರುವುದರ ಅಪಾಯವನ್ನು ಮನಗಾಣಬೇಕಿದೆ.

ಅಲ್ಪಸಂಖ್ಯಾತ ಮುಸ್ಲಿಂರ ಮೀಸಲಾತಿಯನ್ನು ಕಸಿದು ಒಕ್ಕಲಿಗರು, ಲಿಂಗಾಯುತರಿಗೆ ಹಂಚಿ ಹಾಗೆ ಒಳಮೀಸಲಾತಿಯ ಮೂಲಕ ದಲಿತರಲ್ಲಿ ವಿಭಜನೆ ತಂದು ಅದರ ಲಾಭ ಪಡೆಯಬೇಕೆಂಬ ಬಿಜೆಪಿಯ ಆಶಯಗಳಿಗೆ ಸ್ಪಂದಿಸದೆ ರಾಜ್ಯದ ಜನತೆಯು ಹಾಗೂ ಸಂಬಂಧಪಟ್ಟ ಸಾಮಾಜಿಕ ಸಮುದಾಯಗಳು ಬಿಜೆಪಿಯನ್ನು ಸೋಲಿಸಿದ್ದಾರೆ. ಆದಾಗ್ಯೂ ದಕ್ಷಿಣ ಹಾಗೂ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಬಿಜೆಪಿಯ ಧೃವೀಕರಣ ಯತ್ನಗಳು ಫಲನೀಡಿವೆ. ಅನನ್ಯತೆಯ ರಾಜಕಾರಣದ ಜಾತಿ ಧೃವೀಕರಣವೂ ಕೂಡ ಕ್ಷೇತ್ರವಾರು ಪ್ರತಿಫಲನ ಗೊಂಡಿರುವುದನ್ನು ಕಾಣಬಹುದಾಗಿದೆ.

ಬಿಜೆಪಿ ಹಿಂದಿನಿಂದ ನಿಯಂತ್ರಿಸುತ್ತಿದ್ದ ಆರ್‌ಎಸ್‌ಎಸ್ ಈ ಬಾರಿಯ ಚುನಾವಣೆಯಲ್ಲಿ ನೇರವಾಗಿ ನಾಯಕತ್ವ ನೀಡಲು ಮಂದಾದ ಅಂಶ, ಲಿಂಗಾಯತ್ ಮತ್ತು ಬ್ರಾಹ್ಮಣರ ನಡುವಿನ ಆಂತರಿಕ ಉತ್ತೇಜನ, ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾದ ನಂತರ ಬಿಜೆಪಿಯೊಳಗಿನ ಅತೃಪ್ತಿ, ಪರಿಣಾಮಕಾರಿಯಲ್ಲದ ಆಡಳಿತ, ಆಂತರಿಕ ಕಿತ್ತಾಟ ಇವು ಸಹ ಅದರ ಸೋಲಿಕೆ ಸಹಕಾರಿಯಾಗಿದೆ.

ರಾಜ್ಯದ ಗುತ್ತಿಗೆದಾರರು ಶೇ.40 ಭ್ರಷ್ಟಾಚಾರದ ಆರೋಪ ಮಾಡಿ ಪ್ರಧಾನ ಮಂತ್ರಿಗಳಿಗೆ ದೂರು ನೀಡಿದರು ಸಹ ಕೇಂದ್ರ ಸರ್ಕಾರ ಹಾಗೂ ಪ್ರಧಾನಿಗಳು ಅದಕ್ಕೆ ಸ್ಪಂದಿಸದಿದ್ದ ಬೆಳವಣಿಗೆಯೊಂದಿಗೆ ಬಿಜೆಪಿಯ ಮೇಲೆ ಹಿಡಿತ ಸಾಧಿಸಲು ಮುಂದಾದ ಆರ್‌ಎಸ್‌ಎಸ್ ಪ್ರಭಾವಿ ಜಾತಿಗಳಾದ ಲಿಂಗಾಯತರು ಮತ್ತು ಒಕ್ಕಲಿಗ ನಾಯಕರನ್ನು ನಿರ್ಲಕ್ಷಿಸಿದ್ದು ಸೇರಿ ಗುತ್ತಿಗೆದಾರರು ಮತ್ತು ಪ್ರಭಾವಿ ಜಾತಿಗಳ ನಡುವಿನ ನಂಟು ಕಾಂಗ್ರೆಸ್ ಗೆಲುವಿಗೆ ಸಹಕಾರಿಯಾಗಿದೆ. ಮುಸ್ಲಿಂ ಅಲ್ಪಸಂಖ್ಯಾತರಿಗೆ ಮೀಸಲಾತಿ ರದ್ದತಿಯ ಅಂಶ ಕುರಿತು ಬಿಜೆಪಿ ನಿರೀಕ್ಷಿಸಿದ ರೀತಿಯಲ್ಲಿ ಬೀದಿ ಹೋರಾಟಕ್ಕೆ ಮುಸ್ಲಿಂ ಅಲ್ಪಸಂಖ್ಯಾತರು ಇಳಿಯದೆ ತೋರಿದ ಜಾಣ್ಮೆಯು ಬಿಜೆಪಿಯ ಧೃವೀಕರಣದ ಯತ್ನಗಳು ಫಲಕಾರಿಯಾಗದಂತೆ ತಡೆದಿವೆ.

ಕುಸಿಯುತ್ತಿರುವ ಜೆಡಿ(ಎಸ್) ಮತಪ್ರಮಾಣ:

ಜೆಡಿ(ಎಸ್) 18 ಸ್ಥಾನಗಳನ್ನು ಕಳೆದುಕೊಂಡು ಕೇವಲ 19 ಸ್ಥಾನಗಳನ್ನು ಮಾತ್ರ ಪಡೆದಿದೆ. 5 ಶೇಕಡ ಮತಪ್ರಮಾಣವನ್ನು ಕಳೆದುಕೊಂಡಿದೆ. ಅದರ ಬಹುತೇಕ ಲಾಭವನ್ನು ಕಾಂಗ್ರೆಸ್ ಪಡೆದುಕೊಂಡಿದೆ. 2008 ರಲ್ಲಿ ಶೇ.19 ಮತ ಪಡೆದಿದ್ದ ಜೆಡಿಎಸ್ 2013 ರಲ್ಲಿ ಶೇ.20.2, 2018 ರಲ್ಲಿ ಶೇ.18.3, 2023 ರಲ್ಲಿ ಶೇ.13.3 ಮತ ಪಡೆಯುವ ಮೂಲಕ ನಿರಂತರವಾಗಿ ಪ್ರತಿ ಚುನಾವಣೆಯಲ್ಲು ತನ್ನ ಮತ ಪ್ರಮಾಣವನ್ನು ಕಳೆದುಕೊಳ್ಳುತ್ತಾ ಬಂದಿದೆ. ಆದರೆ ಕಾಂಗ್ರೆಸ್ ತನ್ನ ಮತ ಪ್ರಮಾಣವನ್ನು 34.8 ಶೇ ದಿಂದ ಶೇ.42.9 ಕ್ಕೆ, ಬಿಜೆಪಿಯು ಶೇ.33.9 ರಿಂದ ಶೇ.36 ಕ್ಕೆ ಹೆಚ್ಚಿಸಿಕೊಂಡಿದೆ.

ಇತರರು ಗಳಿಸಿರುವ 4 ಸ್ಥಾನಗಳಲ್ಲಿ ಇಬ್ಬರು ಈಗಾಗಲೇ ತಮ್ಮ ಕಾಂಗ್ರೆಸ್ ಸೇರ್ಪಡೆಯನ್ನು ಪ್ರಕಟಿಸಿದ್ದಾರೆ. ಉಳಿದಂತೆ ಕಲ್ಯಾಣ ಕರ್ನಾಟಕ ಪ್ರಗತಿ ಪಕ್ಷದ ಜನಾರ್ಧನರೆಡ್ಡಿ ಸಿದ್ಧರಾಮಯ್ಯ ಮುಖ್ಯಮಂತ್ರಿ ಯಾಗುವುದನ್ನು ಬೆಂಬಲಿಸುವುದಾಗಿ ಪ್ರಕಟಿಸಿದ್ದಾರೆ. ಇತರರ ಮತಪ್ರಮಾಣದಲ್ಲಿ ಕೇವಲ 0.4 ಶೇಕಡ ಮತಪ್ರಮಾಣವು ಹೆಚ್ಚಳವಾಗಿದೆ. ಕಾಂಗ್ರೆಸ್ ಬೆಂಬಲಿತ ಸರ್ವೋದಯ ಕರ್ನಾಟಕದ ಅಭ್ಯರ್ಥಿಯು ಮೇಲುಕೋಟೆ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದಾರೆ.

ಚುನಾಯಿತ ಶಾಸಕರಲ್ಲಿ 10 ಮಹಿಳಾ ಶಾಸಕಿಯರಿದ್ದಾರೆ. 51 ಮೀಸಲು ಕ್ಷೇತ್ರಗಳಲ್ಲಿ 35 ರಲ್ಲಿ ಕಾಂಗ್ರೆಸ್, 12 ರಲ್ಲಿ ಬಿಜೆಪಿ, 4 ರಲ್ಲಿ ಜೆಡಿಎಸ್ ಗೆಲುವು ಸಾಧಿಸಿದೆ. 32 ಪಕ್ಷಾಂತರಿಗಳಲ್ಲಿ 8 ಅಭ್ಯರ್ಥಿಗಳು ಮಾತ್ರ ಗೆಲುವು ಸಾಧಿಸಿದ್ದಾರೆ. ನೂತನ ಶಾಸಕರಲ್ಲಿ 122 ಜನ ಅಪರಾಧ ಹಿನ್ನೆಲೆಯುಳ್ಳ ಶಾಸಕರಿದ್ದಾರೆ.

ಪುಟ 10 ಕ್ಕೆ



ಎರಡು ದೊಡ್ಡ ರಾಷ್ಟ್ರೀಯ ಪಕ್ಷಗಳಲ್ಲಿ ಮತಗಳ ಕ್ರೋಢೀಕರಣ

ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಬೆಳವಣಿಗೆಗೆ ಮತ್ತೊಂದು ಅಡ್ಡಿ

ಸಿ. ಸಿದ್ದಯ್ಯ

ಕರ್ನಾಟಕ ವಿಧಾನಸಭಾ ಚುನಾವಣೆ ಇಡೀ ದೇಶದ ಗಮನ ಸೆಳಿದಿದೆ. ದಕ್ಷಿಣ ಭಾರತದ ಏಕೈಕ ರಾಜ್ಯದಲ್ಲಿದ್ದ ಅಧಿಕಾರವನ್ನು ಬಿಜೆಪಿ ಕಳೆದುಕೊಂಡಿದೆ. ಇದು ಮುಂದಿನ ಲೋಕಸಭಾ ಚುನಾವಣೆಯ ದಿಕ್ಸೂಚಿ ಎಂದು ರಾಜಕೀಯ ವಿಶ್ಲೇಷಕರು ಹೇಳತೊಡಗಿದ್ದಾರೆ. ಬಿಜೆಪಿ ಕೇಂದ್ರದಲ್ಲಿ ಅಧಿಕಾರ ಕಳೆದುಕೊಳ್ಳುವ ಸೂಚನೆಯನ್ನು ಈ ಪಲಿತಾಂಶ ತೋರಿಸುತ್ತದೆ ಎನ್ನುತ್ತಾರೆ. ಮೋದಿ ಆಕರ್ಷಣೆ ಕಡಿಮೆಯಾಗಿದೆ, ದೇವರು, ಧರ್ಮದ ಹೆಸರಿನಲ್ಲಿ ರಾಜಕೀಯ ಲಾಭಗಳಿಸುವ ಸಂಘಪರಿವಾರದ ತಂತ್ರಗಾರಿಕೆ ಇನ್ನು ಮುಂದೆ ನಡೆಯುವುದಿಲ್ಲ, ಬಿಜೆಪಿ ಆಡಳಿತದಿಂದ ಜನರು ಬೇಸತ್ತಿದ್ದಾರೆ, ಬೆಲೆಯೇರಿಕೆ, ನಿರುದ್ಯೋಗದಿಂದ ಜನರುನೊಂದಿದ್ದಾರೆ, ಇದು ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಪ್ರತಿಫಲನಗೊಂಡಿದೆ ಎಂದೆಲ್ಲಾ ಕಾರಣಗಳನ್ನು ಕೊಡತೊಡಗಿದ್ದಾರೆ.

ಕರ್ನಾಟಕದಲ್ಲಿ ಬಿಜೆಪಿ ಸೋಲಿಗೆ ಈ ಅಂಶಗಳೂ ಕಾರಣ ಎಂಬುದನ್ನು ಅಲ್ಲಗಳೆಯಲಾಗದು. ಜೊತೆಗೆ, ಕೋಮುವಾದಿ ಬಿಜೆಪಿಯನ್ನು ಸೋಲಿಸಲೇಬೇಕೆಂದು ಪಣತೊಟ್ಟು ಪ್ರಗತಿಪರ ಮತ್ತು ಪ್ರಜಾಸತ್ತಾತ್ಮಕ ಸಂಘಟಣೆಗಳು, ರಾಜಕೀಯ ಶಕ್ತಿಗಳು, ಚಿಂತಕರು, ಎಡಪಕ್ಷಗಳು ವ್ಯಾಪಕ ಪ್ರಚಾರ, ಸಭೆ, ಸಮಾರಂಭ, ವಿಚಾರಸಂಕಿರಣ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಬಿಜೆಪಿ ದುರಾಡಳಿತದ ವಿಷಯಗಳನ್ನು ಜನರ ನಡುವೆ ಕೊಂಡೊಯ್ಯಲು ಶ್ರಮಿಸಿದರು. ಇದಕ್ಕಾಗಿ, ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸಬಲ್ಲ ಯಾವುದೇ ಪಕ್ಷಗಳ ಅಥವಾ ಪಕ್ಷೇತರ ಅಭ್ಯರ್ಥಿಗಳಿಗೆ ಮತ ನೀಡಲು ನಿರ್ಧರಿಸಿ, ಜನತೆಗೂ ಇದನ್ನೇ ಕರೆ ನೀಡಿದರು.

ಕರ್ನಾಟಕದಲ್ಲಿ ಬಹುತೇಕ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಸೋಲಿಸಬಲ್ಲ ಶಕ್ತಿ ಕಾಂಗ್ರೆಸ್ ಪಕ್ಷಕ್ಕಿದೆ. ಜೆಡಿಎಸ್ 30 ರಿಂದ 40 ಸ್ಥಾನಗಳಲ್ಲಿ ಪ್ರಭಲವಾಗಿದ್ದರೂ, ಬಿಜೆಪಿಯನ್ನು ಸೋಲಿಸಬೇಕೆಂಬ ಗುರಿಯೊಂದಿಗೆ ಹಲವು ಕ್ಷೇತ್ರಗಳಲ್ಲಿ ಜೆಡಿಎಸ್ ನ ಮತದಾರರೂ ಕಾಂಗ್ರೆಸ್ ಆಭ್ಯರ್ಥಿಗಳಿಗೆ ಮತ ನೀಡಿದ್ದಾರೆ. ಜೆಡಿಎಸ್ ನ ಮತ ಪ್ರಮಾಣವೂ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಡೆದ ಶೇ. 18.30 ರಿಂದ ಶೇ. 13.29 ಕ್ಕೆ ಇಳಿದು, ಶೇ. 5.1 ರಷ್ಟು ಮತ ಕಡಿಮೆಯಾಗಿದೆ. ಹೀಗಾಗಿ, ಕಳೆದ ಬಾರಿ 36 ಸ್ಥಾನಗಳಲ್ಲಿ ಜಯಗಳಿಸಿದ್ದ ಜೆಡಿಎಸ್ ಈ ಬಾರಿ 19 ಸ್ಥಾನಗಳನ್ನು ಮಾತ್ರ ಗಳಿಸಲು ಸಾಧ್ಯವಾಯಿತು.

2018ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಡೆದ ಒಟ್ಟು ಮತಗಳು– ಶೇ. 74.49. 2023ರಲ್ಲಿ ಇದರ ಪ್ರಮಾಣ ಶೇ. 78.88. ಅಂದರೆ, ಈ ಎರಡು ಪಕ್ಷಗಳು ಪಡೆದ ಒಟ್ಟು ಮತಗಳಲ್ಲಿ ಶೇ. 4.48 ರಷ್ಟು ಹೆಚ್ಚಾಗಿದೆ. 2018ರ ಚುನಾವಣೆಯಲ್ಲಿಯೂ ಈ ಎರಡು ಪಕ್ಷಗಳು ಒಟ್ಟಾರೆಯಾಗಿ ಅದರ ಹಿಂದಿನ ಚುನಾವಣೆಗಿಂತ ಹೆಚ್ಚು ಮತಗಳನ್ನು ಪಡೆದಿದ್ದವು. ಇದು, ಎರಡು ದೊಡ್ಡ ಪಕ್ಷಗಳ ನಡುವೆ ಸರಧಿಯಂತೆ ಅಧಿಕಾರ ಹಂಚಿಕೊಳ್ಳುವ ಇಂದಿನ ಪರಿಸ್ಥಿತಿಗೆ ಮತ್ತಷ್ಟು ಬಲ ತಂದಿದೆ.

ಹಣದ ಪ್ರಭಾವ:

ಜನತೆ ಕೇಂದ್ರ ಮತ್ತು ರಾಜ್ಯ ಬಿಜೆಪಿ (ಅವರೇ ಹೇಳುವಂತೆ ಡಬಲ್ ಎಂಜಿನ್ ಸರ್ಕಾರ) ಆಡಳಿತದಿಂದ ಬೇಸತ್ತಿದ್ದಾರೆ. ಮೋದಿಯವರ ಹುಸಿ ಭರವಸೆಗಳು, ಬಣ್ಣ ಬಣ್ಣದ ಮಾತುಗಳು, ಅವರ ನಟನೆಗಳು, ರೋಡ್ ಶೋಗಳು ಇವೆಲ್ಲವೂ ಬಹಳಷ್ಟು ಜನರಲ್ಲಿ ಅಸಹ್ಯ ಹುಟ್ಟಿಸಿವೆ. ಮೋದಿ ಸರ್ಕಾರದ ಜನವಿರೋಧಿ ನೀತಿಗಳಿಂದ, ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ, ನಿರುದ್ಯೋಗ ಸಮಸ್ಯೆಗಳಿಂದ ಜನತೆ ಸಂಕಷ್ಟಗಳಿಗೆ ಸಿಲುಕಿದ್ದಾರೆ. ಲಂಗುಲಗಾಮಿಲ್ಲದೆ ಜಾರಿಯಾಗುತ್ತಿರುವ ಮುಕ್ತ ಆರ್ಥಿಕನೀತಿಗಳು ಜನರ ಬದುಕನ್ನು ಕಸಿದುಕೊಂಡಿವೆ. ಚಿಲ್ಲರೆ ವ್ಯಾಪಾರ ವಲಯ ಸೇರಿದಂತೆ ಬಹುತೇಕ ಎಲ್ಲಾ ವಲಯಗಳಲ್ಲೂ ವಿದೇಶಿ ನೇರ ಬಂಡವಾಳ ಹೂಡಿಕೆ(FDI)ಗೆ ಮುಕ್ತ ಅವಕಾಶಗಳನ್ನು ಕೊಟ್ಟಿರುವ ಪರಿಣಾಮ, ಮತ್ತು ಕಾರ್ಪೋರೇಟ್ ಕಂಪನಿಗಳು ಈ ವಲಯಗಳನ್ನು ಏಕಸ್ವಾಮ್ಯ ಮಾಡಿಕೊಳ್ಳಲು ಹೊರಟಿರುವ ಕಾರಣದಿಂದಾಗಿ, ಇವುಗಳ ಪೈಪೋಟಿ ಎದುರಿಸಲಾರದೆ ಲಕ್ಷಾಂತರ ಸಣ್ಣ ವ್ಯಾಪಾರಿಗಳು, ಸಣ್ಣಉದ್ಯಮಗಳು ಮುಚ್ಚಿಹೋಗಿವೆ ಅಥವಾ ಮುಚ್ಚಿಹೋಗುವ ಹಂತದಲ್ಲಿವೆ, ಲಾಭದಾಯಕ ಸಾರ್ವಜನಿಕ ಉದ್ಯಮಗಳ ಖಾಸಗೀಕರಣ ಅಡೆತಡೆ ಇಲ್ಲದೆ ನಡೆಯುತ್ತಿದೆ. ಸಾರ್ವಜನಿಕ ಉದ್ಯಮಗಳಲ್ಲಿ ಖಾಯಂ ನೌಕರರ ನೇಮಕಾತಿ ಸ್ಥಗಿತಗೊಂಡಿದೆ. ಸಾರ್ವಜನಿಕ ಬ್ಯಾಂಕುಗಳಿಂದ ಪಡೆದ ಉದ್ಯಮಿಗಳ 11 ಲಕ್ಷಕೋಟಿ ಸಾಲ ಮನ್ನಾ/ರೈಟ್ ಆಫ್ ಮಾಡಲಾಗಿದೆ. ಈ ರೀತಿ ಸಾರ್ವಜನಿಕರ ಸಂಪತ್ತನ್ನು ಕೆಲವೇ ಉದ್ಯಮಿಗಳು ದೋಚತೊಡಗಿದ್ದಾರೆ.. ಹೇಳುತ್ತಾ ಹೋದರೆ ಪಟ್ಟಿ ದೊಡ್ಡದಿದೆ. ಜೊತೆಗೆ ಕೊರೋನಾ ಸಂದರ್ಭದಲ್ಲಿ ಸಕಾಲಕ್ಕೆ ಸರ್ಕಾರದ ನೆರವು ಸಿಗದೆ, ಜನರು ಅನುಭವಿಸಿದ ನೋವುಗಳನ್ನು ಜನರು ಇನ್ನೂ ಮರೆತಿಲ್ಲ. ಜನರ ನಡುವೆ ಕೋಮುದ್ವೇಷ ಹರಡುವುದು ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧದ ಬಿಜೆಪಿ ಸರ್ಕಾರದ ನಡೆಗಳು, ಇವು ಕೂಡ ಚುನಾವಣೆಯಲ್ಲಿ ಅಲ್ಪಸಂಖ್ಯಾತರು ಬಿಜೆಪಿ ವಿರುದ್ಧ ಒಟ್ಟಾಗಿ ಮತ ಹಾಕಲು ಕಾರಣವಾಗಿದೆ ಎಂದು ಅನೇಕ ಕಡೆ ಜನತೆ ಭಾವಿಸಿದಂತಿದೆ

ಜೆಡಿಎಸ್ ಪಕ್ಷವು ಬಿಜೆಪಿಯ ಬಗ್ಗೆಯೂ ವಿರೋಧವಿದ್ದರೂ ಚುನಾವಣೋತ್ತರದಲ್ಲಿ ಸಂಭವಿಸಬಹುದಾದ ಹೊಂದಾಣಿಕೆಯ ಬಗ್ಗೆ ಅನುಮಾನಗಳು ಎದ್ದಿದ್ದವು. ಇಷ್ಟೆಲ್ಲಾ ಹೇಳುವಾಗಲೂ ಚುನಾವಣೆಯ ಗೆಲುವಿನಲ್ಲಿ ಹಣದ ಪ್ರಭಾವ ದಟ್ಟವಾಗಿ ಎದ್ದು ಕಾಣುತ್ತದೆ. ಬಿಜೆಪಿ ವಿರುದ್ದ ಅಸಮಾಧಾನ ಹೊಂದಿರುವ ಮತದಾರರನ್ನು ತಮ್ಮತ್ತ ಸೆಳೆಯಲು ವಿರೋಧಿ ರಾಜಕೀಯ ಪಕ್ಷಗಳು/ ಅಭ್ಯರ್ಥಿಗಳು ಬೃಹತ್ ಪ್ರಮಾಣದಲ್ಲಿ ಹಣ 'ಚೆಲ್ಲಿದ್ದಾರೆ'. ತನ್ನ ಆಡಳಿತದಿಂದ ಬೇಸತ್ತು ದೂರ ಸರಿದಿರುವ ಮತದಾರರ ಮತ ಪಡೆಯಲು ಬಿಜೆಪಿ ಪೈಪೋಟಿಗೆ ಬಿದ್ದು ಹಣ ಹಂಚಿಕೆ ಮಾಡಿದೆ. ಎರಡು ದೊಡ್ಡ ಬಂಡವಾಳಶಾಹಿ ರಾಷ್ಟ್ರೀಯ ಪಕ್ಷಗಳ ಹಣದ ಎದುರು ಪೈಪೋಟಿ ನೀಡಲಾಗದ ಜನತಾದಳ 19 ಸ್ಥಾನ ಪಡೆಯಲೂ ಏದುಸಿರು ಬಿಡಬೇಕಾಯಿತು. ಸ್ಪರ್ಧೆ ಮಾಡಿದ್ದ ಬಹುತೇಕ ಇತರೆ ಸಣ್ಣಪುಟ್ಟ ಪಕ್ಷಗಳು ಠೇವಣಿ ಉಳಿಸಿಕೊಳ್ಳಲೂ ಸಾಧ್ಯವಾಗದಷ್ಟು ಹೀನಾಯವಾಗಿ ಸೋತಿವೆ.

ಈ ಎರಡು ರಾಷ್ಟ್ರೀಯ ಪಕ್ಷಗಳು ಆಯ್ಕೆಮಾಡುವ ಅಭ್ಯರ್ಥಿಗಳೂ ದೊಡ್ಡಪ್ರಮಾಣದಲ್ಲಿ ಹಣ ವೆಚ್ಚಮಾಡುವ ಕೋಟ್ಯಾಧಿಪತಿಗಳೇ ಆಗಿರುತ್ತಾರೆ. ಜೊತೆಗೆ ಇವರಲ್ಲಿ ಬಹುತೇಕ ಅಭ್ಯರ್ಥಿಗಳು ರಿಯಲ್ ಎಸ್ಟೇಟ್ ಉದ್ಯಮಿಗಳು, ಕಾರ್ಖಾನೆ ಮಾಲೀಕರು, ಶಿಕ್ಷಣ ಸಂಸ್ಥೆಗಳು ಮತ್ತು ಆಸ್ಪತ್ರೆಗಳನ್ನು ಹೊಂದಿರುವ ಮಾಲೀಕರು, ಗಣಿಧಣಿಗಳೇ ಆಗಿರುತ್ತಾರೆ. ಈ ಪಕ್ಷಗಳ ಚುನಾವಣಾ ವೆಚ್ಚಕ್ಕೆ ಸ್ಥಳೀಯ ಉದ್ಯಮಿಗಳು, ಗುತ್ತಿಗೆದಾರರು ದಾರಾಳವಾಗಿ ಹಣ ಒದಗಿಸುತ್ತಾರೆ. ಇದಲ್ಲಕ್ಕಿಂತ ಹೆಚ್ಚಾಗಿ ರಾಷ್ಟ್ರೀಯ ದೊಡ್ಡಬಂಡವಾಳದಾರರಿಂದ ಈ ಎರಡು ಪಕ್ಷಗಳ ಚುನಾವಣಾನಿಧಿಗೆ ನೂರಾರು, ಸಾವಿರಾರು ಕೋಟಿ ರೂಪಾಯಿ ಹಣ ಹರಿದುಬರುತ್ತದೆ.

ಚುನಾವಣಾ ಬಾಂಡ್ಗಳ ಮೂಲಕ

ರಾಜಕೀಯ ಪಕ್ಷಗಳು ಬಹಿರಂಗಪಡಿಸಿರುವಂತೆ, ಮಾರ್ಚ್ 2018 ಮತ್ತು 2022 ರ ನಡುವೆ ಅನಾಮದೇಯ ಕಂಪನಿಗಳಿಂದ ಚುನಾವಣಾ ಬಾಂಡ್ಗಳ ಮೂಲಕ ರಾಜಕೀಯ ಪಕ್ಷಗಳಿಗೆ ಸಂದಾಯವಾದ ಹಣ ರೂ. 9,208 ಕೋಟಿ. ಇದರಲ್ಲಿ ಬಿಜೆಪಿ ಪಾಲು ರೂ. 5,270 ಕೋಟಿ. ಅಂದರೆ ಚುನಾವಣಾ ಬಾಂಡ್ ಗಳ ಮೂಲಕ ಸಂದಾಯವಾದ ಹಣದ ಶೇ. 57 ರಷ್ಟು ಬಿಜೆಪಿ ಪಕ್ಷಕ್ಕೆ ಬಂದಿದೆ. ಇದೇ ಅವಧಿಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಂದ ಹಣ ರೂ. 964 ಕೋಟಿ. ಇನ್ನು ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟರನ್ನು ಹೇಗಾದರೂ ಮಾಡಿ ಅಧಿಕಾರದಿಂದ ದೂರ ಇಡಲು, ಮಮತಾ ಬ್ಯಾನರ್ಜಿ ಪಕ್ಷ ತೃಣಮೂಲ ಕಾಂಗ್ರೆಸ್ ಗೆ ಅನಾಮದೇಯ ಕಂಪನಿಗಳಿಂದ ನೀಡಿದ ಚುನಾವಣಾ ದೇಣಿಗೆ ರೂ. 767 ಕೋಟಿ. ಈ ದೇಣಿಗೆ ಪಡೆದ ಪಕ್ಷಗಳ ಸಾಲಿನಲ್ಲಿ ಟಿಎಂಸಿ 3ನೇ ಸ್ಥಾನದಲ್ಲಿದೆ. ಈ ಮಾಹಿತಿಯನ್ನು ಚುನಾವಣಾ ಆಯೋಗದ ಅಂಕಿ ಅಂಶಗಳು ಹೇಳಿವೆ. ಇದು ರಾಜಕೀಯ ಪಕ್ಷಗಳು ಬಹಿರಂಗಪಡಿಸಿದ ಮೊತ್ತವಷ್ಟೆ. ಬಹಿರಂಗಕ್ಕೆ ಬಾರದ ದೇಣಿಗೆ ಹಲವು ಪಟ್ಟು ಹೆಚ್ಚಾಗಿದೆ.

PM CARES ಫಂಡ್

ಇದೂ ಅಲ್ಲದೆ, ಕೋವಿಡ್–19 ಸಾಂಕ್ರಾಮಿಕ ರೋಗದಿಂದ ಉಂಟಾಗುವಂತಹ ಯಾವುದೇ ರೀತಿಯ ತುರ್ತು ಅಥವಾ ಸಂಕಷ್ಟದ ಪರಿಸ್ಥಿತಿಯನ್ನು ಎದುರಿಸುವ ಉದ್ದೇಶದಿಂದ 'ಪ್ರಧಾನಮಂತ್ರಿ ನಾಗರಿಕ ನೆರವು ಮತ್ತು ತುರ್ತುಪರಿಸ್ಥಿತಿಗಳಲ್ಲಿ ಪರಿಹಾರ ನಿಧಿ **(PM CARES ಫಂಡ್)'** ಸ್ಥಾಪಿಸಲಾಗಿದೆ. ಈ ನಿಧಿಗೆ ಯಾರು ಮತ್ತು ಎಷ್ಟು ದೇಣಿಗೆ ಕೊಟ್ಟರು, ಆ ಹಣವನ್ನು ಯಾವುದಕ್ಕೆ ಎಷ್ಟು ವೆಚ್ಚಮಾಡಲಾಗಿದೆ ಎಂಬ ಲೆಕ್ಕವನ್ನು ಸಾರ್ವಜನಿಕರಿಗೆ ಬಹಿರಂಗಪಡಿಸುತ್ತಿಲ್ಲ. ಈ ಹಣವನ್ನೂ ಚುನಾವಣೆಗೆ ಮತ್ತು ಸಂಘಪರಿವಾದ ಅಂಗಸಂಸ್ಥೆಗಳ ಬೆಳವಣಿಗೆಗೆ ಬಳಸಿಕೊಳ್ಳಲಾಗುತ್ತಿದೆ ಎಂಬ ಆರೋಪಗಳೂ ಕೇಳಿಬಂದಿವೆ.

ಈ ಎಲ್ಲವನ್ನೂ ಗಮನಿಸಿದಾಗ, ಆಳುವ ಬಂಡವಾಳಶಾಹಿ ವರ್ಗ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಸಾಮ್ರಾಜ್ಯಶಾಹಿ ರಾಷ್ಟ್ರಗಳು, ಭಾರತದಲ್ಲಿ ತಮ್ಮ ಹಿತಾಶಕ್ತಿ ಕಾಯುವ, ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳನ್ನು ನಿಷ್ಠೆಯಿಂದ ಜಾರಿಗೊಳಿಸಲು ಬದ್ದರಾಗಿರುವ ಬಿಜೆಪಿ ಅಥವಾ ಕಾಂಗ್ರೆಸ್ ಈ ಎರಡರಲ್ಲಿ ಒಂದು ಪಕ್ಷದ ಬಹುಮತದ ಆಡಳಿತ ಬಯಸುತ್ತವೆ. ಅದಕ್ಕಾಗಿ ಇವು ಶ್ರಮಿಸುತ್ತವೆ ಮತ್ತು ಹಣದ ನೆರವು ನೀಡುತ್ತವೆ. ಜೊತೆಗೆ, ಯಾವ ಸಂದರ್ಭದಲ್ಲಿ ಯಾವ ಪಕ್ಷವನ್ನು ಅಧಿಕಾರಕ್ಕೆ ತರಬೇಕೋ, ಆ ಪಕ್ಷಗಳ ಪರವಾಗಿ ತಮ್ಮದೇ ಒಡೆತನದ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ಮಾಡುತ್ತಾರೆ. ಈ ಎರಡರಲ್ಲಿ ಒಂದು ಪಕ್ಷ ಮತ್ತು ಅದರ ನಾಯಕ ಜನಬೆಂಬಲ ಕಳೆದುಕೊಳ್ಳುವ ಸೂಚನೆ ಸಿಕ್ಕರೆ, ಮತ್ತೊಂದು ಪಕ್ಷ ಜನಪರ ಎಂದೂ, ಅದರ ನಾಯಕನನ್ನು ಜನನಾಯಕ ಎಂದು ಬಿಂಬಿಸಿ, ಆ ಪಕ್ಷದ ಮತ್ತು ಅದರ ನಾಯಕನ ಬೆಳವಣಿಗೆಗೆ ಆಳುವ ವರ್ಗ ಎಲ್ಲಾ ರೀತಿಯಲ್ಲೂ ಸಹಾಯ ಮಾಡುತ್ತದೆ.

ಜನರಲ್ಲಿ ಈ ಎರಡು ಪಕ್ಷಗಳ ಬಂಡವಾಳಶಾಹಿ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಪರವಾದ, ಮತ್ತು ನವ–ಉದಾರವಾದಿ ನೀತಿಗಳ ಕುರಿತು ಅರಿವು ಮೂಡಿಸಲು ವ್ಯಾಪಕ ಪ್ರಚಾರ, ಪ್ರಕ್ಷೋಭೆ ಮತ್ತು ಜನರ ಸಮಸ್ಯೆಗಳ ಆಧಾರದಲ್ಲಿ ದೊಡ್ಡಪ್ರಮಾಣದ ಚಳುವಳಿ ನಡೆಯಬೇಕಿದೆ. ಇದಕ್ಕಾಗಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದುಗೂಡಿ ಕಾರ್ಯತಂತ್ರ ರೂಪಿಸುವ ತುರ್ತು ಅಗತ್ಯವಿದೆ.

ಕಳೆದ ಚುನಾವಣೆಯಲ್ಲಿ 104 ಸ್ಥಾನಗಳನ್ನು ಗಳಿಸಿದ್ದ ಬಿಜೆಪಿ, ಈ ಬಾರಿ ಅಷ್ಟೇ ಮತಗಳನ್ನುಪಡೆದು ಕೇವಲ 65 ಸ್ಥಾನಗಳನ್ನು ಮಾತ್ರ ಪಡೆದಿದೆ. ಇದರರ್ಥ, ಬಿಜೆಪಿ ವಿರೋಧಿ ಮತಗಳು ಹಂಚಿ ಹೋಗದೇ, ಅವು ಕ್ರೋಢೀಕರಣಗೊಂಡು ಕಾಂಗ್ರೆಸ್ ಕಡೆ ಹರಿದಿವೆ. ಎಡಪಕ್ಷಗಳು ಮತ್ತು ಪ್ರಜಾಸತ್ತಾತ್ಮಕ ಅಭ್ಯರ್ಥಿಗಳು ಸ್ಪರ್ಧೆ ಮಾಡಿದ್ದ ಕಡೆಗಳಲ್ಲೂ 'ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸುವ ಸಾಮರ್ಥ್ಯ ಇರುವ ಅಭ್ಯರ್ಥಿಗಳಿಗೆ ಮತ ನೀಡಿ' ಎಂಬ ಇವರದೇ ಘೋಷಣೆ ಒಂದಷ್ಟು ಕೆಲಸಮಾಡಿದೆ. ಇವರ ಮತಗಳಿಕೆ ಕಡಿಮೆಯಾಗಲು ಇದೂ ಒಂದು ಕಾರಣ. ಇದೇ ಪ್ರಯೋಗ ರಾಷ್ಟಮಟ್ಟದಲ್ಲಿ ನಡೆದರೆ, ಇದು, ಎರಡು ದೊಡ್ಡ ಬಂಡವಾಳಶಾಹಿ ಪಕ್ಷಗಳ ನಡುವೆ ಮಾತ್ರ ಅಧಿಕಾರ ಹಸ್ತಾಂತರಕ್ಕೆ ಎಡೆಮಾಡಿಕೊಡುತ್ತದೆ. ಎಡ ಮತ್ತು ಪ್ರಜಾಸತ್ತಾತ್ಮಕ ರಾಜಕೀಯ ಪಕ್ಷಗಳು, ಹಾಗೂ ಪ್ರಾದೇಶಿಕ ಪ್ರಜಾಸತ್ತಾತ್ಮಕ ಆಶಯಗಳನ್ನು ಪ್ರತಿನಿಧಿಸುವ ರಾಜಕೀಯ ಪಕ್ಷಗಳ ಬೆಳವಣಿಗೆಗೆ ಇದು ಅಡ್ಡಿಯಾಗುತ್ತದೆ. ಆಳುವ ಬಂಡವಾಳಶಾಹಿ ವರ್ಗ ಬಯಸುವುದೂ ಇಂತಹ ವ್ಯವಸ್ಥೆಯನ್ನೇ ಎಂಬುದನ್ನು ಮರೆಯದಿರೋಣ.



ಬಿಜೆಪಿ ಸೋತಿದ್ದರೂ ಅದರ ಅಪಾಯ ತಪ್ಪಿಲ್ಲ........

ಪುಟ 8 ರಿಂದ

71 ಜನ ಗಂಭೀರ ಅಪರಾಧ ಹಿನ್ನೆಲೆಯ ಶಾಸಕರಿದ್ದಾರೆ. 7 ಜನ ಮಹಿಳೆಯರ ಮೇಲಿನ ಅಪರಾಧಗಳ ಹಿನ್ನೆಲೆಯುಳ್ಳ ಶಾಸಕರಿದ್ದಾರೆ.

ಗೆಲುವಿನ ಅಂತರವನ್ನು ಗಮನಿಸಿದ್ದಲ್ಲಿ ಬಿಜೆಪಿ ಅಭ್ಯರ್ಥಿಗಳು ದಕ್ಷಿಣ ಹಾಗೂ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಹೆಚ್ಚಿನ ಅಂತರದಿಂದ ಗೆಲುವು ಸಾಧಿಸಿರುವಾಗಲೇ ಕಾಂಗ್ರೆಸ್ ಗೆದ್ದಿರುವ ಕೆಲವು ಸ್ಥಾನಗಳಲ್ಲಿ ಅಲ್ಪಪ್ರಮಾಣದ ಅಂತರದಿಂದ ಗೆಲುವು ಸಾಧಿಸಿರುವುದನ್ನು ಗಮನಿಸಬಹುದಾಗಿದೆ. ದಕ್ಷಿಣ ವ್ಯಾಪ್ತಿಯಲ್ಲಿ ಬಹುತೇಕ ಜೆಡಿಎಸ್ ಸ್ಥಾನಗಳನ್ನು ಕಾಂಗ್ರೆಸ್ ಹಾಗೂ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬಿಜೆಪಿ ಪಡೆದುಕೊಂಡಿದೆ. ಆಪರೇಷನ್ ಕಮಲದ ಅಭ್ಯರ್ಥಿಗಳು ಕೇವಲ ಕೆಲವರು ಮಾತ್ರ ಗೆಲುವು ಸಾಧಿಸಿದ್ದು ಅರ್ಧದಷ್ಟು ಜನ ಸೋಲುಂಡಿದ್ದಾರೆ.

ರಾಜ್ಯದ ಪ್ರದೇಶವಾರು ಮತಪ್ರಮಾಣ:

ಕರಾವಳಿ ಪ್ರದೇಶದಲ್ಲಿ 42.4 ಶೇಕಡ ಮತ ಪ್ರಮಾಣವನ್ನು ಪಡೆದು ಕಾಂಗ್ರೆಸ್ ತನ್ನ ಮತಪ್ರಮಾಣವನ್ನು 2.3 ಶೇಕಡ ಹೆಚ್ಚಿಸಿಕೊಂಡಿರುವಾಗಲೇ ಬಿಜೆಪಿಯು 3.1 ಶೇಕಡ ಮತವನ್ನು ಕಳೆದುಕೊಂಡಿದ್ದರೂ ಸಹಾ ಅದರ ಮತಪ್ರಮಾಣವು 48.5 ಶೇಕಡ ಇರುವುದರ ಅಪಾಯವನ್ನು ಮನಗಾಣಬೇಕಿದೆ. ಜೆಡಿಎಸ್ ಬಹುತೇಕ ತನ್ನ 3.8 ಶೇಕಡ ಮತ ಪ್ರಮಾಣವನ್ನು ಉಳಿಸಿಕೊಂಡಿದೆ.

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ 46.4 ಶೇಕಡ ಮತಪಡೆದಿರುವ ಕಾಂಗ್ರೆಸ್ ತನ್ನ ಮತಪ್ರಮಾಣವನ್ನು 4.2 ಶೇಕಡ ಹೆಚ್ಚಿಸಿಕೊಂಡಿದೆ. ಬಿಜೆಪಿಯು 3.4 ಶೇಕಡ ಮತವನ್ನು ಕಳೆದುಕೊಂಡು 35.8 ಶೇಕಡ ಮತಗಳನ್ನು ಪಡೆದಿದೆ. ಜೆಡಿಎಸ್ ತನ್ನ 10.5 ಶೇಕಡ ಮತಗಳನ್ನು ಬಹುತೇಕ ಉಳಿಸಿಕೊಂಡಿದೆ.

ಕಿತ್ತೂರು ಕರ್ನಾಟಕ ಪ್ರದೇಶದಲ್ಲಿ 44.6 ಶೇಕಡ ಮತ ಪಡೆದಿರುವ ಕಾಂಗ್ರೆಸ್ ತನ್ನ ಮತ ಪ್ರಮಾಣವನ್ನು 5.9 ಶೇಕಡ ಹೆಚ್ಚಿಸಿಕೊಂಡಿದೆ. ಬಿಜೆಪಿಯು 4.5 ಶೇಕಡ ಮತವನ್ನು ಕಳೆದುಕೊಳ್ಳುವ ಮೂಲಕ 39.7 ಶೇಕಡ ಮತವನ್ನು ಪಡೆದಿದೆ. ಜೆಡಿಎಸ್ 2.9 ಶೇಕಡ ಮತಗಳನ್ನು ಕಳೆದುಕೊಂಡು ಕೇವಲ 5.3 ಶೇಕಡ ಮತವನ್ನು ಪಡೆದಿದೆ.

ದಕ್ಷಿಣ ಹಾಗೂ ಮಲೆನಾಡು ಪ್ರದೇಶದಲ್ಲಿ 40.8 ಶೇಕಡ ಮತ ಪಡೆದಿರುವ ಕಾಂಗ್ರೆಸ್ ತನ್ನ ಮತಪ್ರಮಾಣವನ್ನು 6.5 ಶೇಕಡ ಹೆಚ್ಚಿಸಿಕೊಂಡಿದೆ. ಬಿಜೆಪಿಯು ಸಹಾ ಈ ಪ್ರದೇಶದಲ್ಲಿ ತನ್ನ ಮತ ಪ್ರಮಾಣವನ್ನು 3.1 ಶೇಕಡ ಹೆಚ್ಚಿಸಿಕೊಂಡು 25.5 ಶೇಕಡ ಮತಗಳನ್ನು ಪಡೆದಿದೆ. ಜೆಡಿಎಸ್ 8.6 ಶೇಕಡ ಮತಗಳನ್ನು ಪಡೆದುಕೊಂಡು 26.1 ಶೇಕಡ ಮತಗಳನ್ನು ಪಡೆದಿದೆ. ಜೆಡಿಎಸ್ ಕಳೆದುಕೊಂಡಿರುವುದನ್ನು ಬಹುಪಾಲು ಕಾಂಗ್ರೆಸ್ ಪಡೆದಿದ್ದು ಮೂರನೇ ಒಂದು ಪಾಲನ್ನು ಬಿಜೆಪಿ ಪಡೆದುಕೊಂಡಿದೆ.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಒಂದು ಶೇಕಡ ಮತ ಪ್ರಮಾಣವನ್ನು ಹೆಚ್ಚಿಸಿಕೊಂಡು 40.7 ಶೇಕಡ ಮತಗಳನ್ನು ಕಾಂಗ್ರೆಸ್ ಪಡೆದಿದ್ದರೆ ಬಿಜೆಪಿಯು ಸಹಾ ತನ್ನ ಮತ ಪ್ರಮಾಣವನ್ನು 5.4 ಶೇಕಡ ಹೆಚ್ಚಿಸಿಕೊಂಡು 46.4 ಶೇಕಡ ಮತಗಳನ್ನು ಪಡೆದಿದೆ. ಜೆಡಿಎಸ್ 7.7 ಶೇಕಡ ಮತಗಳನ್ನು ಕಳೆದುಕೊಂಡು ಕೇವಲ 7.8 ಶೇಕಡ ಮತಗಳನ್ನು ಪಡೆದಿದೆ. ಜೆಡಿಎಸ್ ಕಳೆದುಕೊಂಡ ಮತಗಳನ್ನು ಬಹುತೇಕ ಬಿಜೆಪಿ ಪಡೆದಿದ್ದು ಅಲ್ಪಪ್ರಮಾಣದ ಮತಗಳನ್ನು ಕಾಂಗ್ರೆಸ್ ಪಡೆದಿದೆ.

ಬಿಜೆಪಿಯು ಕರಾವಳಿ ಪ್ರದೇಶದಲ್ಲಿ 4, ಕಲ್ಯಾಣ ಕರ್ನಾಟಕದಲ್ಲಿ 5, ಕಿತ್ತೂರು ಕರ್ನಾಟಕದಲ್ಲಿ 23, ದಕ್ಷಿಣ ಮಲೆನಾಡು ಕರ್ನಾಟಕದಲ್ಲಿ 12 ಸ್ಥಾನಗಳು ಸೇರಿ ಒಟ್ಟು 44 ಸ್ಥಾನಗಳನ್ನು ಕಳೆದುಕೊಂಡಿದ್ದರೆ ಬೆಂಗಳೂರು ನಗರದಲ್ಲಿ 5 ಹೆಚ್ಚುವರಿ ಸ್ಥಾನಗಳನ್ನು ಪಡೆದುಕೊಂಡಿದೆ. ಜೆಡಿಎಸ್ ದಕ್ಷಿಣ ಮಲೆನಾಡಿನಲ್ಲಿ 14, ಬೆಂಗಳೂರು ನಗರದಲ್ಲಿ 2, ಕಿತ್ತೂರು ಕರ್ನಾಟಕದಲ್ಲಿ 1, ಕಲ್ಯಾಣ ಕರ್ನಾಟಕದಲ್ಲಿ 1 ಸೇರಿ ಒಟ್ಟು 18 ಸ್ಥಾನಗಳನ್ನು ಕಳೆದುಕೊಂಡಿದೆ.

ಎಡ ಪಕ್ಷಗಳ ಸ್ಪರ್ಧೆ:

ಸಿಪಿಐ 7 ಸ್ಥಾನಗಳಲ್ಲಿ ಸ್ಪರ್ಧಿಸಿ ಒಟ್ಟು 7715 ಮತಗಳನ್ನು ಪಡೆದಿವೆ. ಸಿಪಿಐ(ಎಂಎಲ್) (ಲಿಬರೇಷನ್) 2 ಸ್ಥಾನಗಳಲ್ಲಿ ಸ್ಪರ್ಧಿಸಿ ಒಟ್ಟು 974 ಮತಗಳನ್ನು ಪಡೆದಿದೆ. ಎಸ್‌ಯುಸಿಐಸಿ 14 ಸ್ಥಾನಗಳಲ್ಲಿ ಸ್ಪರ್ಧಿಸಿ ಒಟ್ಟು 3579ಗಳನ್ನು ಪಡೆದಿದೆ. ಚುನಾವಣೆಗೂ ಮುನ್ನ ಸಿಪಿಐ ತನ್ನ 7 ಕ್ಷೇತ್ರಗಳನ್ನು ಹೊರತು ಪಡಿಸಿ ನಮ್ಮ ಪಕ್ಷವು ಸ್ಪರ್ಧಿಸಿರುವ ಬಾಗೇಪಲ್ಲಿ ಮತ್ತು ಸರ್ವೋದಯ ಕರ್ನಾಟಕ ಸ್ಪರ್ಧಿಸಿರುವ ಮೇಲುಕೋಟೆ ಕ್ಷೇತ್ರವನ್ನು ಹೊರತುಪಡಿಸಿ ಉಳಿದ 215 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಬೆಂಬಲಿಸುವುದಾಗಿ ಕಾಂಗ್ರೆಸ್‌ನೊಂದಿಗೆ ಜಂಟಿ ಪತ್ರಿಕಾಗೋಷ್ಠಿ ನಡೆಸಿ ಪ್ರಕಟಿಸಿತ್ತು. ನಮ್ಮ ಅಭ್ಯರ್ಥಿ ಇರುವ ಕೆಜಿಎಫ್ ಕ್ಷೇತ್ರದಲ್ಲಿ ಸ್ಪರ್ಧಿಸಿ 918 ಮತಗಳನ್ನು ಪಡೆದಿದೆ. ಸಿಪಿಐ(ಎಂಎಲ್) (ಲಿಬರೇಷನ್) ನಮ್ಮ ಅಭ್ಯರ್ಥಿ ಇರುವ ಕೆ.ಆರ್.ಪುರಂ ಕ್ಷೇತ್ರದಲ್ಲಿ ಸ್ಪರ್ಧಿಸಿ 227 ಮತಗಳನ್ನು ಪಡೆದಿದೆ. ಎಸ್‌ಯುಸಿಐ(ಸಿ) ನಮ್ಮ ಅಭ್ಯರ್ಥಿ ಇರುವ ಗುಲ್ಬರ್ಗ ಗ್ರಾಮೀಣದಲ್ಲಿ ಸ್ಪರ್ಧಿಸಿ 881 ಮತಗಳನ್ನು ಪಡೆದಿದೆ. ಎಐಎಫ್‌ಬಿ ಬೆಂಗಳೂರಿನ ವಿಜಯನಗರದಲ್ಲಿ ಸ್ಪರ್ಧಿಸಿ 194 ಮತಗಳನ್ನು ಪಡೆದಿದೆ.

ಆರ್‌ಪಿಐ (ಪ್ರಕಾಶ್ ಅಂಬೇಡ್ಕರ್) ಪಕ್ಷವು ಸಹಾ ಜೆಡಿಎಸ್ ನೊಂದಿಗೆ ಹೊಂದಾಣಿಕೆ ಮಾಡಿಕೊಂಡು 3 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ನಮ್ಮ ಪಕ್ಷವನ್ನು ಒಳಗೊಂಡಂತೆ 7 ಪಕ್ಷಗಳ ಮೈತ್ರಿಯ ಭಾಗವಾಗಿ ಹೋರಾಟಗಳಲ್ಲಿ ತೊಡಗಿಕೊಂಡಿದ್ದ ಸರ್ವೋದಯ ಕರ್ನಾಟಕ ಪಕ್ಷವು ಕಾಂಗ್ರೆಸ್ ನೊಂದಿಗೆ ಮೈತ್ರಿ ಮಾಡಿಕೊಂಡು ತಾನು ಸ್ಪರ್ಧಿಸಿದ್ದ ಏಕಮಾತ್ರ ಮೇಲುಕೋಟೆ ಕ್ಷೇತ್ರದಲ್ಲಿ ಗೆಲುವನ್ನು ಪಡೆದಿದೆ.

ನಮ್ಮ ಸ್ಪರ್ಧೆ:

ರಾಜ್ಯ ಸಮಿತಿಯ ತೀರ್ಮಾನದಂತೆ ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸಿ ಜಾತ್ಯಾತೀತ ಸರ್ಕಾರ ರಚಿಸಬೇಕೆಂಬ ಆಶಯಕ್ಕಾಗಿ ಕೇವಲ 4 ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿ ಬಾಗೇಪಲ್ಲಿ, ಗುಲ್ಬರ್ಗ ಗ್ರಾಮೀಣ, ಕೆ.ಆರ್.ಪುರಂ ಮತ್ತು ಕೆಜಿಎಫ್ ಗಳಲ್ಲಿ ಸ್ಪರ್ಧಿಸಲಾಗಿತ್ತು. 4 ಕ್ಷೇತ್ರಗಳಿಂದ ಒಟ್ಟು 22,671 ಮತಗಳನ್ನು ಪಡೆಯಲಾಗಿದೆ. ಬಾಗೇಪಲ್ಲಿ ಕ್ಷೇತ್ರದಲ್ಲಿ 19,621, ಗುಲ್ಬರ್ಗ ಗ್ರಾಮೀಣದಲ್ಲಿ 822, ಕೆ.ಆರ್.ಪುರಂ ನಲ್ಲಿ 1,220, ಕೆಜಿಎಫ್ ನಲ್ಲಿ 1008 ಮತಗಳನ್ನು ಪಡೆಯಲಾಗಿದೆ.

ಬಾಗೇಪಲ್ಲಿಯಲ್ಲಿ 11.32 ಶೇಕಡ ಮತಗಳನ್ನು ಸಿಪಿಐ(ಎಂ) ಪಡೆದಿದೆ. ರಾಜ್ಯದಲ್ಲಿನ ಕಾಂಗ್ರೆಸ್ ಹಾಗೂ ಬಿಜೆಪಿ ನಡುವಿನ ಧೃವೀಕರಣ, ಬಿಜೆಪಿ ಸರ್ಕಾರದ ವಿರೋಧ ಅಲೆ, ಸ್ಥಳೀಯವಾಗಿ ಕ್ಷೇತ್ರದಲ್ಲಿದ್ದ ಜಾತಿ ಧೃವೀಕರಣ, ಮತದಾರರಿಗೆ ವ್ಯಾಪಕ ಹಣದ ಹಂಚಿಕೆ, ಮತದಾನ ಪೂರ್ವ ದಿನದ ಸಿಪಿಐ(ಎಂ) ವಿರುದ್ಧದ ಅಪಪ್ರಚಾರ ಮತ್ತು ಅದನ್ನು ಎದುರಿಸಲು ಸಾಧ್ಯವಾಗದ ಸಂಘಟನಾ ಸಾಮರ್ಥ್ಯದ ಕೊರತೆ ಹಾಗೂ ಚುನಾವಣಾ ಪೂರ್ವದಲ್ಲಿ ಪಕ್ಷದಲ್ಲಿನ ಕೆಲವು ನಾಯಕರು ಪಕ್ಷಾಂತರದ ಕಾರಣ ಶಿಸ್ತು ಕ್ರಮ, ಕಳೆದ 5 ವರ್ಷಗಳ ಆಂತರಿಕ ಹೋರಾಟಗಳ ಪರಿಣಾಮ ನಮ್ಮ ಪಕ್ಷವು ಮೂರನೇ ಸ್ಥಾನಕ್ಕೆ ಇಳಿದಿದೆ.

ಇತರೆ ಪಕ್ಷಗಳು:

ಆಮ್ ಆದ್ಮಿ ಪಕ್ಷವು 208 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 2.29 ಲಕ್ಷ ಮತಗಳನ್ನು ಪಡೆದು ನೋಟಾಗಿಂತ ಕಡಿಮೆ ಮತಗಳನ್ನು ಪಡೆದಿದೆ. ಕಲ್ಯಾಣ ಕರ್ನಾಟಕ ಪ್ರಗತಿ ಪಕ್ಷವು ಒಂದು ಸ್ಥಾನ ಪಡೆದಿದ್ದರೂ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲೂ ಸ್ಪರ್ಧಿಸಿದೆ ಮತ್ತು ಮತದಾರರಿಗೆ ಹಣ ಹಂಚುವ ಕೆಲಸವನ್ನು ಮಾಡಿದೆ. ಉತ್ತಮ ಪ್ರಜಾಕೀಯ ಪಕ್ಷ ಮತ್ತು ಕರ್ನಾಟಕ ರಾಷ್ಟ್ರ ಪಕ್ಷವು ಸಹಾ ವ್ಯಾಪಕವಾಗಿ ಸ್ಪರ್ಧಿಸಿವೆ.

ಎಸ್‌ಡಿಪಿಐ 16 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರೂ ಸಹಾ ನರಸಿಂಹರಾಜು ಕ್ಷೇತ್ರದಲ್ಲಿ 40,000 ಮತಗಳೊಂದಿಗೆ ಠೇವಣಿ ಉಳಿಸಿಕೊಂಡಿದ್ದರೆ, ಮಂಗಳೂರು (ಉಳ್ಳಾಳ) ದಲ್ಲಿ 15,000 ಮತಗಳನ್ನು ಪಡೆದಿದೆ. ಆದರೆ ಠೇವಣಿ ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ. ಕಾಂಗ್ರೆಸ್ ಗೆಲುವಿಗೆ ತೊಡಕನ್ನು ಉಂಟು ಮಾಡಿ ವ್ಯತಿರಿಕ್ತ ಪರಿಣಾಮ ಬೀರಲು ಸಾಧ್ಯವಾಗಿಲ್ಲ. ಮುಸ್ಲಿಂ ಅಲ್ಪಸಂಖ್ಯಾತರ ನಡುವಿನ ಮಧ್ಯಮ ವರ್ಗ ಮತ್ತು ಸಾಮಾಜಿಕ ಸಂಘಟನೆಗಳು ಎಸ್‌ಡಿಪಿಐ ಹಾಗೂ ಎಐಎಂಐಎಂ ಸ್ಪರ್ಧೆಗಳನ್ನು ಆದಷ್ಟು ಕಡಿಮೆಯಾಗಿಸಲು ಮತ್ತು ಆ ಮೂಲಕ ಬಿಜೆಪಿ ಸೋಲಿಸಬೇಕೆಂಬ ನಿಲುಮೆಗೆ ಅವರನ್ನು ಅಣಿನೆರೆಸಲು ಪಾತ್ರವಹಿಸಿವೆ. ಅಲ್ಪಸಂಖ್ಯಾತರು ಮತ ಚಲಾಯಿಸುವಲ್ಲಿ ಬಿಜೆಪಿ ಸೋಲಿಸಬೇಕೆಂಬ ಜಾಣ್ಮೆಯನ್ನು ಪ್ರದರ್ಶಿಸಿವೆ. ಮುಸ್ಲಿಂ ಅಲ್ಪಸಂಖ್ಯಾತ ಜಮಾತ್ ಸಂಘಟನೆಗಳು ನಿಲುಮೆ ತಳೆದು ಪಾತ್ರವಹಿಸಿರುವುದು ಸದ್ಯಕ್ಕೆ ಉತ್ತಮವೆಂದು ಕಂಡು ಬಂದರೂ, ದೂರಗಾಮಿಯಾಗಿ ಅಪಾಯಕಾರಿಯಾಗುತ್ತದೆ. ಜಮಾತೆ ಇಸ್ಲಾಮೆ ಹಿಂದ್‌ನ ರಾಜಕೀಯ ಪಕ್ಷವಾದ ವೆಲ್ ಫೇರ್ ಪಾರ್ಟಿ ಆಫ್ ಇಂಡಿಯ ರಾಜ್ಯ ವ್ಯಾಪಿಯಾಗಿ ಕಾಂಗ್ರೆಸ್ ಬೆಂಬಲಿಸಿದರೂ ಸಹ ಸ್ಥಳೀಯವಾಗಿ ಕ್ಷೇತ್ರವಾರು ಹೊಂದಾಣಿಕೆಗೆ ರಾಜಿ ಮಾಡಿಕೊಂಡು ಬೆಂಬಲಿಸಿದೆ. ಇಂತಹ ಕ್ಷೇತ್ರವಾರು ಹೊಂದಾಣಿಕೆಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಮೂರು ಪಕ್ಷಗಳು ಪರೋಕ್ಷವಾಗಿ ಮಾಡಿಕೊಂಡಿವೆ.

ಗೆಲುವೆಲ್ಲಾ ಮೋದಿಯದು.. ಸೋಲು ಮಾತ್ರ ಅವರದಲ್ಲ!

ಮೋದಿ ರೋಡ್ ಷೋ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬಿಜೆಪಿಯು ತನ್ನ ಸ್ಥಾನಗಳನ್ನು ಉಳಿಸಿಕೊಂಡು ಹೆಚ್ಚಿಸಿಕೊಳ್ಳಲು ಸಹಕಾರಿಯಾಗಿದೆ. ಆದರೂ ಸಹಾ ಕಳೆದ ಸಂಸದ್ ಚುನಾವಣೆಯಲ್ಲಿ 53 ರಿಂದ 57 ಶೇಕಡವಾರು ಮತ ಪಡೆದಿದ್ದ ಬಿಜೆಪಿ ಈ ಚುನಾವಣೆಯಲ್ಲಿ 46.4 ಶೇಕಡ ಮತ ಮಾತ್ರ ಪಡೆದಿದೆ. ಬಿಜೆಪಿ ಸರ್ಕಾರದ ಬೆಲೆ ಏರಿಕೆ, ಭ್ರಷ್ಟಾಚಾರ, ಕಾರ್ಮಿಕ ಕಾನೂನುಗಳಿಗೆ ಕಾರ್ಮಿಕ ವಿರೋಧಿ ತಿದ್ದುಪಡಿ ಕ್ರಮಗಳು, ಕೋವಿಡ್ ನಿಯಂತ್ರಣ ಮತ್ತು ಲಾಕ್ಡೌನ್ ನಿರ್ವಹಣೆಯಲ್ಲಿ ತೋರಿದ ಅಲಕ್ಷ್ಯ ಮುಂತಾದವು ಇದಕ್ಕೆ ಕಾರಣವಾಗಿವೆ.

ಗೆಲುವನ್ನು ಮೋದಿಯ ಗೆಲುವೆಂದು ಬಿಂಬಿಸುತ್ತಿದ್ದ ಬಿಜೆಪಿಯು ಸೋಲು ರಾಜ್ಯದ ಬಿಜೆಪಿಯ ಸೋಲೆಂದು ಬಿಂಬಿಸಲು ಯತ್ನಿಸುತ್ತಿದೆ. ಹೈನುಗಾರಿಕೆಯ ಜಿಲ್ಲೆಗಳಲ್ಲಿ ನಂದಿನಿಯನ್ನು ಅಮುಲ್ ನಲ್ಲಿ ವಿಲೀನಗೊಳಿಸುವ ಅಮಿತ್ ಷಾ ಹೇಳಿಕೆ ಕಾಂಗ್ರೆಸ್‌ಗೆ ಸಹಕಾರಿಯಾಗಿದೆ.

ಈ ಚುನಾವಣೆಯನ್ನು ಸಾವರ್ಕರ್ ಮತ್ತು ಟಿಪ್ಪು ನಡುವಿನ ಸಾಂಸ್ಕೃತಿಕ ಪೈಪೋಟಿಯೆಂಬಂತೆ ಬಿಂಬಿಸಲು ಬಿಜೆಪಿ ನಡೆಸಿದ ಯತ್ನ ಫಲಕಾರಿಯಾಗಿಲ್ಲ. ಹಲವೆಡೆ ಜಾತ್ಯಾತೀತ ವ್ಯಕ್ತಿಗಳು, ಶಕ್ತಿಗಳು ಈ ಸಾಂಸ್ಕೃತಿಕ ರಾಜಕಾರಣವನ್ನು ಹಿಮ್ಮೆಟಿಸಲು ಶ್ರಮಿಸಿದ್ದಾರೆ. ಅದೇ ವೇಳೆ ಕಾಂಗ್ರೆಸ್ ಪಕ್ಷವು ಭಜರಂಗದಳ ಮತ್ತು ಪಿಎಫ್‌ಐ ನಿಷೇಧದ ಅಂಶಗಳನ್ನು ತನ್ನ ಪ್ರಣಾಳಿಕೆಯಲ್ಲಿ ಸೇರ್ಪಡೆ ಮಾಡಿದ್ದನ್ನು ಬಿಟ್ಟರೆ ಬಿಜೆಪಿಯ ಕೋಮುಧೃವೀಕರಣದ ಪ್ರಚೋದನೆಗಳಿಗೆ ಪ್ರತಿಕ್ರಿಯಿಸದೆ ನಿರ್ಲಕ್ಷಿಸುವ ಯತ್ನವನ್ನು ನಡೆಸಿದೆ.

ಕಾಂಗ್ರೆಸ್ ಪಕ್ಷದ ಸಂಘಟಿತ ವೃತ್ತಿಪರ ಪ್ರಚಾರವು ಅದರ ಗೆಲುವಿಗೆ ಸಹಕಾರಿಯಾಗಿದೆ. ಯುವ ಜನತೆಯನ್ನು ಅಣಿನೆರೆಸಿಕೊಳ್ಳಲು ಬಿಜೆಪಿ ಯತ್ನಿಸಿದರು ಸಹ ಕಾಂಗ್ರೆಸ್ ನಡೆಸಿದ ಚುನಾವಣ ಪೂರ್ವ ಯುವಜನರ ಶಿಬಿರಗಳು ಕಾಂಗ್ರೆಸ್‌ನೊಂದಿಗೂ ಸಹ ಯುವಜನರು ಕ್ರಿಯಾಶೀಲರಾಗಿ ತೊಡಗಿಸಿಕೊಳ್ಳಲು ಅನುವುಗೊಳಿಸಿದೆ.

ಜಗದೀಶ್ ಶೆಟ್ಟರ್, ಲಕ್ಷ್ಮಣ ಸವದಿ ಕಾಂಗ್ರೆಸ್ ಸೇರ್ಪಡೆ ಮತ್ತು ಯಡಿಯೂರಪ್ಪ ರವರನ್ನು ಬಿಜೆಪಿ ಕಡೆಗಣಿಸಿತು ಎಂಬ ಅಂಶಗಳು ಕಿತ್ತೂರು ಕರ್ನಾಟಕದಲ್ಲಿ ಕಾಂಗ್ರೆಸ್ ಸ್ಥಾನ ಗಳಿಕೆಗೆ ಸಹಕಾರಿಯಾಗಿದೆ. ಬಿಜೆಪಿಯು ಲಿಂಗಾಯುತ ಸಮಾವೇಶ ನಡೆಸಿದ ಯತ್ನದಿಂದ ಕೇವಲ ಶ್ರೀಮಂತ ಲಿಂಗಾಯತರು ಮಾತ್ರ ಬಿಜೆಪಿಯೊಂದಿಗೆ ನಿಂತರೆ, ಸಾಮಾನ್ಯ ಲಿಂಗಾಯತರು ಕಾಂಗ್ರೆಸ್‌ನೊಂದಿಗೆ ನಿಂತರು ಎಂಬುದನ್ನು ಫಲಿತಾಂಶಗಳು ತೋರಿವೆ. ಕಾಂಗ್ರೆಸ್ ಶಾಸಕರಲ್ಲಿ ಅತಿ ಹೆಚ್ಚು ಸಂಖ್ಯೆಯ 34 ಲಿಂಗಾಯುತ ಶಾಸಕರು ಇರುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ. ಕಾಂಗ್ರೆಸ್‌ನ ಒಟ್ಟು 135 ಶಾಸಕರಲ್ಲಿ 23 ಒಕ್ಕಲಿಗರು, 5 ರೆಡ್ಡಿಗಳು, 3 ಬ್ರಾಹ್ಮಣರನ್ನು ಹೊರತುಪಡಿಸಿ 70 ಅಹಿಂದ ವರ್ಗದ ಶಾಸಕರಿದ್ದಾರೆಂಬ ಅಂಶಗಳು ಮುಖ್ಯಮಂತ್ರಿ ಸ್ಥಾನಕ್ಕಾಗಿನ ಕಾಂಗ್ರೆಸ್ ಒಳಗಿನ ತಿಕ್ಕಾಟಕ್ಕೆ ಕೊಡುಗೆ ನೀಡಿವೆ.

ಎಲ್ಲಾ ವಯೋಮಾನದ ಮತದಾರರಲ್ಲಿ 40ಕ್ಕಿಂತ ಹೆಚ್ಚು ಶೇಕಡ ಕಾಂಗ್ರೆಸ್‌ಗೆ ಮತ ನೀಡಿರುವಾಗಲೇ 25 ವರ್ಷದೊಳಗಿನ ಮತದಾರರಲ್ಲಿ 40 ಶೇಕಡ ಮತದಾರರು ಬಿಜೆಪಿಗೆ ಬೆಂಬಲ ನೀಡಿದ್ದಾರೆ, ಕಾಲೇಜು ಶಿಕ್ಷಣ ಪಡೆದವರಲ್ಲಿ 45 ಶೇಕಡ ಬಿಜೆಪಿಗೆ ಮತ ನೀಡಿದ್ದಾರೆ. ನಗರವಾಸಿಗಳಲ್ಲಿ 41 ಶೇಕಡ ಬಿಜೆಪಿಗೆ ಮತ ನೀಡಿದ್ದಾರೆಂಬ ಸ್ವತಂತ್ರ ಸಂಸ್ಥೆಯೊಂದರ ಸಮೀಕ್ಷೆ ಅಂಶಗಳು ಗಮನಾರ್ಹವಾಗಿವೆ. ಬಿಜೆಪಿಯನ್ನು ಮೂಲೆಗುಂಪಾಗಿಸಲು ಈ ಅಂಶಗಳನ್ನು ಪರಿಗಣಿಸಬೇಕಿದೆ.

ಎದ್ದೇಳು ಕರ್ನಾಟಕ, ಸೌಹಾರ್ದ ಕರ್ನಾಟಕ, ಪ್ರಗತಿಪರ ಬುದ್ಧಿಜೀವಿಗಳು, ಸಾಹಿತಿಗಳು, ಜಾತ್ಯಾತೀತ ಪರ ವ್ಯಕ್ತಿಗಳು, ಸಾಮಾಜಿಕ ಸಂಘಟನೆಗಳು, ಬಿಜೆಪಿಯನ್ನು ಸೋಲಿಸಬೇಕು ಎಂಬ ಆಶಯದೊಂದಿಗೆ ನಡೆಸಿದ ಪ್ರಚಾರ, ಸುದ್ದಿಗೋಷ್ಠಿಗಳು, ಹೊರತಂದ ಸಾಹಿತ್ಯಗಳು, ಆಡಿಯೋ-ವೀಡಿಯೋ ತುಣುಕುಗಳು, ಬಿಜೆಪಿಯ ನಿರ್ಣಾಯಕ ಸೋಲಿಗೆ ಹಾಗೂ ಕಾಂಗ್ರೆಸ್ ಗೆಲುವಿಗೆ ಸಹಕಾರಿಯಾಗಿವೆ.

ಬಿಜೆಪಿಯನ್ನು ಸೋಲಿಸುವಾಗ ರಾಜ್ಯದ ಜನತೆಯು ನವ ಉದಾರವಾದಿ ನೀತಿಗಳು ಮತ್ತು ಕೋಮುವಾದ ಎರಡರ ವಿರುದ್ಧವು ಮತ ನೀಡಿದ್ದಾರೆ. ಹಾಗಾಗಿ ಕೇವಲ ಕಾಂಗ್ರೆಸ್ ಗ್ಯಾರಂಟಿಗಳು ಜನತೆಯ ಆಶಯವನ್ನು ತಣಿಸುವುದಿಲ್ಲ. ಬಿಜೆಪಿ ಸೋತಿದ್ದರು, ಕೋಮುವಾದಿ ಕಾರ್ಪೊರೇಟ್, ದುಷ್ಟಕೂಟದ ಪ್ರತಿನಿಧಿಯಾಗಿ ತನ್ನ 36 ಶೇಕಡ ಮತ ಪ್ರಮಾಣವನ್ನು ಉಳಿಸಿಕೊಂಡಿದೆ ಎಂಬುದು ಬಿಜೆಪಿ ಸೋತಿದ್ದರು ಅದರ ಅಪಾಯ ತಪ್ಪಿಲ್ಲ ಎಂಬ ಎಚ್ಚರ ಸದಾ ಇರಬೇಕೆಂಬುದನ್ನು ಸದಾ ತೋರುತ್ತದೆ.

ರಾಜ್ಯ ಸರ್ಕಾರಗಳ ಸಂಪನ್ಮೂಲ ಕೊರತೆ ಮತ್ತು ಕೇಂದ್ರ ಸರಕಾರವು ಸಂಪನ್ಮೂಲ ನೀಡಿಕೆಯಲ್ಲಿ ನಡೆಸುತ್ತಾ ಬಂದಿರುವ ವಂಚನೆ ಹಿನ್ನೆಲೆಯಲ್ಲಿ ಮುಂಬರುವ ಕಾಂಗ್ರೆಸ್ ಸರ್ಕಾರವು ತನ್ನ ಗ್ಯಾರಂಟಿಗಳನ್ನು ಜಾರಿಗೊಳಿಸಲು ನವ ಉದಾರವಾದಿ ಆರ್ಥಿಕ ನೀತಿಗಳನ್ನು ತೀವ್ರ ತರವಾಗಿ ಜಾರಿಗೊಳಿಸಲು ಮುಂದಾಗಲಿದೆ. ತನ್ನ ವರ್ಗ ಹಿನ್ನೆಲೆಯ ಕಾರಣ ಕಾಂಗ್ರೆಸ್‌ಗೆ ಅದರ ಜಾರಿ ಅನಿವಾರ್ಯವೂ ಆಗಲಿದೆ. ಇಂತಹ ನೀತಿಗಳ ವಿರುದ್ಧ ಹಾಗೂ ಆರ್‌ಎಸ್‌ಎಸ್ ಮತ್ತು ಬಿಜೆಪಿಯ ಹಿಂದುತ್ವವಾದಿ ಕೋಮುವಿಭಜಕ ಯತ್ನಗಳ ವಿರುದ್ಧ ನಮ್ಮ ಹೋರಾಟಗಳು ನಿತ್ಯ ನಿರಂತರವಾಗಿ ಅನಿವಾರ್ಯವಾಗಲಿವೆ.

ಜಾತ್ಯತೀತ ಶಕ್ತಿಗಳು ಒಂದಾಗಿ ಸೇರಿ ಬಿಜೆಪಿ ಆಡಳಿತವನ್ನು ಸೋಲಿಸುತ್ತೇವೆ-ಸೀತಾರಾಂ ಯೆಚೂರಿ



ಚೆನ್ನೈ, ಮೇ 17-ಎಲ್ಲಾ ಜಾತ್ಯತೀತ ಶಕ್ತಿಗಳು ಒಗ್ಗೂಡಿದರೆ ಬಿಜೆಪಿಯನ್ನು ಸೋಲಿಸಿ ಈಗಿನ ಭಾರತಕ್ಕಿಂತ ಉತ್ತಮ ಭಾರತವನ್ನು ನಿರ್ಮಿಸಬಹುದು ಎಂದು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಹೇಳಿದ್ದಾರೆ. ಮೇ 16ರಂದು ತಮಿಳುನಾಡಿನ ವಿಲ್ಲುಪುರಂನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವತಿಯಿಂದ ನಡೆದ ಪರಿಶಿಷ್ಟ ಪಂಗಡಗಳ ಹಕ್ಕುಗಳ ಪುನಶ್ಚೇತನ ಸಮಾವೇಶದಲ್ಲಿ ಅವರು ಮಾತನಾಡಿ, ಇಂದಿನ ಸನ್ನಿವೇಶದಲ್ಲಿ ಈ ಸಮಾವೇಶ ಅತ್ಯಂತ ಮಹತ್ವದ ಸಮಾವೇಶವಾಗಿದೆ. ಮಾರ್ಕ್ಸ್ ವಾದಿ ಕಮ್ಯುನಿಸ್ಟ್ ಪಕ್ಷವು ವರ್ಗ ಹೋರಾಟದಲ್ಲಿ ಅಪಾರ ನಂಬಿಕೆ ಹೊಂದಿದೆ. ಭಾರತದಲ್ಲಿನ ವರ್ಗ ಹೋರಾಟವು ತನ್ನ ಗುರಿಯನ್ನು ಸಾಧಿಸಬೇಕೆಂದು ನಾವು ಬಯಸುತ್ತೇವೆ. ಪ್ರತಿಯೊಬ್ಬ ಮನುಷ್ಯನಿಗೆ ಎರಡು ಕಾಲುಗಳಿದ್ದರೂ, ಅವೆರಡೂ ಒಗ್ಗಟ್ಟಿನಿಂದ ಕೆಲಸ ಮಾಡುವುದರಿಂದ ಮಾತ್ರ ಆರೋಗ್ಯವಂತ ವ್ಯಕ್ತಿಯಾಗಬಹುದು. ಅದೇ ರೀತಿ, ಒಂದು ರಾಜಕೀಯ ಆಂದೋಲನವು ಕೇವಲ ಭೌತಿಕ ಶೋಷಣೆಯ ವಿರುದ್ಧ ಮಾತ್ರವಲ್ಲದೆ ಸಾಮಾಜಿಕ ದಬ್ಬಾಳಿಕೆಯ ವಿರುದ್ಧವೂ ಹೋರಾಡಬೇಕು. ಇವೆರಡೂ ಒಟ್ಟಾಗಿ ಕೆಲಸ ಮಾಡುವುದರಿಂದ ಮಾತ್ರ ಮಾನವೀಯತೆಯನ್ನು ಎಲ್ಲಾ ಅಡೆತಡೆಗಳಿಂದ ಮುಕ್ತಗೊಳಿಸಬಹುದು. ಇದೇ ಮಾರ್ಕ್ಸ್ ವಾದದ ಅಂತಿಮ ಗುರಿ. ವಿಮೋಚನೆಯ ತತ್ವವೂ ಅದೇ ಆಗಿದೆ. ಇದು ಮಾರ್ಕ್ಸ್ ವಾದಕ್ಕೆ ವಿಶಿಷ್ಟ ಘನತೆಯ ಸಂಕೇತ ಮಾತ್ರವಲ್ಲ, ನಮ್ಮ ಸಂವಿಧಾನವನ್ನು ರೂಪಿಸಿದ ಡಾ.ಅಂಬೇಡ್ಕರ್ ಅವರ ಆಶಯವೂ ಇದೇ ಆಗಿತ್ತು ಎಂದರು.

ಅಂಬೇಡ್ಕರ್ ಹಾಗೂ ಮಾರ್ಕ್ಸ್ ಹೇಳಿದ್ದೇನು?

ಸಂವಿಧಾನ ರಚನಾ ಸಭೆಯಲ್ಲಿ ಸಂವಿಧಾನದ ಕರಡನ್ನು ಮಂಡಿಸುವಾಗ ಡಾ. ಬಿ.ಆರ್. ಅಂಬೇಡ್ಕರ್ ಅವರು ಒಂದು ಎಚ್ಚರಿಕೆ ನೀಡಿದರು. ಅದೇನೆಂದರೆ, ನಾವು ಸಂವಿಧಾನದಲ್ಲಿ ಸ್ಥಾಪಿಸಬಹುದಾದ ರಾಜಕೀಯ ರಚನೆ ಎಂಬುದು ಒಬ್ಬರು ಒಂದು ಮತದ ಹಕ್ಕನ್ನು ಹೊಂದಿರಬೇಕು, ಒಂದು ಮತ, ಒಂದು ಮೌಲ್ಯ ಎಂಬುದು ಸಾಮಾಜಿಕ ದಬ್ಬಾಳಿಕೆ ಮತ್ತು ಆರ್ಥಿಕವಾಗಿ ಶೋಷಣೆಯಲ್ಲಿ ಇರುವ ಜನರನ್ನು ವಿಮೋಚನೆ ಮಾಡುವಂತಾಗಬೇಕು ಎಂದು ಅವರು ಒತ್ತಿ ಹೇಳಿದರು. ಕಾರ್ಲ್ ಮಾರ್ಕ್ಸ್ ಅವರೂ ಸಹಾ ಭಾರತೀಯರೆಲ್ಲರೂ ಜಾತಿ, ಧರ್ಮದ ಹೆಸರಿನಲ್ಲಿ ಗುರುತಿಸಿಕೊಳ್ಳುವುದಕ್ಕಿಂತ ಮನುಷ್ಯರು ಎಂದು ಗುರುತಿಸಿಕೊಳ್ಳಬೇಕು, ಅಂದಾಗ ಮಾತ್ರ ಭಾರತಕ್ಕೆ ಉತ್ತಮ ಭವಿಷ್ಯವಿದೆ ಎಂದು ಹೇಳಿದ್ದಾರೆ. ಅದು ನಿಜವಾದ ಸಾಮಾಜಿಕ ನ್ಯಾಯವಾಗಬಲ್ಲದು. ಅಂತಹ ಸ್ಥಿತಿಯತ್ತ ಭಾರತವನ್ನು ಕೊಂಡೊಯ್ಯಬೇಕು. ಆದರೆ, ದುರದೃಷ್ಟವಶಾತ್ ದೇಶದಲ್ಲಿ ನಡೆಯುತ್ತಿರುವ ಎಲ್ಲಾ ವಿದ್ಯಮಾನಗಳು ದೇಶವನ್ನು ಕರಾಳ ಕಾಲಕ್ಕೆ ಕೊಂಡೊಯ್ಯುತ್ತಿವೆ. ಈಗಿನ ಆಡಳಿತಗಾರರು ಮನು ಸ್ಮೃತಿಯ ಆಧಾರದ ಮೇಲೆ ಭಾರತವನ್ನು ಅಂಧಕಾರ ಕಾಲದ ಆಡಳಿತದತ್ತ ಕೊಂಡೊಯ್ಯುತ್ತಿದ್ದಾರೆ. ನಾವು ಇದನ್ನು ಎಂದಿಗೂ ಒಪ್ಪಲಾಗದು.

ಅಂಧಕಾರ ಯುಗಗಳ ಕಡೆಗೆ

ಹೆಣ್ಣುಗಳನ್ನು ಗೌರವಿಸದ, ಅವರಿಗೆ ಯಾವುದೇ ವಿಧದ ಹಕ್ಕುಗಳನ್ನು ನೀಡದ, ದಲಿತರ ದಮನ, ಜಾತಿ ತಾರತಮ್ಯ ತುಂಬಿದ್ದ, ಜಾತಿ ಮೀರಿದ ವಿವಾಹಗಳಿಗೆ ಅವಕಾಶವಿಲ್ಲದ ತೀರಾ ಕೆಟ್ಟ ಪರಿಸ್ಥಿತಿ ಇದ್ದ ಕಾಲ ಅದಾಗಿತ್ತು. ಅಂತಹ ಸ್ಥಿತಿಯತ್ತ ದೇಶವನ್ನು ಮತ್ತೆ ಕೊಂಡೊಯ್ಯಲು ಈಗಿನ ಆಡಳಿತಗಾರರು ಮತ್ತು ಹಿಂದುತ್ವ ಶಕ್ತಿಗಳು ಪ್ರಯತ್ನಿಸುತ್ತಿವೆ. ಇಂತಹ ಪ್ರತಿಗಾಮಿ ಪ್ರಯತ್ನಗಳನ್ನು ನಾವು ಹೋರಾಡಿ ತಡೆಯುವುದು ಇಂದಿನ ಅಗತ್ಯವಾಗಿದೆ. ಭಾರತವನ್ನು ರಕ್ಷಿಸಲು ಮತ್ತು ಭವಿಷ್ಯದಲ್ಲಿ ಉತ್ತಮ ಭಾರತವನ್ನು ನಿರ್ಮಿಸಲು ನಾವೆಲ್ಲರೂ ಹೋರಾಡಬೇಕಾಗಿದೆ. ಸಾಮಾಜಿಕ ದಬ್ಬಾಳಿಕೆಯ ವಿರುದ್ಧ ಹೋರಾಡುವುದೆಂದರೆ ಅದು ಸಾಮಾಜಿಕ ನ್ಯಾಯದ ಬೆದರಿಕೆಗಳ ವಿರುದ್ಧ ಹೋರಾಟ ಮಾತ್ರವಲ್ಲ, ಇದು ನಮ್ಮ ಸಂವಿಧಾನದಲ್ಲಿ ನೀಡಿರುವ ಭರವಸೆಯನ್ನು ರಕ್ಷಿಸಲು ಮತ್ತು ಬಲಪಡಿಸಲು ನಡೆಸುವ ಹೋರಾಟವಾಗಿದೆ. ಫ್ಯಾಸಿಸ್ಟ್ ಆಡಳಿತಗಾರರು ಸಂವಿಧಾನವನ್ನು ಉಲ್ಲಂಘಿಸಿ ವರ್ತಿಸುವುದನ್ನು ತಡೆಯುವುದು ಇಂದಿನ ಅನಿವಾರ್ಯವಾಗಿದೆ. ಹಿಂದುತ್ವ ಶಕ್ತಿಗಳು ಮತ್ತು ಅವರ ಫ್ಯಾಸಿಸ್ಟ್ ಅಜೆಂಡಾ ವಿರುದ್ಧದ ಹೋರಾಟವು ಭಾರತದ ಸಂವಿಧಾನವನ್ನು ರಕ್ಷಿಸುವ ಹೋರಾಟ ಮಾತ್ರವಲ್ಲ, ಇದು, ಪ್ರಜಾಪ್ರಭುತ್ವ ಮತ್ತು ಆಡಳಿತಗಾರರ ಸಹಕಾರದೊಂದಿಗೆ ದೇಶದ ಆರ್ಥಿಕ ಸಂಪನ್ಮೂಲಗಳನ್ನು ಲೂಟಿ ಮಾಡುತ್ತಿರುವ ಕಾರ್ಪೊರೇಟ್‌ಗಳನ್ನು ತಡೆಯುವ ಹೋರಾಟವೂ ಹೌದು ಎಂದು ಯೆಚೂರಿ ಹೇಳಿದರು.

> **ಇತಿಹಾಸ ನಿರ್ಮಿಸಿದ ಕರ್ನಾಟಕದ ಜನರು-ಯೆಚೂರಿ**
>
> ಕರ್ನಾಟಕದಲ್ಲಿ ಜಾತ್ಯತೀತ ಶಕ್ತಿಗಳು ಒಂದಾಗಿ ಹೋರಾಡಲು ಮುಂದಾದವು. ಇವುಗಳಲ್ಲಿ ಪ್ರಮುಖವಾದದ್ದು ರಾಜಕೀಯ ಪಕ್ಷಗಳ ಒಗ್ಗೂಡುವಿಕೆ ಮಾತ್ರವಲ್ಲ; ಜನರು ಒಗ್ಗೂಡಿದರೆ ಹೊಸ ಇತಿಹಾಸ ಸೃಷ್ಟಿಸಬಹುದು ಮತ್ತು ಧಾರ್ಮಿಕ ಶಕ್ತಿಗಳನ್ನು ಸೋಲಿಸಬಹುದು ಎಂಬುದನ್ನು ಕರ್ನಾಟಕದ ಜನರು ಸಾಬೀತುಪಡಿಸಿದ್ದಾರೆ. ಇಂತಹ ಭರವಸೆಯನ್ನು ದೇಶದಾದ್ಯಂತ ಜನರಲ್ಲಿ ಮೂಡಿಸಬೇಕಾಗಿದೆ.

ನಿಜವಾದ ಸಾಮಾಜಿಕ ನ್ಯಾಯ

ನಾರಾಯಣ ಗುರು, ಮಹಾತ್ಮ ಫುಲೆ, ಪೆರಿಯಾರ್, ಅಂಬೇಡ್ಕರ್ ಅವರಂತಹ ಅನೇಕ ನಾಯಕರು ದೇಶದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದರು. ಇವರಲ್ಲದೆ ಇನ್ನೂ ಅನೇಕ ನಾಯಕರು ಸಾಮಾಜಿಕ ನ್ಯಾಯಕ್ಕಾಗಿ ಕೋಟಿಗಟ್ಟಲೆ ಜನರನ್ನು ಸಜ್ಜುಗೊಳಿಸಿದ್ದಾರೆ. ಆದರೆ, ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಎಲ್ಲರಿಗೂ ಸಾಮಾಜಿಕ ನ್ಯಾಯ ದೊರಕಿಲ್ಲ. ಉತ್ತರ ಪ್ರದೇಶದಲ್ಲಿ ದಲಿತ ಮಹಿಳೆಯರ ಮೇಲೆ ಕ್ರೂರ ಲೈಂಗಿಕ ದೌರ್ಜನ್ಯಗಳು ಹೆಚ್ಚಾಗುತ್ತಿವೆ. ತುಳಿತಕ್ಕೊಳಗಾದ ಜನರನ್ನು ಆರ್ಥಿಕ ಶೋಷಣೆಯಿಂದ ಮುಕ್ತಗೊಳಿಸಿ ಆರ್ಥಿಕವಾಗಿ ಸಬಲರಾದಾಗ ಮಾತ್ರ ನಿಜವಾದ ಸಾಮಾಜಿಕ ನ್ಯಾಯ ಸಿಗುತ್ತದೆ.

ತುಳಿತಕ್ಕೊಳಗಾದ ದಲಿತ ಜನರು

ಉತ್ತರ ಭಾರತದಲ್ಲಿ ಶೇ. 90ರಷ್ಟು ಭೂರಹಿತ ಕೃಷಿ ಕಾರ್ಮಿಕರು ತುಳಿತಕ್ಕೊಳಗಾದ ದಲಿತ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಅವರು ಆರ್ಥಿಕವಾಗಿ ಸಬಲರಾಗಬೇಕು. ಗಾಂಧೀಜಿಯವರಂತೆ ತಮ್ಮ ಹೆಸರನ್ನು ಹರಿಜನ ಎಂದು ಬದಲಾಯಿಸಿಕೊಂಡರೆ ಸಾಲದು. ಈ ಜನರು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಪ್ರಗತಿ ಹೊಂದಬೇಕು. ಆ ಸಮುದಾಯದಿಂದ ಶಿಕ್ಷಣತಜ್ಞರನ್ನು ಹುಟ್ಟು ಹಾಕಬೇಕಾದರೆ, ಅವರಿಗೆ ವಿದೇಶದಲ್ಲಿ ಅಧ್ಯಯನ ಮಾಡಲು ಸರ್ಕಾರ ಶೈಕ್ಷಣಿಕ ವಿದ್ಯಾರ್ಥಿವೇತನವನ್ನು ನೀಡಬೇಕು. ಅಂಬೇಡ್ಕರ್ ಅವರು ವಕೀಲರಾಗಲು ಅಮೇರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಹೋದರು. ಆದರೆ ಇಂದಿನ ಆಡಳಿತಗಾರರು ದಲಿತ ಸಮುದಾಯದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯುವ ಅವಕಾಶದಿಂದ ವಂಚಿತರನ್ನಾಗಿಸಿದ್ದಾರೆ. ದಲಿತ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನವನ್ನು ರದ್ದುಗೊಳಿಸಲಾಗಿದೆ. ಮುಸ್ಲಿಂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ರದ್ದುಗೊಳಿಸಲಾಗಿದೆ. ಆಡಳಿತಗಾರರ ಇಂತಹ ನಡವಳಿಕೆ ಭಾರತವನ್ನು ಹಿಂದಕ್ಕೆ ಕೊಂಡೊಯ್ಯುತ್ತಿದೆ. ಇದನ್ನು ಕೂಡಲೇ ನಿಲ್ಲಿಸಬೇಕು.

ಬಿಜೆಪಿಯ ನಿಜವಾದ ಉದ್ದೇಶವೇನು?

ಈಗ ದೇಶದಲ್ಲಿ ಏನಾಗುತ್ತಿದೆ? ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿಗೆ ಭಾರತವನ್ನು ಹಿಂದುತ್ವ ರಾಷ್ಟ್ರವನ್ನಾಗಿ ಮಾಡುವ ಉದ್ದೇಶವಿದೆ. ಅಂಬೇಡ್ಕರ್ ಹಿಂದೂ ಧರ್ಮದ ವಿರುದ್ಧ ಬಂಡಾಯವೆದ್ದು ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಹಿಂದೂ ಪುನರುಜ್ಜೀವನವು ಸಾಮಾಜಿಕ ಅನ್ಯಾಯ ಮತ್ತು ಸಾಮಾಜಿಕ ದಬ್ಬಾಳಿಕೆಯನ್ನು ಕಾನೂನುಬದ್ಧಗೊಳಿಸುವುದರ ಹೊರತಾಗಿ ಬೇರೇನೂ ಅಲ್ಲ. ಆದ್ದರಿಂದಲೇ ಹಿಂದುತ್ವ ಶಕ್ತಿಗಳು ಅದನ್ನು ಪುನಶ್ಚೇತನಗೊಳಿಸುವ ಮಾತನಾಡುತ್ತಿವೆ. ಭಾರತವನ್ನು ಮನು ಸ್ಮೃತಿಯ ಕಾಲಕ್ಕೆ ಕೊಂಡೊಯ್ಯುವುದು ಇದರ ಗುರಿಯಾಗಿದೆ. ಅವರು ನಾಲ್ಕು ವರ್ಣಗಳಲ್ಲಿ ಸಮಾಜವನ್ನು ವಿಭಜಿಸಲು ಬಯಸುತ್ತಾರೆ. ಇಂತಹ ಹಿಂದೂ ಪುನರುಜ್ಜೀವನವು ಸಾಮಾಜಿಕ ನ್ಯಾಯಕ್ಕಾಗಿನ ನಮ್ಮ ಹೋರಾಟಕ್ಕೆ ದೊಡ್ಡ ಅಪಾಯವನ್ನು ಉಂಟುಮಾಡುತ್ತದೆ.

ಹಿಂದೂ ಪುನರುತ್ಥಾನದ ಹಿನ್ನೆಲೆ ಏನು?

ಹಿಂದೂ ಪುನರುಜ್ಜೀವನ ಎಂದರೆ ಹಿಂದುತ್ವ ಸಮಾಜದ ಪುನರ್ ನಿರ್ಮಾಣ. ಅಂದರೆ ಜಾತಿ ದಬ್ಬಾಳಿಕೆ ಮುಂದುವರೆಯಬೇಕು. ಇಂದು ದೇಶದ ನಾನಾ ಭಾಗಗಳಲ್ಲಿ ದಲಿತರ ಮೇಲೆ ದೌರ್ಜನ್ಯ ಹೆಚ್ಚುತ್ತಿದೆ. ಹತ್ಯಾಕಾಂಡಗಳು ಹೆಚ್ಚುತ್ತಿವೆ. ಉತ್ತರ ಭಾರತದಲ್ಲಿ ಕಾಪ್ ಪಂಚಾಯತ್‌ಗಳು ಸಕ್ರಿಯವಾಗಿವೆ. ಹದಿಹರೆಯದವರು ಪ್ರೀತಿಸಿ ಮದುವೆಯಾದರೆ ಅಥವಾ ಅಂತರ್ಜಾತಿ ವಿವಾಹವಾದರೆ ಕಾಪ್ ಪಂಚಾಯತ್ ಗಳಲ್ಲಿ ಶಿಕ್ಷೆಗೆ ಗುರಿಯಾಗುತ್ತಾರೆ. ಇವೆಲ್ಲವೂ ದೇಶದ ಹಲವು ಭಾಗಗಳಲ್ಲಿ ನಡೆಯುತ್ತಿವೆ. ಕಾನೂನಿನಲ್ಲಿ ನಿಷೇಧ ಹೇರಿದ್ದರೂ ಮಾನವನ ಮಲಮೂತ್ರವನ್ನು ಕೈಯಿಂದ ತೆಗೆಸುವುದು ನಿಂತಿಲ್ಲ. ಹಿಂದೂ ಪುನರುತ್ಥಾನದ ಹೆಸರಿನಲ್ಲಿ ದೇಶವನ್ನು ಮನುಸ್ಮೃತಿಯ ಕಾಲಕ್ಕೆ ಕೊಂಡೊಯ್ಯುವ ಎಲ್ಲಾ ಪ್ರಯತ್ನಗಳು ಜಾತಿ ಆಧಾರಿತ ದಬ್ಬಾಳಿಕೆ ಮತ್ತು ಜಾತಿ ಆಧಾರಿತ ತಾರತಮ್ಯವನ್ನು ಮತ್ತಷ್ಟು ಹೆಚ್ಚಿಸುತ್ತವೆ ಎಂದು ಯೆಚೂರಿ ಜನತೆಗೆ ಎಚ್ಚರಿಸಿದರು.

ದಿಲ್ಲಿ ಖಾಸಗಿ ಶಾಲೆಗಳಲ್ಲಿ 'ಕೇರಳ ಸ್ಟೋರಿ'ಯ ಬಲವಂತದ ಪ್ರದರ್ಶನ, ಕೋಮುವಾದಿ ಪ್ರಚಾರಕ್ಕೆ ಬಳಕೆ - ದಿಲ್ಲಿ ಶಿಕ್ಷಣ ಮಂತ್ರಿಗಳಿಗೆ ಸಿಪಿಐ(ಎಂ) ಪತ್ರ

ದಿಲ್ಲಿಯ ಖಾಸಗಿ ಶಾಲೆಗಳ ಮ್ಯಾನೇಜ್‌ಮೆಂಟುಗಳು ಆ ಶಾಲೆಗಳ ವಿದ್ಯಾರ್ಥಿನಿಯರಿಗೆ 'ಕೇರಳ ಸ್ಟೋರಿ' ಸಿನೆಮಾ ಕಡ್ಡಾಯವಾಗಿ ತೋರಿಸಬೇಕು ಎಂದು ಪ್ರಿನ್ಸಿಪಾಲರುಗಳಿಗೆ ಬಲವಂತ ಮಾಡುತ್ತಿವೆ, ಇಡೀ ಸಿನೆಮಾ ಹಾಲ್‌ಗಳನ್ನೇ ಇದಕ್ಕಾಗಿ ಬುಕ್ ಮಾಡಿಸಿ ವಿದ್ಯಾರ್ಥಿನಿಯರುಗಳನ್ನು ಕರೆದುಕೊಂಡು ಹೋಗಲಾಗುತ್ತಿದೆ, ಅಷ್ಟೇ ಅಲ್ಲ, ಸಿನೆಮಾದ ನಂತರ ಮುಸ್ಲಿಂ ಸಮುದಾಯದ ಮೇಲೆ ಗುರಿಯಿಟ್ಟ ಉದ್ರೇಕಕಾರಿ ಭಾಷಣಗಳನ್ನೂ ಮಾಡಲಾಗುತ್ತಿದೆ, ಇದನ್ನು ನಿಲ್ಲಿಸಬೇಕಾಗಿದೆ ಎಂದು ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಹೇಳಿದೆ.

ಈ ಕುರಿತು ದಿಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೆ.ಎಂ. ತಿವಾರಿಯವರು ದಿಲ್ಲಿ ಸರಕಾರದ ಶಿಕ್ಷಣ ಮಂತ್ರಿ ಶ್ರೀಮತಿ ಅತಿಷಿಯವರಿಗೆ ಪತ್ರ ಬರೆದು, ಅಮಾಯಕ ವಿದ್ಯಾರ್ಥಿನಿಯರ ಮನಗಳಲ್ಲಿ ವಿಷ ತುಂಬುವ ಈ ಹೀನ ಕೃತ್ಯವನ್ನು ತಡೆಯಲು ಮಧ್ಯಪ್ರವೇಶಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ. ಅದರಲ್ಲಿ ನಿರ್ದಿಷ್ಟವಾಗಿ ಒಂದು ಶಾಲೆಯ ಉದಾಹರಣೆಯನ್ನೂ ಅವರು ಕೊಟ್ಟಿದ್ದಾರೆ.

ಒಂದು ವಿವಾದಾತ್ಮಕ ಚಿತ್ರವನ್ನು ನೋಡಲೇಬೇಕೆಂದು ಬಲವಂತ ಮಾಡುವುದು ನೈತಿಕವಾಗಿ ತಪ್ಪು ಮಾತ್ರವಲ್ಲದೆ, ನಮ್ಮ ಸಂವಿಧಾನದ ಆಶಯಗಳಿಗೆ ಮತ್ತು ಕೋಮು ಸೌಹಾರ್ದದ ನಮ್ಮ ಪರಂಪರೆಗೆ ವಿರುದ್ಧವಾದ ನಡೆ. ಅಲ್ಲದೆ ಈ ಚಿತ್ರ ಪ್ರದರ್ಶನದ ಮೂಲಕ ವಿದ್ಯಾರ್ಥಿನಿಯರು ಸ್ವತಂತ್ರ ಆಯ್ಕೆಗಳನ್ನು ಮಾಡಿಕೊಳ್ಳಬಾರದು ಎಂದು ಭೀತಿ ಹುಟ್ಟಿಸುವ ಪ್ರಯತ್ನವೂ ನಡೆಯುತ್ತಿದೆ ಎಂದೂ ಪತ್ರದಲ್ಲಿ ಹೇಳಲಾಗಿದೆ.

ಮುಕ್ಕಾಲು ಪಾಲು ಶಾಸಕರು ದಶಕೋಟ್ಯಾಧಿಪತಿಗಳು



ಈ ಬಾರಿ ಚುನಾಯಿತರಾದ ಶಾಸಕರ ಸರಾಸರಿ ಆಸ್ತಿ ಮೊತ್ತ 64.39 ಕೋಟಿ ರೂ. ಎಂದು ಎಡಿಆರ್(ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್) ಬಿಡುಗಡೆ ಮಾಡಿರುವ ವರದಿ ಹೇಳಿದೆ. ಅಭ್ಯರ್ಥಿಗಳು ಚುನಾವಣಾ ಆಯೋಗಕ್ಕೆ ಸಲ್ಲಿಸುವ ವಿವರಗಳ ಆಧಾರದಲ್ಲಿ 97% ಶಾಸಕರು ಕೋಟ್ಯಾಧಿಪತಿಗಳು, 5 ಕೋಟಿ ರೂ.ಗಿಂತ ಹೆಚ್ಚು ಆಸ್ತಿ ಇರುವವರ ಪ್ರಮಾಣ 81% ಎಂದು ಅದು ಲೆಕ್ಕ ಹಾಕಿದೆ. ಇದು ನಮ್ಮ ಚುನಾವಣೆಗಳಲ್ಲಿ ಹಣದ ಹೆಚ್ಚುತ್ತಿರುವ ಪ್ರಭಾವದ ಒಂದು ಆತಂಕಕಾರಿ ನೋಟವನ್ನು ಕಟ್ಟಿಕೊಡುತ್ತಿದೆ.

ಕೆಲವು ವಿವರಗಳನ್ನು ನೋಡಿ: (ರೂಪಾಯಿಗಳ ಲೆಕ್ಕದಲ್ಲಿ)

50 ಲಕ್ಷಕ್ಕಿಂತ ಕಡಿಮೆ	2 ಶಾಸಕರು	1%
50 ಲಕ್ಷದಿಂದ 2 ಕೋಟಿ	10	4%
2 ಕೋಟಿಯಿಂದ 5 ಕೋಟಿ	31	14%
5 ಕೋಟಿಗಿಂತ ಹೆಚ್ಚು	180	81%

ರಾಜ್ಯದ ಮೂರು ಪ್ರಮುಖ ಪಕ್ಷಗಳ ಪಕ್ಷವಾರು ಸರಾಸರಿ ಹೀಗಿದೆ:

ಕಾಂಗ್ರೆಸ್: ರೂ. 67.13 ಕೋಟಿ. ಬಿಜೆಪಿ: ರೂ. 44.36 ಕೋಟಿ. ಜೆಡಿ(ಎಸ್): ರೂ. 46.01 ಕೋಟಿ.

2018ರಲ್ಲಿ ಆರಿಸಿ ಬಂದವರಲ್ಲಿ ಈ ಬಾರಿಯೂ ಸ್ಪರ್ಧಿಸಿದವರ ಸಂಖ್ಯೆ 189. ಕಳೆದ 5 ವರ್ಷಗಳಲ್ಲಿ ಅವರ ಆಸ್ತಿಗಳಲ್ಲಿ ಸರಾಸರಿ 29 ಕೋಟಿ ರೂ.ನಿಂದ 48 ಕೊಟಿ ರೂ. ಅಂದರೆ ಸರಾಸರಿ 67% ರಷ್ಟು ಏರಿಕೆ ಆಗಿದೆ. ಮೂರು ಪ್ರಮುಖ ಪಕ್ಷಗಳ ಶಾಸಕರ ಸರಾಸರಿ ಆಸ್ತಿ ಲೆಕ್ಕಾಚಾರ ರೂಪಾಯಿಗಳ ಲೆಕ್ಕದಲ್ಲಿ **ಕೋಷ್ಠಕ 1** ರಲ್ಲಿ.

ಇವರಲ್ಲಿ ಈ ಬಾರಿಯೂ ಚುನಾಯಿತರಾದ 93 ಶಾಸಕರ ಆಸ್ತಿಗಳಲ್ಲಿ ಸರಾಸರಿ 29 ಕೋಟಿ ರೂ., ಅಂದರೆ 68% ರಷ್ಟು ಏರಿಕೆಯಾಗಿದೆ. ರೂಪಾಯಿಗಳ ಲೆಕ್ಕದಲ್ಲಿ ಪಕ್ಷವಾರು ವಿವರ **ಕೋಷ್ಠಕ 2** ರಲ್ಲಿ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಮರು ಆಯ್ಕೆ ಪಡೆದ ಪ್ರಮುಖ ರಾಜಕೀಯ ಪಕ್ಷಗಳ ಅಭ್ಯರ್ಥಿಗಳ ಸರಾಸರಿ ಆಸ್ತಿ ಮೌಲ್ಯ, ಮರು ಆಯ್ಕೆ ಬಯಸಿದ ಒಟ್ಟು ಅಭ್ಯರ್ಥಿಗಳ ಸರಾಸರಿಗಿಂತ ಹೆಚ್ಚು- ಅನುಕ್ರಮವಾಗಿ 1.23 ಪಟ್ಟು (ಕಾಂಗ್ರೆಸ್), 1.28 ಪಟ್ಟು (ಬಿಜೆಪಿ) ಮತ್ತು 2 ಪಟ್ಟು(ಜೆಡಿ-ಎಸ್).

ಮತ್ತು ಈ ಚುನಾವಣೆಯಲ್ಲಿ ಸ್ಪರ್ಧಿಸಿರುವ ಒಟ್ಟು 2586 ಅಭ್ಯರ್ಥಿಗಳ ಸರಾಸರಿ ಆಸ್ತಿ ರೂ. 12.26 ಕೋಟಿಯಾದರೆ, ಗೆದ್ದ 224 ಅಭ್ಯರ್ಥಿಗಳ ಸರಾಸರಿ ಆಸ್ತಿ ಮೊತ್ತ 64.39 ಕೋಟಿ ರೂ. ಅಂದರೆ 5 ಪಟ್ಟಿಗಿಂತಲೂ ಹೆಚ್ಚು! ಅಂದರೆ ಆಸ್ತಿ ಹೆಚ್ಚಿದಷ್ಟು ಶಾಸಕರಾಗುವ ಅವಕಾಶ/ಸಾಧ್ಯತೆ ಹೆಚ್ಚು.

ಹೆಚ್ಚೆಚ್ಚು ಶ್ರೀಮಂತ ಶಾಸಕರು

ಇನ್ನೊಂದು ಮೂಲದ ಪ್ರಕಾರ ಈ ಬಾರಿ ಪಕ್ಷವಾರು ಅಭ್ಯರ್ಥಿಗಳು ಮತ್ತು ಗೆದ್ದವರ ನಿವ್ವಳ ಸರಾಸರಿ ಆಸ್ತಿಗಳ ಹೋಲಿಕೆಯನ್ನು ನೋಡಿ:

ಪಕ್ಷ	ಅಭ್ಯರ್ಥಿಗಳು	ಶಾಸಕರು
ಕಾಂಗ್ರೆಸ್	36.03 ಕೋಟಿ	46.52 ಕೋಟಿ
ಬಿಜೆಪಿ	31.07 ಕೋಟಿ	34.56 ಕೋಟಿ
ಜೆಡಿ(ಎಸ್)	19.50 ಕೋಟಿ	33.61 ಕೋಟಿ

(ಲೋಕ್ ಧಾಬಾ, ಸ್ಕ್ರಾಲ್.ಇನ್, ಮೇ 16)

ಹೆಚ್ಚಿನ ರಾಜ್ಯಗಳಲ್ಲಿ ಶಾಸಕರು ತಮ್ಮ ನಿಜವಾದ ವೃತ್ತಿಯನ್ನು ರಾಜಕೀಯ ಅಥವ ಸಾಮಾಜಿಕ ಸೇವೆ ಎಂದು ಹೇಳಿ ಮರೆಮಾಚುತ್ತಾರೆ. ಆದರೆ ಕರ್ನಾಟಕದಲ್ಲಿ ಹಾಗಾಗಿಲ್ಲ. ಅಭ್ಯರ್ಥಿಗಳು ಸಲ್ಲಿಸಬೇಕಾದ ಅಫಿಡವಿಟ್‌ಗಳ ಪ್ರಕಾರ, ಈಗ ಚುನಾಯಿತರಾಗಿರುವ ಶಾಸಕರಲ್ಲಿ 44.2% ವ್ಯಾಪಾರ-ವಹಿವಾಟುಗಳಲ್ಲಿ ತೊಡಗಿರುವವರು, 21.9% ಕೃಷಿಯಲ್ಲಿ ತೊಡಗಿರುವವವರು. ರಾಜಕೀಯ ಅಥವ ಸಾಮಾಜಿಕ ಸೇವೆಯಲ್ಲಿ ತೊಡಗಿದ್ದೇವೆ ಎಂದು ಹೇಳಿರುವವರ ಪ್ರಮಾಣ 11.2% ಮಾತ್ರ.

ಪಕ್ಷವಾರಾಗಿ ಕೂಡ, ವ್ಯಾಪಾರ ವಹಿವಾಟುಗಳಲ್ಲಿ ತೊಡಗಿದ್ದೇನೆ ಎಂದು ಹೇಳಿರುವ ಚುನಾಯಿತ ಕಾಂಗ್ರೆಸ್ ಶಾಸಕರ ಪ್ರಮಾಣ 45%, ಬಿಜೆಪಿ ಶಾಸಕರಲ್ಲಿ 47% ಮತ್ತು ಜೆಡಿ(ಎಸ್) ಶಾಸಕರಲ್ಲಿ 42%,

ಕೃಷಿಯಲ್ಲಿ ತೊಡಗಿರುವವರು ಅನುಕ್ರಮವಾಗಿ 20%, 24% ಮತ್ತು 32%.

ಮತ್ತು 'ಸಾಮಾಜಿಕ ಸೇವೆ'ಯಲ್ಲಿ ತೊಡಗಿರುವವರು 9% (ಕಾಂಗ್ರೆಸ್), 6% (ಬಿಜೆಪಿ) ಮತ್ತು 5% (ಜೆಡಿ-ಎಸ್)

(ಪೌಲೋಮಿ ಘೋಷ್ ಮತ್ತಿತರರು, ಸ್ಕ್ರಾಲ್.ಇನ್, ಮೇ 16).

ಅವರು ಮೇಲೆ ಉಲ್ಲೇಖಿಸಿದ ಎಡಿಆರ್ ದತ್ತಾಂಶಗಳಿಂದ 2008 ರಿಂದ 2023ರ ನಡುವೆ ಕರ್ನಾಟಕದ ಚುನಾಯಿತ ಶಾಸಕರ ಸರಾಸರಿ ನಿವ್ವಳ ಆಸ್ತಿಗಳ ಈ ತಖ್ತೆಯನ್ನು ಕೊಡುತ್ತಾರೆ. (ಕೋಟಿ ರೂ.ಗಳಲ್ಲಿ):

ಪಕ್ಷ	2008	2013	2018	2023
ಕಾಂಗ್ರೆಸ್	5.5	10.7	15.1	46.5
ಬಿಜೆಪಿ	4.5	11.1	13.2	34.5
ಜೆಡಿ(ಎಸ್)	2.9	8.5	12.1	33.6

ಕರ್ನಾಟಕದ ಶಾಸಕರು ಹೆಚ್ಚೆಚ್ಚು ಶ್ರೀಮತರಾಗುತ್ತಿರುವಂತೆ ಕಾಣುತ್ತಿದೆ ಎಂದು ಅವರು ಹೇಳುತ್ತಾರೆ. ರಾಜಕೀಯದಲ್ಲಿ ಹೆಚ್ಚುತ್ತಿರುವ ಹಣ ಬಲದ ಈ ಸಂಕೇತ ಅತ್ಯಂತ ಆತಂಕಕಾರಿ ಎನ್ನುತ್ತಾರೆ ಅವರು.

ಇದರೊಂದಿಗೆ ಎರಡು ಸುದ್ದಿಗಳು ಈ ಆತಂಕವನ್ನು ಮತ್ತಷ್ಟು ಹೆಚ್ಚಿಸಿವೆ.

ಒಂದು, ಮತದಾರರಿಗೆ ಆಮಿಷ ಒಡ್ಡುವ ಚುನಾವಣಾ ಅಕ್ರಮದಲ್ಲಿ ಹೊಸ-ಹೊಸ ದಾಖಲೆಗಳು ನಿರ್ಮಾಣವಾಗುತ್ತಿವೆ. ಮಾರ್ಚ್ 29ರಿಂದ ಮೇ 9ರ ನಡುವೆ ಚುನಾವಣಾ ಆಯೋಗ ವಶಪಡಿಸಿಕೊಂಡ ನೋಟುಗಳ ಒಟ್ಟು ಮೌಲ್ಯ ರೂ.379 ಕೋಟಿ, ಜತೆಗೆ ಸುಮಾರು 100 ಕೋಟಿ ರೂ. ಮೌಲ್ಯದ ಚಿನ್ನಾಭರಣಗಳು, 'ಉಡುಗೊರೆ' ಸಾಮಗ್ರಿಗಳನ್ನು ಕೂಡ ವಶಪಡಿಸಿಕೊಳ್ಳಲಾಗಿದೆ ಎಂದು ವರದಿಯಾಗಿದೆ.

ಎರಡು, ಈ ಚುನಾವಣೆಯ ಹಿನ್ನೆಲೆಯಲ್ಲಿ ಎಪ್ರಿಲ್ 3ರಿಂದ 12ರ ನಡುವೆ ತೆರೆದಿಟ್ಟಿದ್ದ ಚುನಾವಣಾ ಬಾಂಡ್ ಸ್ಕೀಮಿನ 26ನೇ ಆವೃತ್ತಿಯಲ್ಲಿ ಮಾರಾಟ 9 ಪಟ್ಟು ಏರಿಕೆ ಕಂಡಿದೆ, ಒಟ್ಟು 970.50 ಕೋಟಿ ರೂ. ಮೌಲ್ಯದ ಬಾಂಡುಗಳ ಮಾರಾಟವಾಗಿದೆ ಎಂಬ ಸುದ್ದಿ.

ಕೋಷ್ಠಕ - 1					
ಪಕ್ಷ	**ಸಂಖ್ಯೆ**	**ಸರಾಸರಿ ಆಸ್ತಿ 2023**	**ಸರಾಸರಿ ಆಸ್ತಿ 2018**	**ಏರಿಕೆ**	**%**
ಕಾಂಗ್ರೆಸ್	66	73,21,85,524	43,65,12,305	29,56,73,219	67.74
ಬಿಜೆಪಿ	95	35,17,60,098	20,77,28,989	14,40,31,109	69.34
ಜೆಡಿ(ಎಸ್)	26	36,68,58,925	24,18,99,358	12,49,59,567	51.66

ಕೋಷ್ಠಕ - 2					
ಪಕ್ಷ	**ಸಂಖ್ಯೆ**	**ಸರಾಸರಿ ಆಸ್ತಿ 2023**	**ಸರಾಸರಿ ಆಸ್ತಿ 2018**	**ಏರಿಕೆ**	**%**
ಕಾಂಗ್ರೆಸ್	51	90 ಕೋಟಿ+	52 ಕೋಟಿ+	37 ಕೋಟಿ+	71.21
ಬಿಜೆಪಿ	38	45 ಕೋಟಿ+	27 ಕೋಟಿ+	18 ಕೋಟಿ+	66.88
ಜೆಡಿ(ಎಸ್)	4	75 ಕೋಟಿ+	53 ಕೋಟಿ+	21 ಕೋಟಿ+	39.68

ವಿದ್ಯುತ್ ಮೀಟರೀಕರಣದ KERC ಸುತ್ತೋಲೆ ವಿರೋಧಿಸಲು KPRS ಕರೆ

ಹತ್ತು ಹೆಚ್.ಪಿ. ಗಿಂತ ಕಡಿಮೆ ಇರುವ ಎಲ್ಲಾ ಕೃಷಿ ಪಂಪಸೆಟ್ ಗಳಿಗೆ, ಮೀಟರ್ ಅಳವಡಿಸಿ, ಅದರ ಆರ್.ಆರ್. ನಂಬರ್ ಗಳನ್ನು ರೈತರ ಆಧಾರ್ ಕಾರ್ಡ್ ಜೊತೆ ಜೋಡಣೆ ಮಾಡಬೇಕು ಎಂದು ರಾಜ್ಯದ ಎಲ್ಲಾ ವಿದ್ಯುತ್ ವಿತರಣಾ ಕಂಪನಿಗಳಿಗೆ ಕರ್ನಾಟಕ ವಿದ್ಯುತ್ ಚ್ಛಕ್ತಿ ನಿಯಂತ್ರಣ ಆಯೋಗ (KERC) ಆದೇಶ ಹೊರಡಿಸಿರುವುದು ಪಂಪಸೆಟ್ ಅವಲಂಬಿಸಿ ಕೃಷಿ ಮಾಡುತ್ತಿರುವ ರೈತರಿಗೆ ಅಘಾತಕಾರಿಯಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ (KPRS) ಕರ್ನಾಟಕ ರಾಜ್ಯ ಸಮಿತಿ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಇನ್ನು ಆರು ತಿಂಗಳ ಒಳಗೆ ಎಲ್ಲಾ ಕೃಷಿ ಪಂಪಸೆಟ್ ಗಳಿಗೆ ಆಧಾರ್ ಕಾರ್ಡ್ ಜೋಡಣೆ ಮಾಡದಿದ್ದರೆ ಅಂತಹ ಕೃಷಿ ಪಂಪಸೆಟ್ ಗಳಿಗೆ ಸರ್ಕಾರದ ಸಹಾಯ ಧನ ಬಿಡುಗಡೆ ಮಾಡುವುದಿಲ್ಲ ಎಂದು ಎಚ್ಚರಿಸಿರುವ ಕೆ.ಇ.ಆರ್.ಸಿ. ಸುತ್ತೋಲೆಯನ್ನು ಈ ತಕ್ಷಣ ವಾಪಸ್ಸು ಪಡೆಯಲು ಬೇಕಾದ ಅಗತ್ಯ ಕ್ರಮಗಳನ್ನು ಅನುಸರಿಸಿ ರೈತರ ಆತಂಕವನ್ನು ನಿವಾರಿಸಬೇಕು ಎಂದು ರಾಜ್ಯ ಸರ್ಕಾರದ ಇಂಧನ ಇಲಾಖೆಯನ್ನು ಕರ್ನಾಟಕ ಪ್ರಾಂತ ರೈತ ಸಂಘ (KPRS) ಕರ್ನಾಟಕ ರಾಜ್ಯ ಸಮಿತಿ ಆಗ್ರಹಿಸಿದೆ.

ಕೃಷಿ ಈಗಾಗಲೇ ನಷ್ಟದಲ್ಲಿ ನಡೆಯುತ್ತಿದೆ. ಕೃಷಿ ಲಾಗುವಾಡುಗಳ ದುಬಾರಿ ವೆಚ್ಚದಿಂದಾಗಿ, ಪ್ರತಿಯೊಂದು ರೈತ ಕುಟುಂಬವು ಅಪಾರ ಸಾಲ- ಸಂಕಟವನ್ನು ಅನುಭವಿಸುತ್ತಿದೆ. ದೇಶದ ಹಾಗೂ ರಾಜ್ಯದ ಆಹಾರ ಭದ್ರತೆ, ಸ್ವಾವಲಂಬನೆಗೆ ಇಷ್ಟೆಲ್ಲಾ ಸಂಕಟಗಳ ನಡುವೆ ಶ್ರಮಿಸುತ್ತಿರುವ ರೈತರನ್ನು ಮತ್ತಷ್ಟು ಸಂಕಟಕ್ಕೆ ತಳ್ಳುವ ಕ್ರಮಗಳು ರೈತ ಸಮುದಾಯದ ಆತ್ಮಸ್ಥೈರ್ಯವನ್ನೇ ಕುಗ್ಗಿಸುತ್ತವೆ. ಭೂಮಿ ಮತ್ತು ನೀರು ರೈತರ ಮೂಲಭೂತ ಅವಶ್ಯಕತೆಯಾಗಿದೆ. ಇಂತಹ ಅಗತ್ಯಗಳನ್ನು ಪೂರೈಸುವ ಜವಾಬ್ದಾರಿ ಇರುವ ಸರ್ಕಾರಗಳು ತಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವಂತಿಲ್ಲ. ಜೀವನ ವೆಚ್ಚ ಮತ್ತು ಬೇಸಾಯದ ವೆಚ್ಚದ ಅಧಿಕ ಭಾರದಿಂದ ನರಳುತ್ತಿರುವ ರೈತರ ಗಾಯದ ಮೇಲೆ ಬರೆ ಎಳೆಯುವ ಇಂತಹ ನಿರ್ಧಾರಗಳನ್ನು ತಕ್ಷಣ ಕೈ ಬಿಡಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘ (KPRS) ಕರ್ನಾಟಕ ರಾಜ್ಯ ಸಮಿತಿ ಆಗ್ರಹಿಸಿದೆ.

ವಿದ್ಯುತ್ ರಂಗವನ್ನು ಸಂಪೂರ್ಣ ಖಾಸಗೀಕರಣ ಮಾಡುವ ಕರಾಳ ವಿದ್ಯುತ್ ತಿದ್ದುಪಡಿ ಕಾಯ್ದೆ 2022, ರೈತರ ಪ್ರಬಲ ವಿರೋಧದ ನಡುವೆಯೂ ಸಂಸತ್ತಿನಲ್ಲಿ ಮಂಡನೆಯಾಗಿದೆ. ಇದು ಸಂಸತ್ತಿನಲ್ಲಿ ಅಂಗೀಕಾರ ಆಗುವ ಮುನ್ನವೇ ಇಂತಹ ರೈತ ವಿರೋಧಿ ಕಾಯ್ದೆಯನ್ನು ರಾಜ್ಯದಲ್ಲಿ ಜಾರಿ ಮಾಡುವ ಪ್ರಯತ್ನವು ಕಾನೂನಿನ ಆಳ್ವಿಕೆಯ ಅಣಕವಾಗಿದೆ. ಈ ಕರಾಳ ಕಾಯ್ದೆಯ ಸೆಕ್ಷನ್ 65 ಹಾಗೂ 66, ಉಚಿತ ಹಾಗೂ ಸಬ್ಸಿಡಿ ದರದಲ್ಲಿ ವಿದ್ಯುತ್ ವಿತರಣೆ ಯನ್ನು ನಿರ್ಭಂದಿಸಿದೆ. ಎಲ್ಲಾ ಪಂಪಸೆಟ್ ಗಳಿಗೆ ಮೀಟರ್ ಅಳವಡಿಸಿ ವಿದ್ಯುತ್ ಶುಲ್ಕ ವಸೂಲಿ ಮಾಡಲು ವಿದ್ಯುತ್ ವಿತರಣಾ ಕಂಪನಿಗಳಿಗೆ ಈ ತಿದ್ದುಪಡಿ ಕಾಯ್ದೆ ಅಧಿಕಾರ ನೀಡುತ್ತದೆ. ಇಂತಹ ಕರಾಳ ಕಾಯ್ದೆಯನ್ನು ರಾಜ್ಯ ಸರ್ಕಾರೆ, ಕೇರಳ, ತಮಿಳುನಾಡು, ತೆಲಂಗಾಣ, ಪಶ್ಚಿಮ ಬಂಗಾಳ ಮುಂತಾದ ರಾಜ್ಯಗಳ ಮಾದರಿಯಲ್ಲಿ ವಿರೋಧಿಸಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘ (KPRS) ಕರ್ನಾಟಕ ರಾಜ್ಯ ಸಮಿತಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಪಂಪಸೆಟ್ ಗಳಿಗೆ ಆಧಾರ್ ಕಾರ್ಡ್ ಜೋಡಣೆಯ ಉದ್ದೇಶವು, ನೇರ ನಗದು ವರ್ಗಾವಣೆ (DBT) ವ್ಯಾಪ್ತಿಗೆ ಕೃಷಿ ಪಂಪಸೆಟ್ ಗಳನ್ನು ಒಳಪಡಿಸಬೇಕಾದ ಕರಾಳ ಕಾಯ್ದೆಯ ಅಗತ್ಯವನ್ನು ಪೂರೈಸುವ ದುರುದ್ದೇಶವನ್ನು ಹೊಂದಿದೆ. ಈಗಾಗಲೇ ಅಡುಗೆ ಅನಿಲ ಸಬ್ಸಿಡಿ ವಿಷಯದಲ್ಲಿ ಆದಂತೆ ಕೃಷಿ ಪಂಪಸೆಟ್ ಗಳಿಗೂ ಆಗುತ್ತದೆ. ಒಕ್ಕೂಟ ಸರ್ಕಾರದ ತೆರಿಗೆ ನೀತಿಯಿಂದಾಗಿ ಆದಾಯ ನಷ್ಟ ಅನುಭವಿಸುತ್ತಿರುವ ರಾಜ್ಯಗಳ ಮೇಲೆ ನೇರ ನಗದು ವರ್ಗಾವಣೆ ಹೊರೆ ಹಾಕುವುದನ್ನು ಯಾವುದೇ ಕಾರಣಕ್ಕೂ ರಾಜ್ಯ ಸರ್ಕಾರ ಒಪ್ಪಬಾರದು. ಈಗ ಇರುವಂತೆ ಹತ್ತು ಹೆಚ್.ಪಿ. ವರೆಗಿನ ಕೃಷಿ ಪಂಪಸೆಟ್ ಗಳಿಗೆ ಉಚಿತ ವಿದ್ಯುತ್ ಸರಬರಾಜು ಮುಂದುವರೆಸಬೇಕು ಹಾಗೂ ಗುಣಮಟ್ಟದ ವಿದ್ಯುತ್ ಅನ್ನು ಪೂರೈಸಬೇಕು, ರೈತಾಪಿ ಕೃಷಿ ಯನ್ನು ನಾಶ ಮಾಡುವ KERC ಯ ರೈತ ವಿರೋಧಿ ಸುತ್ತೋಲೆಯನ್ನು ಕೂಡಲೇ ವಾಪಸ್ಸು ಪಡೆಯುವಂತೆ ಮಾಡಲು ಅಗತ್ಯ ಕ್ರಮಗಳನ್ನು ಅನುಸರಿಸಬೇಕು. ಇಲ್ಲವಾದರೆ ರಾಜ್ಯಾದ್ಯಂತ ಬೀದಿಗಿಳಿದು ಪ್ರತಿಭಟಿಸಬೇಕಾಗುತ್ತದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ (KPRS) ಕರ್ನಾಟಕ ರಾಜ್ಯ ಸಮಿತಿ ಈ ಮೂಲಕ ಎಚ್ಚರಿಸಿದೆ.

ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಯೂ ಮತ್ತು ಇಂದಿನ 'ಜನಾಭಿಪ್ರಾಯ'ವೂ

ಕಾರ್ಪೊರೇಟ್ ನಿಯಂತ್ರಿತ ಮಾಧ್ಯಮಗಳ ನಿರಂತರ ಪ್ರಚಾರದ ಫಲವಾಗಿ ಪಾಶ್ಚಾತ್ಯ ದೇಶಗಳಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ಜಾಣ್ಮೆಯಿಂದ ಸಾಮ್ರಾಜ್ಯಶಾಹಿಯ ಪರವಾಗಿ ತಿರುಗಿಸಲಾಗುತ್ತದೆ. ಇಂತಹ ಚಮತ್ಕಾರಗಳಿಗೆ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಇತ್ತೀಚಿನ ಲೇಖನವೇ ಒಂದು ಉದಾಹರಣೆ. ಆದರೆ ಇದು ಈಗ ಬದಲಾಗುತ್ತಿದೆ ಎಂಬುದನ್ನು ಐರೋಪ್ಯ ಒಕ್ಕೂಟದ ದೇಶಗಳ ಕಾರ್ಮಿಕರು ಆಗಾಗ ಮುಷ್ಕರಗಳಲ್ಲಿ ತೊಡಗುತ್ತಿರುವ ವಿದ್ಯಮಾನವು ಸ್ಪಷ್ಟಪಡಿಸುತ್ತದೆ. ತಮ್ಮದೇ ಸರ್ಕಾರಗಳು ಅನುಸರಿಸುತ್ತಿರುವ ಕ್ರಮಗಳಿಂದಾಗಿಯೇ ಉಕ್ರೇನ್ ಯುದ್ಧವು ಲಂಬಿಸುತ್ತಿದೆ ಎಂಬುದನ್ನು ಅವರು ಈಗ ಅರಿತುಕೊಂಡಿದ್ದಾರೆ. ಸದ್ಯದ ಮಟ್ಟಿಗೆ ಹೇಳುವುದಾದರೆ, ರಷ್ಯಾದ ವಿರುದ್ಧ ಪ್ರಕಟಗೊಳ್ಳುತ್ತಿರುವ ಆಕ್ರಮಣಕೋರತೆಯಿಂದಾಗಿ ಸ್ವತಃ ಸಾಮ್ರಾಜ್ಯಶಾಹಿ ಆಧಿಪತ್ಯವೇ ಅಪಾಯಕ್ಕೊಳಗಾಗಿದೆ. ಮೂರನೇ ಜಗತ್ತಿನ ಜನತೆಯು ರಷ್ಯಾ ಮತ್ತು ಚೀನಾವನ್ನು ಬೆಂಬಲಿಸುತ್ತಿದ್ದರೆ, ಅದು ಅವರು ಸಾಮ್ರಾಜ್ಯಶಾಹಿ ಯೋಜನೆ ಏನೆಂಬುದನ್ನು ಸರಿಯಾಗಿಯೇ ಅರ್ಥಮಾಡಿಕೊಂಡಿರುವುದರಿಂದಾಗಿಯೇ ಹೊರತು, ನ್ಯೂಯಾರ್ಕ್ ಟೈಮ್ಸ್ ಹೇಳುವಂತೆ ಪ್ರಜಾಪ್ರಭುತ್ವ, ನಾಗರಿಕ ಸ್ವಾತಂತ್ರ್ಯಗಳು, ಜಾತ್ಯತೀತತೆ ಇತ್ಯಾದಿ ಮೌಲ್ಯಗಳ ಮಹತ್ವವನ್ನು ಸೂಕ್ಷ್ಮವಾಗಿ ಗ್ರಹಿಸದ ಕಾರಣದಿಂದಾಗಿ ಅಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: **ಕೆ.ಎಂ.ನಾಗರಾಜ್**

ಜಾಗತಿಕವಾಗಿ ಹೇಗೆ ಜನಾಭಿಪ್ರಾಯವನ್ನು ರೂಪಿಸಲಾಗುತ್ತದೆ ಎಂಬ ವಿಷಯದ ಬಗ್ಗೆ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಬೆನೆಟ್ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಪಾಲಿಸಿ ಎಂಬ ಸಂಸ್ಥೆಯು ಒಂದು ಸಮೀಕ್ಷೆಯನ್ನು ನಡೆಸಿದೆ. ಈ ಸಮೀಕ್ಷೆಯ ವರದಿಯ ಬಗ್ಗೆ ಒಂದು ವಿಶ್ಲೇಷಣೆಯನ್ನು ನ್ಯೂಯಾರ್ಕ್ ಟೈಮ್ಸ್ ನ್ಯೂಸ್ ಸರ್ವಿಸ್ ಪ್ರಕಟಿಸಿದೆ. ಇದನ್ನು ಕೋಲ್ಕತಾದ ದಿ ಟೆಲಿಗ್ರಾಫ್ ಪತ್ರಿಕೆಯು ಮೇ 7 ರಂದು ಮರುಪ್ರಕಟಿಸಿದೆ. ಈ ವಿಶ್ಲೇಷಣೆಯ ಒಂದು ಭಾಗದ ಸಾರಾಂಶವು ಹೀಗಿದೆ: ಉಕ್ರೇನ್ ಯುದ್ಧವು "ಪೂರ್ವ ಏಷ್ಯಾ ಮತ್ತು ಅಭಿವೃದ್ಧಿ ಹೊಂದಿದ ಯುರೋಪಿನ ಪ್ರಜಾಪ್ರಭುತ್ವಗಳಲ್ಲಿ ಹಾಗೂ ಅಮೇರಿಕಾದಲ್ಲಿ ಜನಸಾಮಾನ್ಯರ ಅಭಿಪ್ರಾಯಗಳನ್ನು ಹೇಗೆ ಬದಲಿಸಿತು ಎಂಬುದನ್ನು ಮತ್ತು ರಷ್ಯಾ ಮತ್ತು ಚೀನಾ ದೇಶಗಳ ವಿರುದ್ಧವಾಗಿ ಈ ದೇಶಗಳ ಜನತೆಯನ್ನು ಒಗ್ಗೂಡಿಸಿತು ಎಂಬುದನ್ನು ಮತ್ತು ಒಟ್ಟು ಜನಾಭಿಪ್ರಾಯವು ಒಟ್ಟಾರೆಯಾಗಿ ಹೇಗೆ ಅಮೆರಿಕದ ಪರವಾಗಿ ತಿರುಗಿತು" ಎಂಬುದನ್ನು ಮತ್ತು ಇದಕ್ಕೆ ವ್ಯತಿರಿಕ್ತವಾಗಿ "ಈ ಪ್ರಜಾಪ್ರಭುತ್ವಗಳ ಬಣದ ಹೊರಗೆ, ಜನರ ಒಲವು-ನಿಲುವುಗಳು ಬಹಳವಾಗಿ ಭಿನ್ನವಾಗಿದ್ದವು" ಹೇಗೆ ಎಂಬುದನ್ನು ಈ ವಿಶ್ಲೇಷಣೆ ತೋರಿಸುತ್ತದೆ. ಕೇವಲ ಒಂದು ದಶಕದ ಹಿಂದೆ, ಯುರೇಷಿಯಾ ಖಂಡದಿಂದ ಆಫ್ರಿಕಾದ ಉತ್ತರ ಮತ್ತು ಪಶ್ಚಿಮದ ವರೆಗಿನ ವಿಶಾಲ ವ್ಯಾಪ್ತಿಯ ದೇಶಗಳ ಜನತೆಯು ಸಾಮಾನ್ಯವಾಗಿ ಹೊಂದಿದ್ದ ಅಭಿಪ್ರಾಯವು ರಷ್ಯಾದ ಪರವಾಗೇ ಇತ್ತು. ಉಕ್ರೇನ್ ಯುದ್ಧವು ಅದನ್ನು ಸ್ವಲ್ಪಮಟ್ಟಿಗೆ ಬದಲಿಸಿತು ಮತ್ತು ಚೀನಾದ ಬಗ್ಗೆಯೂ ಸಾರ್ವಜನಿಕ ಅಭಿಪ್ರಾಯವನ್ನು ತುಸು ಬದಲಿಸಿತು.

ವಿಶ್ವದ ಎರಡು ಭಾಗಗಳ ಜನರ ಸಹಾನುಭೂತಿಯು ಬೇರೆ ಬೇರೆ ದಿಕ್ಕಿನಲ್ಲೇ ಇದೆ ಎಂಬ ಅಂಶವನ್ನು ವರದಿ ತಿಳಿಸುತ್ತದೆ. ಈ ಬಗ್ಗೆ ವರದಿಯಲ್ಲಿ ನೀಡಿರುವ ವಿವರಣೆಯು ತೀರಾ ಸಪ್ಪೆ ಎನಿಸುತ್ತದೆ: ಇದನ್ನು "ಮೂಲಭೂತ ಮೌಲ್ಯಗಳಲ್ಲಿನ ಭಿನ್ನತೆ" ಎಂದು ಕರೆಯುತ್ತದೆ. ಅಭಿವೃದ್ಧಿಶೀಲ ಜಗತ್ತಿನ "ದಮನಕಾರಿ" ಮತ್ತು "ನಿರಂಕುಶ" ಪ್ರಭುತ್ವಗಳ ಗ್ರಹಿಕೆಗಳು ಮುಂದುವರಿದ ದೇಶಗಳ "ಪ್ರಜಾಪ್ರಭುತ್ವ ಮತ್ತು ಉದಾರವಾದಿ" ಗ್ರಹಿಕೆಗಳಿಗಿಂತ ಭಿನ್ನವಾಗಿವೆ ಮಾತ್ರವಲ್ಲ, ಅಭಿವೃದ್ಧಿಶೀಲ ಜಗತ್ತಿನ ದೇಶಗಳ ಜನರು, ಅವರು ಹೊಂದಿರುವ ವಿಭಿನ್ನ ಮೂಲಭೂತ ಮೌಲ್ಯಗಳ ಕಾರಣದಿಂದಾಗಿ, ಪಾಶ್ಚಾತ್ಯ ಶಕ್ತಿಗಳ ಬಗ್ಗೆ ಸಹಾನುಭೂತಿ ಹೊಂದಿಲ್ಲವೆಂದು ತೋರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಮೂರನೇ ಜಗತ್ತಿನ ಜನತೆಯು ಪ್ರಜಾಪ್ರಭುತ್ವ, ನಾಗರಿಕ ಸ್ವಾತಂತ್ರ್ಯಗಳು, ಜಾತ್ಯತೀತತೆ ಇತ್ಯಾದಿ ಮೌಲ್ಯಗಳ ಮಹತ್ವವನ್ನು ಸೂಕ್ಷ್ಮವಾಗಿ ಗ್ರಹಿಸದ ಕಾರಣದಿಂದಾಗಿಯೇ ರಷ್ಯಾ ಮತ್ತು ಚೀನಾವನ್ನು ಬೆಂಬಲಿಸುತ್ತಾರೆ. ಆದ್ದರಿಂದ ಅವರು ಪಾಶ್ಚಾತ್ಯರೊಂದಿಗೆ ಗುರುತಿಸಿಕೊಂಡಿಲ್ಲ.

ಆದ್ದರಿಂದ, ಅಮೆರಿಕಾದ ವಿದೇಶಾಂಗ ನೀತಿಯು ಟರ್ಕಿ ಅಥವಾ ಭಾರತದಂತಹ ಮೂರನೇ ಜಗತ್ತಿನ "ಅಸಹಿಷ್ಣು" ಆಡಳಿತಗಳನ್ನು ದೂರವಿಡುವ ಬದಲು ಓಲೈಸಬೇಕು. ಏಕೆಂದರೆ, ಅಂತಹ ಆಡಳಿತಗಳು, ಪಾಶ್ಚಿಮಾತ್ಯ ಮೌಲ್ಯಗಳಿಂದ ಭಿನ್ನವಾಗಿದ್ದರೂ, ಸಾಮಾನ್ಯವಾಗಿ ಮೂರನೇ ಪ್ರಪಂಚದ ಜನರ ಮನಸ್ಥಿತಿಯೊಂದಿಗೆ ಮೇಳವಿಸಿ ಕೊಂಡಿರುತ್ತವೆ ಎಂಬ ಸಲಹೆಯನ್ನು ಈ ವರದಿಯಲ್ಲಿ ಸೂಚ್ಯವಾಗಿ ಹೇಳಲಾಗಿದೆ.

ಮಿಥ್ಯಾಪವಾದ

ಈ ವಿಶ್ಲೇಷಣೆಯು ಏನನ್ನು ನಿರ್ಲಕ್ಷಿಸುತ್ತದೆ ಎಂದರೆ, ಅಂತಹ ಆಡಳಿತಗಳನ್ನು ಅಮೆರಿಕಾ ದೂರವಿಟ್ಟಿರಲೇ ಇಲ್ಲ ಎಂಬುದನ್ನು. ಅದಲ್ಲದೆ, ಮೂರನೇ ಜಗತ್ತಿನ ಜನರ ಮೌಲ್ಯಗಳು ಅಂತಹ ಆಡಳಿತಗಳೊಂದಿಗೆ ಮೇಳವಿಸಿಕೊಳ್ಳುತ್ತವೆ ಎಂಬ ಸೂಚನೆಯೂ ಸಹ ಒಂದು ಮಿಥ್ಯಾಪವಾದವೇ. ವಾಸ್ತವವಾಗಿ, ಅದಕ್ಕೆ ತದ್ವಿರುದ್ಧವಾಗಿ, ತಮ್ಮ ಹಿತಾಸಕ್ತಿಗಳನ್ನು ಕಾಪಾಡುವ, ತಮ್ಮ ಪರವಾಗಿ ಕೆಲಸ ಮಾಡುವ ಆಡಳಿತಗಳನ್ನು ಮೂರನೇ ಜಗತ್ತಿನ ಜನತೆ ಆಯ್ಕೆ ಮಾಡಿದಾಗಲೆಲ್ಲಾ, ದಂಗೆಗಳ ಮೂಲಕ ಅಥವಾ ದಂಗೆಗಳನ್ನು ಉತ್ತೇಜಿಸುವ ಮೂಲಕ ಅಂತಹ ಜನರಿಂದ ಚುನಾಯಿಸಲ್ಪಟ್ಟ ಪ್ರಜಾಪ್ರಭುತ್ವ ಆಡಳಿತಗಳನ್ನು ಉರುಳಿಸಲು ಅಮೆರಿಕಾ ನೇರವಾಗಿ ಅಥವಾ ಪರೋಕ್ಷವಾಗಿ ಕೆಲಸ ಮಾಡಿದೆ. ಗ್ವಾಟೆಮಾಲಾ (ಅರ್ಬೆಂಜ್), ಇರಾನ್ (ಮೊಸ್ಸಾದೆಹ್), ಇಂಡೋನೇಷ್ಯಾ (ಸುಕಾರ್ನೊ), ಚಿಲಿ (ಅಲೆಂಡೆ), ಬ್ರೆಜಿಲ್ (ಗೌಲರ್ಟ್), ಕಾಂಗೋ (ಲುಮುಂಬಾ), ಬುರ್ಕಿನಾ ಫಾಸ್ಸೊ (ಸಂಕರ) ಉದಾಹರಣೆಗಳು ತಕ್ಷಣ ನೆನಪಿಗೆ ಬರುತ್ತವೆ. ಅದಲ್ಲದೆ, ತಮ್ಮ ಜನರನ್ನು ರಾಷ್ಟ್ರೀಯ ವಿಮೋಚನೆಯತ್ತ ಮುನ್ನಡೆಸುತ್ತಿದ್ದ ಎಡ್ವರ್ಡೊ ಮೊಂಡ್ಲೇನ್, ಅಮಿಲ್ಕರ್ ಕ್ಯಾಬ್ರಾಲ್ ಮತ್ತು ಇತರ ಜನಪ್ರಿಯ ನಾಯಕರ ಹತ್ಯೆಯನ್ನು ನೇರವಾಗಿ ಅಥವಾ ಪರೋಕ್ಷವಾಗಿ ಅಮೆರಿಕಾ ಬೆಂಬಲಿಸಿದೆ.

ಉಕ್ರೇನ್ ಯುದ್ಧವೂ ಸೇರಿದಂತೆ ಪಾಶ್ಚಾತ್ಯ ಶಕ್ತಿಗಳ ವಿರುದ್ಧ ತೃತೀಯ ಜಗತ್ತಿನ ಜನರಿಗಿರುವ ವಿರೋಧದ ಹಿಂದಿರುವ ನಿಜ ಕಾರಣದ ಬಗ್ಗೆ ಕಣ್ಣು ಮುಚ್ಚಿಕೊಂಡಾಗ ಮಾತ್ರ ಮೂರನೇ ವಿಶ್ವದ ಸರ್ವಾಧಿಕಾರಗಳಿಗೆ ಅಮೆರಿಕಾ ಇನ್ನೂ ಹೆಚ್ಚಿನ ಬೆಂಬಲ ಕೊಡುವ ಶಿಫಾರಸು ಮಾಡುವ ಪ್ರಶ್ನೆ ಉದ್ಭವಿಸುತ್ತದೆ. ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ಮೇಲಿನ ಅವರ ವಿರೋಧವು, ಅದು ತಿಳುವಳಿಕೆಯಿಂದ ಕೂಡಿದ್ದೇ ಅಥವಾ ಸಹಜವಾಗಿ ಬಂದದ್ದೋ ಎಂಬುದಕ್ಕಿಂತ ಮುಖ್ಯವಾಗಿ, ಅವರ ಜೀವನಾನುಭವದ ಆಧಾರದ ಮೇಲೆ ಮೂಡಿಬಂದಿರುವುದಂತೂ ಹೌದು. ಈ ಸಂಗತಿಯನ್ನು ಅಮೆರಿಕದೊಂದಿಗೆ ಮೈತ್ರಿ ಹೊಂದಿರುವ ನಿರಂಕುಶ ಪ್ರಭುತ್ವಗಳೂ ಸೇರಿದಂತೆ ಮೂರನೇ ಜಗತ್ತಿನ ಸರ್ಕಾರಗಳು ಅರಿತುಕೊಳ್ಳಬೇಕಾದ ಅನಿವಾರ್ಯತೆಗಳು ಆಗಾಗ ಉದ್ಭವಿಸಿವೆ. ಹಾಗಾಗಿಯೇ, ಮೂರನೇ ವಿಶ್ವದ ಈ ಸರ್ವಾಧಿಕಾರಿ ಸರ್ಕಾರಗಳು ಉಕ್ರೇನ್ ಯುದ್ಧದಲ್ಲಿ ರಷ್ಯಾದ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿವೆ.

ಮತ್ತೊಂದೆಡೆ, ಕಾರ್ಪೊರೇಟ್ ನಿಯಂತ್ರಿತ ಮಾಧ್ಯಮಗಳ ನಿರಂತರ ಪ್ರಚಾರದ ಫಲವಾಗಿ ಪಾಶ್ಚಾತ್ಯದೇಶಗಳಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ಜಾಣ್ಮೆಯಿಂದ ಸಾಮ್ರಾಜ್ಯಶಾಹಿಯ ಪರವಾಗಿ ತಿರುಗಿಸಲಾಗುತ್ತದೆ. ಇಂತಹ ಚಮತ್ಕಾರಗಳಿಗೆ ನಾವೀಗ ಚರ್ಚಿಸುತ್ತಿರುವ ನ್ಯೂಯಾರ್ಕ್ ಟೈಮ್ಸ್



ಪತ್ರಿಕೆಯ ಲೇಖನವೇ ಒಂದು ಉದಾಹರಣೆ.

ಆದರೆ ಇದು ಈಗ ಬದಲಾಗುತ್ತಿದೆ ಎಂಬುದನ್ನು ಐರೋಪ್ಯ ಒಕ್ಕೂಟದ ದೇಶಗಳ ಕಾರ್ಮಿಕರು ತಮ್ಮ ಜೀವನಮಟ್ಟವನ್ನು ಹಾಳುಗೆಡವುತ್ತಿರುವ ಹಣದುಬ್ಬರದ ವಿರುದ್ಧ ಇಂದಿನ ದಿನಗಳಲ್ಲಿ ಆಗಾಗ ಮುಷ್ಕರಗಳಲ್ಲಿ ತೊಡಗುತ್ತಿರುವ ವಿದ್ಯಮಾನವು ಸ್ಪಷ್ಟಪಡಿಸುತ್ತದೆ. ಉಕ್ರೇನ್ ಯುದ್ಧದಿಂದಾಗಿಯೇ ಹಣದುಬ್ಬರ ಉಂಟಾಗಿದೆ ಎಂದು ಅವರು ಸಕಾರಣವಾಗಿ ದೂಷಿಸುತ್ತಾರೆ. ತಮ್ಮದೇ ಸರ್ಕಾರಗಳು ಅನುಸರಿಸುತ್ತಿರುವ ಕ್ರಮಗಳಿಂದಾಗಿಯೇ ಈ ಯುದ್ಧವು ಲಂಬಿಸುತ್ತಿದೆ ಎಂಬುದನ್ನೂ ಅವರು ಅರಿತುಕೊಂಡಿದ್ದಾರೆ.

ತಮ್ಮ ಜನರಿಗೇ ಭಾರೀ ದ್ರೋಹವೆಸಗುವ ಪಶ್ಚಿಮದ ರಾಜಕೀಯ ಪಕ್ಷಗಳು

ಆದಾಗ್ಯೂ, ಗಮನಿಸಬೇಕಾದ ಅಂಶ ಯಾವುವೆಂದರೆ, ಕೆಲವು ಅಪವಾದಗಳನ್ನು ಹೊರತುಪಡಿಸಿ, ಅಮೆರಿಕಾದ ಹಿಂದೆ ಕೈಕಟ್ಟಿ ನಿಂತಿರುವ ಪಶ್ಚಿಮದ ರಾಜಕೀಯ ಪಕ್ಷಗಳು ತಮ್ಮ



ಜನತೆಗೆ ಭಾರೀ ದ್ರೋಹವೆಸಗಿವೆ ಎಂಬುದು. ಅವು ಯುಎಸ್‌ಗೆ ಕೊಡುತ್ತಿರುವ ಬೆಂಬಲವು ಯಾವ ಹಂತಕ್ಕೆ ಹೋಗಿದೆ ಎಂದರೆ, ಜರ್ಮನಿಯು ತನ್ನ ಅಗತ್ಯದ ಅನಿಲವನ್ನು ರಷ್ಯಾದಿಂದ ಭವಿಷ್ಯದಲ್ಲೂ ಪಡೆಯುವ ಸಾಧ್ಯತೆಯನ್ನು ತಪ್ಪಿಸುವ ಸಲುವಾಗಿಯೇ ನಾರ್ಡ್ ಸ್ಟ್ರೀಮ್ ಅನಿಲ ಕೊಳವೆ ಮಾರ್ಗವನ್ನು ಅಮೆರಿಕವೇ ಸ್ಫೋಟಿಸಿತು ಎಂಬುದನ್ನು ಖ್ಯಾತ ಪತ್ರಕರ್ತ ಸೆಮೋರ್ ಹರ್ಷ್ ಬಹಿರಂಗಪಡಿಸಿದ ನಂತರವೂ ಅವರು ಯಾವ ಆತಂಕವನ್ನೂ ವ್ಯಕ್ತಪಡಿಸಲಿಲ್ಲ. ನಾರ್ಡ್ ಸ್ಟ್ರೀಮ್ ಅನಿಲ ಕೊಳವೆ ಮಾರ್ಗದ ಸ್ಫೋಟದ ಸುದ್ದಿಯು ಹೆಚ್ಚು ಮಂದಿಯ ಗಮನಕ್ಕೆ ಬಾರದಂತೆ ಅಮೆರಿಕಾದ ಮತ್ತು ಯುರೋಪಿಯನ್ ಒಕ್ಕೂಟದ ಮಾಧ್ಯಮಗಳು ನೋಡಿಕೊಂಡವು.

ಈ ರೀತಿಯಲ್ಲಿ, ದುಡಿಯುವ ವರ್ಗದ ಪರವಾಗಿ ಮಾತನಾಡುತ್ತೇವೆಂದು ಹೇಳಿಕೊಳ್ಳುವ ಪಕ್ಷಗಳು ಮತ್ತು ಕಾರ್ಮಿಕ ವರ್ಗದ ಬೆಂಬಲವನ್ನು ಸಾಂಪ್ರದಾಯಿಕವಾಗಿ ಪಡೆಯುವ ಪಕ್ಷಗಳೂ ಸೇರಿದಂತೆ, ರಾಜಕೀಯ ಪಕ್ಷಗಳು ಜನರ ಹಿತಾಸಕ್ತಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವ ಸಂಗತಿಯು, ಯುದ್ಧನಿರತರಾಗಿದ್ದ ಪ್ರತಿ ದೇಶದ ಎರಡನೇ ಅಂತಾರಾಷ್ಟ್ರೀಯ (ಇಂಟರ್‌ನ್ಯಾಷನಲ್) ದ ನಾಯಕತ್ವವು "ತನ್ನದೇ ಬಂಡವಾಳಶಾಹಿ"ಗಳ ಯುದ್ಧ ಪ್ರಯತ್ನವನ್ನು ಬೆಂಬಲಿಸಿದ ಮೊದಲ ಮಹಾಯುದ್ಧ-ಪೂರ್ವ ದಿನಗಳನ್ನು ನೆನಪಿಸುತ್ತದೆ. ಜರ್ಮನ್ ಪಾರ್ಲಿಮೆಂಟಿನಲ್ಲಿ, 1914ರಲ್ಲಿ, ಯುದ್ಧ-ಸಾಲಗಳ ಪ್ರಶ್ನೆಯನ್ನು ಮತಕ್ಕೆ ಹಾಕಿದಾಗ, 86 ದಿನಪತ್ರಿಕೆಗಳನ್ನು ಹೊಂದಿದ್ದ ಜರ್ಮನಿಯ ಬಲಿಷ್ಠ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿಯು ಯುದ್ಧದ ಪರವಾಗಿ ಮತ ಚಲಾಯಿಸಿತು. ರೋಸಾ ಲಕ್ಸೆಂಬರ್ಗ್ ಅವರೊಂದಿಗೆ ಹುತಾತ್ಮರಾಗುವ ಮೊದಲು, ಜರ್ಮನ್ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಿದ ಕಾರ್ಲ್ ಲೀಬ್ನೆಕ್ಟ್ ಅವರ ಏಕೈಕ ಮತವಷ್ಟೇ ಯುದ್ಧದ ವಿರುದ್ಧವಾಗಿತ್ತು.

ಇಂದು ರಷ್ಯಾದ ವಿರುದ್ಧ ಉಕ್ರೇನನ್ನು ಬೆಂಬಲಿಸುವ ಜರ್ಮನ್ ಸರ್ಕಾರದ ಹಿಂದೆ ಸೋಶಿಯಲ್ ಡೆಮಾಕ್ರಾಟ್ಸ್ ಮಾತ್ರವಲ್ಲ, ಯುರೋಪಿನ ತೀವ್ರಗಾಮಿ ಎಡಪಂಥೀಯರು ಸಹ ನಿಂತಿದ್ದಾರೆ. ಅವರು ಎರಡು ವಾದಗಳನ್ನು- ಒಂದು ಸಾಮಾನ್ಯ ವಾದ ಮತ್ತು ಒಂದು ನಿರ್ದಿಷ್ಟ ವಾದವನ್ನು ಮಂಡಿಸುತ್ತಾರೆ. ಯುದ್ಧವು ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಯ ಫಲಿತಾಂಶವಾಗಿರುವುದರ ಬದಲು, ರಷ್ಯಾದ ಸಾಮ್ರಾಜ್ಯಶಾಹಿ ಯುದ್ಧದಲ್ಲಿ ಪಶ್ಚಿಮವು ಉಕ್ರೇನ್‌ಅನ್ನು ಬೆಂಬಲಿಸುತ್ತಿದೆ ಮತ್ತು ರಷ್ಯಾವೇ ಆಕ್ರಮಣಕಾರಿ ಸಾಮ್ರಾಜ್ಯಶಾಹಿ ಶಕ್ತಿಯಾಗಿದೆ ಎಂಬುದಾಗಿ ಸಾಮಾನ್ಯ ವಾದ ಹೇಳುತ್ತದೆ.

ಪ್ರಸ್ತುತ ಪರಿಸ್ಥಿತಿ ಬಗ್ಗೆ ಹುರುಳಿಲ್ಲದ ವಾದಗಳು

ಇಂದಿನ ಯುದ್ಧದ ಹಿನ್ನೆಲೆಯನ್ನು ಒಂದು ವೇಳೆ ನಾವು ಸಂಪೂರ್ಣವಾಗಿ ನಿರ್ಲಕ್ಷಿಸಿದರೂ ಸಹ, ಅಂದರೆ, ಉಕ್ರೇನಿನ ಚುನಾಯಿತ ಅಧ್ಯಕ್ಷ ವಿಕ್ಟರ್ ಯಾನುಕೋವಿಚ್ ಅವರ ವಿರುದ್ಧ ಅಮೆರಿಕದ "ನವ-ಸಂಪ್ರದಾಯವಾದಿಗಳು"

ಪುಟ 14 ಕ್ಕೆ

ರೈತರ ಹಕ್ಕುಗಳನ್ನು ಬೆಂಬಲಿಸಿದ ಸಂಶೋಧಕಿಯನ್ನು ತನಿಖೆಗೆ ಗುರಿಪಡಿಸಿದ ಇ.ಡಿ.: ವಿಶ್ವಾದ್ಯಂತ ತೀವ್ರ ಖಂಡನೆ ಮತ್ತು ಪ್ರತಿಭಟನೆ



ಸಂಶೋಧಕಿ, ಲೇಖಕಿ ಮತ್ತು ಸಕ್ರಿಯ ಕಾರ್ಯಕರ್ತೆ ಮತ್ತು ಪ್ರಧಾನ ಮಂತ್ರಿಗಳನ್ನು ಮಣಿಸಿದ ರೈತರ ಐತಿಹಾಸಿಕ ಹೋರಾಟವನ್ನು ಸಕ್ರಿಯವಾಗಿ ಬೆಂಬಲಿಸಿದ ಡಾ. ನವಶರಣ್ ಸಿಂಗ್ ಅವರನ್ನು ಮೇ 10ರಂದು ಏಳು ಗಂಟೆಗಳ ಕಾಲ ಜಾರಿ ನಿರ್ದೇಶನಾಲಯ (ಇ.ಡಿ.) ಪಿಎಂಎಲ್ಎ (ಕಪ್ಪು ಹಣವನ್ನು ಬಿಳುಪು ಮಾಡುವುದನ್ನು ತಡೆಯುವ) ಕಾಯ್ದೆಯ ಅಡಿಯಲ್ಲಿ ವಿಚಾರಣೆಗೆ ಗುರಿಪಡಿಸಿರುವುದಕ್ಕೆ ದೇಶ-ವಿದೇಶಗಳಲ್ಲಿ ವ್ಯಾಪಕ ಖಂಡನೆ ಮತ್ತು ಪ್ರತಿಭಟನೆಗಳು ವ್ಯಕ್ತವಾಗಿವೆ.

ರೈತ ಹೋರಾಟಕ್ಕೆ ನೇತೃತ್ವ ನೀಡಿರುವ ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ಒಂದು ಹೇಳಿಕೆಯನ್ನು ನೀಡಿ, ಡಾ. ನವಶರಣ ಅವರು ದಿಲ್ಲಿ ಗಡಿಗಳಲ್ಲಿ ಐತಿಹಾಸಿಕ ರೈತ ಚಳವಳಿಯ ಪ್ರಮುಖ ಬೆಂಬಲಿಗರಲ್ಲಿ ಒಬ್ಬರು. ರೈತರ ಹೋರಾಟದ ಸಂದೇಶವನ್ನು ಅಂತಾರಾಷ್ಟ್ರೀಯ ವೇದಿಕೆಗಳಿಗೆ ಕೊಂಡೊಯ್ದರು. ಇದಕ್ಕಾಗಿಯೇ ಮೋದಿ ಸರ್ಕಾರ ಆಕೆಯ ಮೇಲೆ ಸೇಡು ತೀರಿಸಿಕೊಳ್ಳುತ್ತಿದೆ ಎಂಬುದರಲ್ಲಿ ಸಂದೇಹವಿಲ್ಲ ಎನ್ನುತ್ತ, ನ್ಯಾಯಕ್ಕಾಗಿ ಆಕೆಯ ಅನ್ವೇಷಣೆಯಲ್ಲಿ ಎಸ್‌ಕೆಎಂ ಅವರಿಗೆ ಎಲ್ಲಾ ಬೆಂಬಲವನ್ನು ನೀಡುತ್ತದೆ ಎಂದು ಹೇಳಿದೆ.

ಇದು ಡಾ. ನವಶರಣ್ ಸಿಂಗ್ ಅವರಿಗೆ ಕಿರುಕುಳ ನೀಡುವ ಮತ್ತು ಬೆದರಿಸುವ ಬಿಜೆಪಿ ಸರ್ಕಾರದ ದುಷ್ಟಪ್ರಯತ್ನ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ತೀವ್ರವಾಗಿ ಖಂಡಿಸಿದೆ. ಪಿಎಂಎಲ್ಎ ಅಡಿಯಲ್ಲಿ ಅವರನ್ನು ಪ್ರಶ್ನಿಸುವ ಜಾರಿ ನಿರ್ದೇಶನಾಲದ ಕ್ರಮ ಭಿನ್ನಾಭಿಪ್ರಾಯದ ದನಿಗಳನ್ನು ಅಡಗಿಸುವ ಇನ್ನೊಂದು ಪ್ರಯತ್ನವಾಗಿದೆ. ಪ್ರಜಾಸತ್ತಾತ್ಮಕ ಹಕ್ಕುಗಳ ಪ್ರತಿಪಾದಕರಾಗಿ, ಸಾರ್ವಜನಿಕ ಚಿಂತಕರಾಗಿ ಮಹತ್ವದ ಪಾತ್ರ ವಹಿಸುತ್ತಿರುವ ಅವರು ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ರೈತ-ವಿರೋಧಿ ಮತ್ತು ಜನವಿರೋಧಿ ನೀತಿಗಳಿಗೆ ತಮ್ಮ ವಿರೋಧವನ್ನು ನಿರಂತರವಾಗಿ ವ್ಯಕ್ತಪಡಿಸುತ್ತ ಬಂದಿರುವವರು.

ಖ್ಯಾತ ನಾಟಕಕಾರ ದಿವಂಗತ ಗುರುಶರಣ್ ಸಿಂಗ್ ಅವರ ಪುತ್ರಿಯಾಗಿರುವ ಅವರು ರೈತ ಚಳವಳಿಗಳ ಕಟ್ಟಾ ಬೆಂಬಲಿಗರಾಗಿ ಬಿಜೆಪಿ ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿದ್ದರು ಎಂದು ಎಐಕೆಎಸ್ ಕೂಡ ನೆನಪಿಸಿದೆ. ಖ್ಯಾತ ಹಕ್ಕು ಕಾರ್ಯಕರ್ತ ಹರ್ಷ್ ಮಂದರ್ ನೇತೃತ್ವದ ಟ್ರಸ್ 'ಅಮನ್ ಬಿರಾದಾರಿ' ಮಂಡಳಿಯ ಸದಸ್ಯರಾಗಿರುವ ಅವರನ್ನು ಈ ಟ್ರಸ್ಟ್ ನ ಕೆಲವು ಹಣಕಾಸಿನ ವಹಿವಾಟುಗಳು ಮತ್ತು ಹರ್ಷಮಂದರ್ ಅವರೊಂದಿಗಿನ ಸಂಬಂಧದ ಬಗ್ಗೆ ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ವರದಿಯಾಗಿದೆ. ಜನರ ಹಕ್ಕುಗಳನ್ನು ಮತ್ತು ಕೋಮು ಸೌಹಾರ್ದವನ್ನು ಪ್ರತಿಪಾದಿಸುತ್ತ, ಈ ಹಕ್ಕುಗಳ ಮತ್ತು ಸೌಹಾರ್ದದ ಉಲ್ಲಂಘನೆಯ ವಿರುದ್ಧ ದೇಶವಿಡೀ ಸಂಚರಿಸುತ್ತಿರುವ ಮಾಜಿ ಉನ್ನತ ಸರಕಾರೀ ಅಧಿಕಾರಿ ಹರ್ಷ ಮಂದರ್ ಅವರ ದನಿಯನ್ನು ಅಡಗಿಸಲು ಆರಂಭಿಸಿರುವ ಈ ತನಿಖೆಯಲ್ಲಿ ಈಗ ನವಶರಣ್ ಸಿಂಗ್‌ರವರನ್ನು ಕೂಡ ಸೇರಿಸಿರುವುದು ದೇಶದಾದ್ಯಂತ ಬುದ್ಧಿಜೀವಿಗಳು ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಕಾರ್ಯಕರ್ತರನ್ನು ಗುರಿಯಾಗಿಸುವ ಮೋದಿ ಸರ್ಕಾರದ ವಿಶಾಲ ಮಾದರಿಯ ಭಾಗವಾಗಿದೆ ಎಂದಿರುವ ಎಐಕೆಎಸ್ ಪ್ರಗತಿಪರ ಮತ್ತು ಪ್ರಜಾಪ್ರಭುತ್ವವಾದಿ ದನಿಗಳ ಮೇಲೆ ಬಿಜೆಪಿ ಸರ್ಕಾರದ ಫ್ಯಾಸಿಸ್ಟ್ ದಾಳಿಗಳ ವಿರುದ್ಧ ದನಿ ಎತ್ತುವಂತೆ ಜನಾಂದೋಲನದ ಎಲ್ಲಾ ವಿಭಾಗಗಳಿಗೆ ಮನವಿ ಮಾಡಿದೆ.

ಅಖಿಲ ಭಾರತ ಅರಣ್ಯ ದುಡಿಯುವ ಜನರ ಸಂಘ ಮತ್ತು ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಷನ್ ಕೂಡ ಇದು ಭಿನ್ನಾಭಿಪ್ರಾಯದ ದನಿಗಳನ್ನು ತೊಡೆದುಹಾಕಲು ಬುದ್ಧಿಜೀವಿಗಳು ಮತ್ತು ಕಾರ್ಯಕರ್ತರನ್ನು ಗುರಿಯಾಗಿಸುವ ನಿಂದನೀಯ ಕೃತ್ಯ ಎಂದು ಖಂಡಿಸಿವೆ.

ಡಾ.ನವಶರಣ್ ಸಿಂಗ್ ಕೆನಡಾದ ಕಾರ್ಲೆಟನ್ ವಿಶ್ವವಿದ್ಯಾಲಯದಿಂದ ರಾಜಕೀಯ ವಿಜ್ಞಾನದಲ್ಲಿ ಪಿಎಚ್‌ಡಿ ಪಡೆದಿದ್ದಾರೆ. ಅಲ್ಲಿಯೂ ಬೌದ್ಧಿಕ ವಲಯದಲ್ಲಿ ಖ್ಯಾತರಾಗಿರುವ ಅವರನ್ನು ಬೆಂಬಲಿಸಿ ಕೆನಡಾದ 20ಕ್ಕೂ ಹೆಚ್ಚು ಸಂಸ್ಥೆಗಳು ಜಂಟಿ ಹೇಳಿಕೆಯನ್ನು ನೀಡಿದ್ದು, ಇ.ಡಿ. ಯ ಈ ಕ್ರಮವನ್ನು ಪ್ರಗತಿಪರ ಧ್ವನಿಗಳನ್ನು ಗುರಿಯಾಗಿಸಿಕೊಂಡಿರುವ ಮೋದಿ ಸರ್ಕಾರದ ಬಂಧನಗಳೊಂದಿಗೆ ತಳುಕು ಹಾಕುತ್ತ "ದಕ್ಷಿಣ ಏಷ್ಯಾದ ಒಬ್ಬ ಸಾಧಕಿ, ವಿದ್ವಾಂಸೆ ಮತ್ತು ಮಹಿಳಾ ಹಕ್ಕುಗಳ ಕಾರ್ಯಕರ್ತೆ, ಡಾ. ಸಿಂಗ್ ಅವರು ತಳಮಟ್ಟದ ಕೆಲಸದ ಸುದೀರ್ಘ ಇತಿಹಾಸವನ್ನು ಹೊಂದಿದ್ದಾರೆ ಮತ್ತು ಅವರ ದಿವಂಗತ ತಂದೆಯಿಂದ ಪಡೆದ ಪರಂಪರೆಯನ್ನು ಮುಂದಕ್ಕೊಯ್ಯುತ್ತಿದ್ದಾರೆ ಗ್ರಾಮೀಣ ಪಂಜಾಬ್ ಮತ್ತು ಇತರೆಡೆಗಳಲ್ಲಿ ಬಡವರು ಮತ್ತು ವಂಚಿತರನ್ನು ತಲುಪುವ ಮೂಲಕ, ಅವರ ಬೆಂಬಲ ಮತ್ತು ವಕಾಲತ್ತು ಅವರಿಗೆ ಜನಸಾಮಾನ್ಯರ ಪ್ರೀತಿ ಮತ್ತು ಗೌರವವನ್ನು ಗಳಿಸಿಕೊಟ್ಟಿದೆ. ಇದು ಅವರು ಮೋದಿಯ ಕಠೋರ ಕಾನೂನುಗಳ ವಿರುದ್ಧ ಭಾರತೀಯ ರೈತರ ಹೋರಾಟವನ್ನು ಧೈರ್ಯದಿಂದ ಬೆಂಬಲಿಸಿದಾಗ ಸ್ಪಷ್ಟವಾಗಿದೆ.

ಡಾ. ನವಶರಣ್ ಸಿಂಗ್ ಮತ್ತು ಅವರ ತಳಮಟ್ಟದ ಮತ್ತು ಶೈಕ್ಷಣಿಕ ಕೆಲಸಗಳ ಬಗ್ಗೆ ತಿಳಿದಿರುವ ಅಥವಾ ಪರಿಚಿತರಾಗಿರುವ ನಮಗೆ, ಆಡಳಿತದ ತನಿಖಾ ಸಂಸ್ಥೆಗಳಿಂದ ಆಕೆಯ ಕಿರುಕುಳವು ಆಕ್ರೋಶ ಉಂಟು ಮಾಡಿದೆ, ಇದನ್ನು ಒಪ್ಪಲು ಸಾಧ್ಯವಿಲ್ಲ, ಅದನ್ನು ದೃಢವಾಗಿ ವಿರೋಧಿಸಬೇಕು" ಎಂದಿವೆ.

ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಯೂ......

ಪುಟ 13 ರಿಂದ

("neo-cons") ವಿನ್ಯಾಸಗೊಳಿಸಿದ "ಮೈದಾನ" ಕ್ಷಿಪ್ರ-ಕ್ರಾಂತಿ ಮತ್ತು ರಷ್ಯನ್ ಭಾಷೆಯನ್ನು ಮಾತನಾಡುವ ಬಹುಸಂಖ್ಯಾತರನ್ನು ದಮನಿಸಿದ್ದರಿಂದಾಗಿ ತದನಂತರದಲ್ಲಿ ಪೂರ್ವ ಉಕ್ರೇನಿನಲ್ಲಿ ಭುಗಿಲೆದ್ದ ಸಂಘರ್ಷವನ್ನು ನಾವು ನಿರ್ಲಕ್ಷಿಸಿದರೂ ಸಹ, ರಷ್ಯಾ-ಉಕ್ರೇನ್ ಯುದ್ಧಕ್ಕೆ ಯಾರು ಹೊಣೆಗಾರರು ಎಂಬುದನ್ನು ತೋರಿಸುವ ಒಂದು ಸರಳ ಅಂಶವಿದೆ. ಯುದ್ಧವನ್ನು ತಡೆಯಬಹುದಾಗಿದ್ದ ಮತ್ತು ರಷ್ಯಾ ಒಪ್ಪಿಕೊಂಡಿದ್ದ ಮತ್ತು ಬದ್ಧವಾಗಿದ್ದ ಮಿನ್ಸ್ಕ್ ಒಪ್ಪಂದವನ್ನು ಇಂಗ್ಲಿಷರು ಮತ್ತು ಅಮೆರಿಕನ್ನರು ಸಮಾಧಿ ಮಾಡಿದರು. ವಾಸ್ತವವಾಗಿ, ಮಿನ್ಸ್ಕ್ ಒಪ್ಪಂದವು, ಉಕ್ರೇನ್‌ಗೆ ಸಾಕಷ್ಟು ಶಸ್ತ್ರಸಜ್ಜಿತವಾಗಲು ಸಮಯಾವಕಾಶವನ್ನು ಕಲ್ಪಿಸಿಕೊಡುವ ಉದ್ದೇಶದಿಂದ ಪ್ರೇರೇಪಿಸಲ್ಪಟ್ಟಿತ್ತು ಎಂಬುದನ್ನು ಏಂಜೆಲಾ ಮರ್ಕೆಲ್ ಒಪ್ಪಿಕೊಂಡಿದ್ದರು (ನಂತರ, ಪಶ್ಚಿಮದ ದೇಶಗಳಿಗೆ ಮುಜುಗುರವಾಗುವ ಕಾರಣದ ಮೇಲೆ ಅವರು ತಮ್ಮ ಹೇಳಿಕೆಯನ್ನು ಹಿಂತೆಗೆದುಕೊಂಡರು). ಮಿನ್ಸ್ಕ್ ಒಪ್ಪಂದವನ್ನು ರಷ್ಯಾ ಒಪ್ಪಿಕೊಂಡಿದ್ದ ರೀತಿಯಲ್ಲಿ ಒಂದು ಒಪ್ಪಂದಕ್ಕೆ ರಷ್ಯಾ ಬಂದ ಕ್ರಮವನ್ನು ರಷ್ಯಾದ ಸಾಮ್ರಾಜ್ಯಶಾಹಿಯ ಲಕ್ಷಣವೆಂದು ಹೇಳಲಾಗದು.

ರಷ್ಯಾವು ಉಕ್ರೇನ್ ಮೇಲೆ ಆಕ್ರಮಣ ಮಾಡಿದ್ದರಿಂದಾಗಿ, ಮುಂದುವರೆಯುತ್ತಲೇ ಇರುವ ಈ ಯುದ್ಧಕ್ಕೆ ರಷ್ಯಾವನ್ನೇ ನೇರ ಹೊಣೆಗಾರನಾಗಿ ಮಾಡಬೇಕು ಎಂಬುದಾಗಿ ನಿರ್ದಿಷ್ಟ ವಾದವು ಹೇಳುತ್ತದೆ. ಈ ವಾದವೂ ಸಹ ಹುರುಳಿಲ್ಲದ್ದೇ. ಆಕ್ರಮಣವನ್ನು ಯಾರು ಮಾಡಿದರೂ ಅದನ್ನು ಅನುಮೋದಿಸಲಾಗದು. ಆದರೆ, ಆಕ್ರಮಣದ ಹಿನ್ನೆಲೆಯನ್ನು ರೂಪಿಸಿದ ಘಟನೆಗಳಿಂದ ಆಕ್ರಮಣ ಒಂದನ್ನೇ ಪ್ರತ್ಯೇಕಿಸಿ ನೋಡಲಾಗದು. ಒಟ್ಟಾರೆ ಸನ್ನಿವೇಶದ ಮಹತ್ವವನ್ನು ಲೆನಿನ್ ಅವರು ಮೊದಲ ಮಹಾಯುದ್ಧದ ಬಗ್ಗೆ ನಿರ್ಣಯವೊಂದರ ಬರೆವಣಿಗೆ ಮಾಡುವಾಗ 1915ರಲ್ಲೇ ಒತ್ತಿಹೇಳಿದ್ದರು: "ಸಮಾಜವಾದಿಗಳು ತಮ್ಮ ತಂತ್ರಗಾರಿಕೆಯನ್ನು ನಿರ್ಧರಿಸುವಲ್ಲಿ ಯಾವ ಗುಂಪು ಮೊದಲ ಮಿಲಿಟರಿ ಹೊಡೆತವನ್ನು ಆರಂಭಿಸಿತು ಅಥವಾ ಯುದ್ಧವನ್ನು ಮೊದಲು ಘೋಷಿಸಿತು ಎಂಬ ಪ್ರಶ್ನೆ ಮುಖ್ಯವಲ್ಲ" (ಮೇ 6ರ 'ದಿ ಡೆಲ್ಲಿ ಇನಿಶಿಯೇಟಿವ್‌ನಲ್ಲಿ ಉಲ್ಲೇಖಿಸಲಾಗಿದೆ). ಪ್ರಸ್ತುತ ಸನ್ನಿವೇಶವು ಪಾಶ್ಚಾತ್ಯ ಸಾಮ್ರಾಜ್ಯಶಾಹಿಯು ತನ್ನ ಹಿಡಿತವನ್ನು ಪೂರ್ವ ದಿಕ್ಕಿನತ್ತ ವಿಸ್ತರಿಸುವ ಪ್ರಯತ್ನವೇ.

ಸಾಮ್ರಾಜ್ಯಶಾಹಿಯ ಪೂರ್ವಾಭಿಮುಖ ವಿಸ್ತರಣೆಗೆ ರಷ್ಯಾ ಏಕೆ ಹೆದರಬೇಕು? ಎಂಬ ಪ್ರಶ್ನೆಯನ್ನು ಎತ್ತಬಹುದು. ಅಂತಹ ವಿಸ್ತರಣೆಯು ದುರುದ್ದೇಶದಿಂದಲೇ ಕೂಡಿದೆ ಎಂದೇ ಏಕೆ ಭಾವಿಸಬೇಕು? ಈ ಪ್ರಶ್ನೆಗಳಿಗೆ ಉತ್ತರವನ್ನು ಸಾಮ್ರಾಜ್ಯಶಾಹಿಯ ಪ್ರವೃತ್ತಿಯಲ್ಲಿ ಕಾಣಬಹುದು. ಅಂದರೆ, ಸಾಮ್ರಾಜ್ಯಶಾಹಿಯು ದೊಡ್ಡ ದೇಶಗಳನ್ನು ಸಣ್ಣ ಸಣ್ಣ ತುಂಡುಗಳಾಗಿ ವಿಭಜಿಸಿ ಅವುಗಳ ಮೇಲೆ ಪ್ರಾಬಲ್ಯವನ್ನು ಸಮಗ್ರವಾಗಿ ಸಾಧಿಸುವ ಪ್ರವೃತ್ತಿಯನ್ನು ಹೊಂದಿದೆ. ಈ ಪ್ರವೃತ್ತಿಯು ಯುಗೊಸ್ಲಾವಿಯಾದ ವಿಷಯದಲ್ಲಿ ಮೊದಲು ಪ್ರಕಟಗೊಂಡಿತು. ಒಂದು ಗಣರಾಜ್ಯವಾಗಿದ್ದ ಯುಗೊಸ್ಲಾವಿಯಾವನ್ನು 1990-92ರಲ್ಲಿ ಜನಾಂಗೀಯತೆಯ ಆಧಾರದ ಮೇಲೆ ಎಂಟು ಗಣರಾಜ್ಯಗಳಾಗಿ ವಿಭಜಿಸಲಾಯಿತು. ನೈಸರ್ಗಿಕ ಸಂಪನ್ಮೂಲಗಳಿಂದ, ವಿಶೇಷವಾಗಿ ನೈಸರ್ಗಿಕ ಅನಿಲ ಮತ್ತು ಸ್ವಲ್ಪ ಮಟ್ಟಿಗೆ ತೈಲದಿಂದ, ಸಮೃದ್ಧವಾಗಿರುವ ರಷ್ಯಾದ ವಿಷಯದಲ್ಲಿ ಸಾಮ್ರಾಜ್ಯಶಾಹಿಯ ಈ ಪ್ರವೃತ್ತಿಯು ಇನ್ನೂ ಹೆಚ್ಚು ಮೊನಚಾಗಿರುತ್ತದೆ. ಅದಲ್ಲದೆ, ರಷ್ಯಾ ಒಂದು ವೇಳೆ ವಿಭಜನೆಗೊಂಡರೆ ಅಥವಾ ಬೇರೆ ರೀತಿಯಲ್ಲಿ ಅದರ ಮೇಲೆ ಹಿಡಿತ ಹೊಂದುವುದು ಸಾಧ್ಯವಾದರೆ, ಖನಿಜ ಸಂಪನ್ಮೂಲಗಳಿಂದ ಸಮೃದ್ಧವಾಗಿರುವ ಮಧ್ಯ ಏಷ್ಯಾದ ಅನೇಕ ಗಣರಾಜ್ಯಗಳ ಮೇಲೆ ಪ್ರಾಬಲ್ಯ ಹೊಂದುವಲ್ಲಿ ಸಾಮ್ರಾಜ್ಯಶಾಹಿಯ ಹಾದಿಯು ಸುಗಮವಾಗುತ್ತದೆ. ಚೀನಾದ ವಿರುದ್ಧವಾಗಿ ಪ್ರಕಟಗೊಳ್ಳುತ್ತಿರುವ ಸಾಮ್ರಾಜ್ಯಶಾಹಿಯ ಆಕ್ರಮಣಶೀಲತೆಯೂ ಸಹ ಇದೇ ರೀತಿಯ ಪ್ರೇರಣೆಯಿಂದ ಕೂಡಿದೆ. ಎಷ್ಟು ಸಾಧ್ಯವೊ ಅಷ್ಟು ತುಂಡುಗಳಾಗಿ ಚೀನಾವನ್ನು ವಿಭಜಿಸಲು ಸಾಮ್ರಾಜ್ಯಶಾಹಿಯು ಬಯಸುತ್ತದೆ. ಪ್ರಾಸಂಗಿಕವಾಗಿ ಹೇಳುವುದಾದರೆ, ಭಾರತದಂತಹ ಒಂದು ದೇಶವು ಸಾಮ್ರಾಜ್ಯಶಾಹಿಯ ಈ ಪ್ರವೃತ್ತಿಯ ಬಗ್ಗೆ ಚಿಂತಿಸಬೇಕಾದದ್ದು ಬಹಳಷ್ಟಿದೆ.

ಸದ್ಯದ ಮಟ್ಟಿಗೆ ಹೇಳುವುದಾದರೆ, ಇತರ ಅಂಶಗಳಿಗಿಂತ ಮಿಗಿಲಾಗಿ, ರಷ್ಯಾದ ವಿರುದ್ಧ ಪ್ರಕಟಗೊಳ್ಳುತ್ತಿರುವ ಈ ಆಕ್ರಮಣಕೋರತೆಯಿಂದಾಗಿಯೇ, ಸಾಮ್ರಾಜ್ಯಶಾಹಿ ಆಧಿಪತ್ಯವೇ ಅಪಾಯಕ್ಕೊಳಗಾಗಿದೆ. ವಿಶ್ವ ಪ್ರಾಬಲ್ಯವನ್ನು ಹೊಂದ ಬಯಸುವ "ನವ-ಸಂಪ್ರದಾಯವಾದಿ"ಗಳಿಂದ ("neo-cons") ಪ್ರೇರಿತವಾಗಿರುವ ಸಾಮ್ರಾಜ್ಯಶಾಹಿಯ ಈ ಕಾರ್ಯತಂತ್ರವು ಅದರ ಆಕ್ರಮಣಕೋರತೆಯ ಕಾರಣದಿಂದಾಗಿಯೇ ಭಾರೀ ವೈಫಲ್ಯವನ್ನು ಅನುಭವಿಸುತ್ತಿದೆ. ಈ ವೈಫಲ್ಯವು ಅದರ ಅತಿಯಾದ ಮಹತ್ವಾಕಾಂಕ್ಷೆಯ ಅನಿವಾರ್ಯ ಪರಿಣಾಮವೇ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಈ ವೈಫಲ್ಯದಿಂದಾಗಿ ಮೊಟ್ಟಮೊದಲಿಗೆ ಈ ಮಹತ್ವಾಕಾಂಕ್ಷೆಯ ಯೋಜನೆ ಇರಲೇ ಇಲ್ಲ ಎಂಬ ಅಭಿಪ್ರಾಯಕ್ಕೆ ಬರಲಾಗದು. ಮೂರನೇ ಜಗತ್ತಿನ ಜನತೆಯು ಸಾಮ್ರಾಜ್ಯಶಾಹಿ ಯೋಜನೆ ಏನೆಂಬುದನ್ನು ಸರಿಯಾಗಿಯೇ ಅರ್ಥಮಾಡಿಕೊಂಡಿದ್ದಾರೆ. ಆದ್ದರಿಂದಲೇ ರಷ್ಯಾಕ್ಕೆ ಅಷ್ಟೊಂದು ಬೆಂಬಲ ಸಿಕ್ಕಿದೆ.

ಸರ್ಕಾರದ ನೋಟು ರದ್ಧತಿ ಕ್ರಮ ವಿನಾಶಕಾರಿ ಎಂಬ ಆರೋಪ ಈಗ 2000 ರೂ. ನೋಟುಗಳ ರದ್ಧತಿಯೊಂದಿಗೆ ಸಾಬೀತಾಗಿದೆ-ಸಿಪಿಐ(ಎಂ)

ರಿಝರ್ವ್ ಬ್ಯಾಂಕ್ ರೂ.2000 ನೋಟುಗಳನ್ನು ಚಲಾವಣೆಯಿಂದ ಹಿಂಪಡೆದಿದೆ. ಈ ನಡೆಯು ಕಪ್ಪುಹಣ, ಭ್ರಷ್ಟಾಚಾರ, ಭಯೋತ್ಪಾದಕರಿಗೆ ನಿಧಿ ಮತ್ತು ಡಿಜಿಟಲ್ ಆರ್ಥಿಕತೆಗೆ ಉತ್ತೇಜನೆಯ ಭಾರತದ ಪ್ರಶ್ನೆಗಳಿಗೆ ಉತ್ತರವೆಂದು ಮೋದಿಯವರು ಅದ್ದೂರಿಯಾಗಿ ಪ್ರಕಟಿಸಿದ 2016 ರ ನೋಟು ರದ್ಧತಿಯನ್ನು ತಲೆಕೆಳಗು ಮಾಡಿಯೇ ಬಿಟ್ಟಿದೆ ಎಂದು ತಾನು ದೃಢವಾಗಿ ನಂಬುವುದಾಗಿ ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಇದು ಎಲ್ಲ ರೀತಿಯಲ್ಲೀ ಒಂದು ಶೋಚನೀಯ ವೈಫಲ್ಯ. ಹಿಂದಿನ ಅನುಭವದ ಆಧಾರದ ಮೇಲೆ ಹೇಳುವುದಾದರೆ, 2000 ರೂಪಾಯಿ ಕರೆನ್ಸಿ ನೋಟುಗಳಲ್ಲಿ ಸಂಗ್ರಹಿಸಿರುವ ಕಪ್ಪು ಹಣವನ್ನು ಸ್ವಚ್ಛಗೊಳಿಸುವ ಬದಲು, ಈ ಕ್ರಮವು ಅದನ್ನು ಕಾನೂನುಬದ್ಧಗೊಳಿಸುವ ಮತ್ತಷ್ಟು ಸಾಧ್ಯತೆಯನ್ನು ಹೊಂದಿದೆ ಎಂದು ಅದು ಹೇಳಿದೆ.

ಮೋದಿ ವಿರಚಿತ ನೋಟುರದ್ಧತಿ ದುರಂತ ಕೋಟಿಗಟ್ಟಲೆ ಜನಗಳ ಜೀವನೋಪಾಯಗಳನ್ನು ಕ್ರಿಮಿನಲ್ ರೀತಿಯಲ್ಲಿ ಊನಗೊಳಿಸಿದೆ, ನೂರಾರು ಜೀವಗಳನ್ನು ಬಲಿತೆಗೆದುಕೊಂಡಿದೆ, ಉದ್ಯೋಗ ಸೃಷ್ಟಿ ಮತ್ತು ಜಿಡಿಪಿ ಬೆಳವಣಿಗೆಗೆ ಹೆಚ್ಚಿನ ಕೊಡುಗೆ ನೀಡುವ ಅನೌಪಚಾರಿಕ ಆರ್ಥವ್ಯವಸ್ಥೆಯನ್ನು ಮತ್ತು ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳನ್ನು ಧ್ವಂಸಗೊಳಿಸಿದೆ.



ಮೋದಿ ನಿರ್ಮಿತ ನೋಟು ರದ್ಧತಿ ದುರಂತದ ನಂತರ ಚಲಾವಣೆಯಲ್ಲಿರುವ ನಗದು ಈಗ 83% ಹೆಚ್ಚಾಗಿದೆ. ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸಲಾಗಿದೆ, ಅದು ಹಲವು ಪಟ್ಟು ಹೆಚ್ಚಿದೆ. ಖಂಡನೀಯ ಭಯೋತ್ಪಾದಕ ದಾಳಿಗಳು ಅಮಾಯಕರ ಜೀವಗಳನ್ನು ಬಲಿ ತೆಗೆದುಕೊಳ್ಳುತ್ತಲೇ ಇವೆ.

ಮೋದಿ ನಮ್ಮ ಆರ್ಥಿಕತೆಗೆ ತಂದ ವಿನಾಶ ಮತ್ತು ರಾಷ್ಟ್ರೀಯ ಆಸ್ತಿಗಳ ಲೂಟಿಯನ್ನು ಪ್ರತಿರೋಧಿಸಬೇಕು ಮತ್ತು ಸೋಲಿಸಬೇಕು. ಬಂಟ ಕಾರ್ಪೊರೇಟ್ ಕೋಮುವಾದಿ ನಂಟನ್ನು ತಿರಸ್ಕರಿಸಬೇಕು ಎಂದಿರುವ ಪೊಲಿಟ್ ಬ್ಯುರೊ ಇಂತಹ ನಿರಂಕುಶ ಏಕಪಕ್ಷೀಯ ಜನವಿರೋಧಿ ಕ್ರಮಗಳಿಂದ ನಮ್ಮ ಅರ್ಥವ್ಯವಸ್ಥೆಯನ್ನು ರಕ್ಷಿಸಲು ಒಂದಾಗಬೇಕೆಂದು ಜನರಿಗೆ ಮನವಿ ಮಾಡಿದೆ.

ದಿಲ್ಲಿ ಆಡಳಿತ ಕುರಿತ ಸುಗ್ರೀವಾಜ್ಞೆ ಸರ್ವೋಚ್ಚ ನ್ಯಾಯಾಲಯಕ್ಕೆ ಮಾಡಿರುವ ಬಹಿರಂಗ ಅವಮಾನ-ಅದನ್ನು ಹಿಂಪಡೆಯಬೇಕು: ಸಿಪಿಐ(ಎಂ) ಆಗ್ರಹ

ಅಧಿಕಾರಶಾಹಿಯ ಮೇಲೆ ನಿಯಂತ್ರಣ ಸೇರಿದಂತೆ ಆಡಳಿತದ ಪ್ರಮುಖ ಕ್ಷೇತ್ರಗಳ ಮೇಲೆ ದಿಲ್ಲಿಯ ಚುನಾಯಿತ ಸರ್ಕಾರದ ಹಕ್ಕುಗಳನ್ನು ಎತ್ತಿಹಿಡಿದಿರುವ ಸುಪ್ರೀಂ ಕೋರ್ಟಿನ ಐದು ಸದಸ್ಯರ ಸಾಂವಿಧಾನಿಕ ಪೀಠದ ಇತ್ತೀಚಿನ ತೀರ್ಪನ್ನು ನಿರರ್ಥಕಗೊಳಿಸುವ ಸುಗ್ರೀವಾಜ್ಞೆಯನ್ನು ಕೇಂದ್ರ ಸರ್ಕಾರ ಹೊರಡಿಸಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ಇದು ನ್ಯಾಯಾಲಯದ ನಿಂದನೆಯಾಗುತ್ತದೆ ಮಾತ್ರವಲ್ಲದೆ, ಸಂವಿಧಾನದ ಒಕ್ಕೂಟ ಗುಣಲಕ್ಷಣಗಳ ಮೇಲೆ ಮತ್ತು ಸುಪ್ರೀಂ ಕೋರ್ಟ್ ನಿರೂಪಿಸಿರುವ ಜವಾಬುದಾರಿಕೆ ಮತ್ತು ಪ್ರಜಾಸತ್ತಾತ್ಮಕ ಆಳ್ವಿಕೆಯ ವಿಧಿ-ವಿಧಾನಗಳ ಮೇಲೆ ನೇರ ಪ್ರವಾಹವಾಗಿದೆ ಎಂದು ಅದು ಹೇಳಿದೆ. ದೇಶದ ಸರ್ವೋಚ್ಚ ನ್ಯಾಯಾಲಯಕ್ಕೆ ತೋರಿರುವ ಈ ಧಿಕ್ಕಾರವು ಮೋದಿ ಸರ್ಕಾರದ ನಗ್ನ ನಿರಂಕುಶ ಸ್ವಭಾವದ ಒಂದು ಮಾನದಂಡವಾಗಿದೆ ಎಂದು ಅದು ಹೇಳಿದೆ.

ಇದು ರಾಷ್ಟ್ರೀಯ ಹಿತಾಸಕ್ತಿಯ ಕ್ರಮ ಎಂಬ ಹುಸಿ ಕಾರಣಗಳನ್ನು ಕೊಟ್ಟಿರುವುದು ನ್ಯಾಯಾಲಯಕ್ಕೆ ಮಾಡಿರುವ ಒಂದು ಬಹಿರಂಗ ಅವಮಾನ. ಸಂವಿಧಾನ ಪೀಠವು ಒಂದು ಮೈಲಿಗಲ್ಲಾದ ಈ ತೀರ್ಪು ನೀಡಿದಾಗ ರಾಷ್ಟ್ರೀಯ ಹಿತಾಸಕ್ತಿಯ ಬಗ್ಗೆ ಅದಕ್ಕೇನೂ ಗೊತ್ತೇ ಇರಲಿಲ್ಲ ಎಂದು ಈ ಸರಕಾರ ಹೇಳಬಯಸುತ್ತದೆಯೇ ಎಂದು ಕೇಳಿರುವ ಪೊಲಿಟ್‌ಬ್ಯುರೊ ಇದು ದಿಲ್ಲಿಯ ಜನರು ಮತ್ತು ಸರ್ಕಾರಕ್ಕೆ ಮಾತ್ರವಲ್ಲ, ಕೇಂದ್ರ ಸರ್ಕಾರ ಸಾಂವಿಧಾನಿಕ ಒಕ್ಕೂಟ ಚೌಕಟ್ಟನ್ನು ನೆಲಸಮ ಮಾಡುತ್ತಿರುವ ಬಗ್ಗೆ ಆತಂಕಿತರಾಗಿರುವ ಎಲ್ಲಾ ನಾಗರಿಕರಿಗೆ ಸಂಬಂಧಿಸಿದ ಸಂಗತಿ ಎಂದು ಹೇಳಿದೆ. ಅದನ್ನು ವಿರೋಧಿಸಲೇಬೇಕು ಎಂದಿರುವ ಅದು ಈ ಸುಗ್ರೀವಾಜ್ಞೆಯನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದೆ.

'ವಿಜ್ಞಾನ ಪ್ರಸಾರ' ಸಂಸ್ಥೆಯನ್ನು ಮುಚ್ಚಬೇಡಿ-ಸಬಲಗೊಳಿಸಿ ಸರಕಾರಕ್ಕೆ ಜನ ವಿಜ್ಞಾನ ಸಂಘಟನೆ....... ಪುಟ 16 ರಿಂದ

ಜ್ಞಾನಪೂರ್ಣ ಸಮಾಜವಾಗಲು ಪ್ರಯತ್ನಿಸುತ್ತಿದ್ದೇವೆ. ಈ ರಾಷ್ಟ್ರೀಯ ಸಮಗ್ರ ದೃಷ್ಟಿಕೋನವನ್ನು ಖಾಸಗಿ ವಲಯ ಒದಗಿಸಲಾರದು" ಎಂದು ಅಭಿಪ್ರಾಯ ಪಟ್ಟಿದೆ.

'ವಿಜ್ಞಾನ ಪ್ರಸಾರ' ಸಂಸ್ಥೆಯ ಪ್ರಮುಖ ಸಾಧನೆಗಳನ್ನು ಅದು ಹೀಗೆ ಪಟ್ಟಿಮಾಡಿದೆ:

* ವಿಜ್ಞಾನವನ್ನು ಮಾತೃಭಾಷೆಯಲ್ಲಿ ಜನರ ನಡುವೆ ತೆಗೆದುಕೊಂಡು ಹೋಗುವ ಅದರ 'ವಿಜ್ಞಾನ ಭಾಷೆ' ಕಾರ್ಯಕ್ರಮ 8ನೇ ಶೆಡ್ಯೂಲ್‌ನಲ್ಲಿರುವ ಭಾಷೆಗಳಿಗೆ ಮಾತ್ರ ಸೀಮಿತವಾಗಿಲ್ಲ, ದೊಡ್ಡ ಸಂಖ್ಯೆಯಲ್ಲಿ ಮಾತನಾಡುವ ಬುಡಕಟ್ಟು ಭಾಷೆಗಳಿಗೂ ಅದನ್ನು ವಿಸ್ತರಿಸಲಾಗಿದೆ.. ಭಾರತೀಯ ಭಾಷೆಗಳಲ್ಲಿ (ಬಾಂಗ್ಲಾ, ತಮಿಳು, ಕನ್ನಡ, ಉರ್ದು, ಗುಜರಾತಿ ಮತ್ತು ಮರಾಠಿ) ವಿಜ್ಞಾನ ಪ್ರಕಟಣೆಗಳನ್ನು ಮಾಡಲಾಗಿದೆ. ಮಾಸಿಕ ಸುದ್ದಿಪತ್ರಗಳು, ತಜಸ್ಸಸ್ (ಉರ್ದು), ಅರಿವಿಯಲ್ ಪಾಲಗ್ಯೆ (ತಮಿಳು) ಬಿಗ್ಯಾನ್ ಕಥಾ (ಬಾಂಗ್ಲಾ) ಮತ್ತು ಕುತೂಹಲಿ (ಕನ್ನಡ) ವಿಜ್ಞಾನ ಪತ್ರಿಕೆಗಳ ಮೂಲಕ ಸಾರ್ವಜನಿಕರಿಗೆ ಅವರ ಮಾತೃಭಾಷೆಯಲ್ಲಿ ವೈಜ್ಞಾನಿಕ ಮಾಹಿತಿಯನ್ನು ತಲುಪಿಸುವ ಬೃಹತ್ ಪ್ರಯತ್ನ ಹಿಂದೆಂದೂ ನಡೆದಿಲ್ಲ. ಇದಕ್ಕೆ ವಿಜ್ಞಾನ ಮತ್ತು ಸಂವಹನ ಹಿನ್ನೆಲೆಗಳೆರಡನ್ನೂ ಹೊಂದಿರುವ ಮೀಸಲಾದ ತಜ್ಞರ ತಂಡದ ಅಗತ್ಯವಿದೆ.
* 'ಇಂಡಿಯಾ ಸೈನ್ಸ್ ವೈರ್' ಭಾರತೀಯ ಪ್ರಯೋಗಾಲಯಗಳ ಸಂಶೋಧನಾ ಪ್ರಕಟಣೆಗಳನ್ನು 'ಸುದ್ದಿ-ಕಥೆ' ಗಳಾಗಿ ಪರಿವರ್ತಿಸುತ್ತದೆ ಮತ್ತು ಭಾರತೀಯ ಸಂಸ್ಥೆಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಗಳನ್ನು ಪ್ರದರ್ಶಿಸಲು ಸಹಾಯ ಮಾಡುತ್ತದೆ. ಇದೇ ಮೊದಲ ಬಾರಿಗೆ ಮಾಧ್ಯಮಗಳು ನಿಯಮಿತವಾಗಿ 'ಇಂಡಿಯಾ ಸೈನ್ಸ್ ವೈರ್' ನಿಂದ ವಿಜ್ಞಾನ ಮತ್ತು ತಂತ್ರಜ್ಞಾನದ ಸುದ್ದಿ-ಮಾಹಿತಿಗಳಿಗೆ ಸ್ಥಳಾವಕಾಶವನ್ನು ಒದಗಿಸುವಂತಾಗಿದೆ.' ಇಂಡಿಯನ್ ಸೈನ್ಸ್ ನ್ಯೂಸ್ ಫೀಚರ್ ಸರ್ವಿಸ್' ಒಂದು ಲಕ್ಷಕ್ಕೂ ಹೆಚ್ಚು ಟ್ವೀಟ್ ಇಂಪ್ರೆಶನ್ ನೊಂದಿಗೆ 500ಕ್ಕೂ ಹೆಚ್ಚು ಸುದ್ದಿ-ಮಾಹಿತಿಗಳನ್ನು ಒದಗಿಸಿದೆ.
* 'ಇಂಡಿಯಾ ಸೈನ್ಸ್' ಟಿವಿ ಒಟಿಟಿ ಚಾನೆಲ್ ವಿಜ್ಞಾನರಂಗದ ಇತ್ತೀಚಿನ ಸಂಗತಿಗಳನ್ನು ಕುರಿತು ಭಾರತೀಯ ಪ್ರೇಕ್ಷಕರಿಗೆ ಹಿಂದಿ ಮತ್ತು ಇಂಗ್ಲೀಷ್ ನಲ್ಲಿ ವೀಡಿಯೊಗಳನ್ನು ಒದಗಿಸುತ್ತದೆ. ಎರಡು ವರ್ಷಗಳಿಗಿಂತಲೂ ಕಡಿಮೆ ಅವಧಿಯಲ್ಲಿ 85 ದಶಲಕ್ಷ ರೀಚ್ ನೊಂದಿಗೆ 2000ಕ್ಕೂ ಹೆಚ್ಚು ಚಲನಚಿತ್ರಗಳನ್ನು ನಿರ್ಮಿಸಿದೆ. 500 ಹೊಸ ವಿಡಿಯೋ ಕಾರ್ಯಕ್ರಮಗಳನ್ನು ಮಾಡಲಾಗಿದೆ. 600 ಡಿಡಿ ಸೈನ್ಸ್ ಚಾನೆಲ್ ಮತ್ತು ಇಂಡಿಯಾ ಸೈನ್ಸ್ ಒಟಿಟಿ ಪ್ಲಾಟ್ ಫಾರ್ಮ್‌ನಲ್ಲಿ ಪ್ರಸಾರವಾಗಿದ್ದು. ಯುವಕರನ್ನು ತಲುಪಲು ಸಾಧ್ಯವಾಗಿದೆ.
* 25 ವಿಭಿನ್ನ ಡು-ಇಟ್-ಯುವರ್ಸೆಲ್ಫ್ (DIY) (ನೀನೆ ಮಾಡಿ ನೋಡು) ಕಿಟ್‌ಗಳನ್ನು ತಯಾರಿಸಿದ್ದು, ಸ್ವತಃ ಮಾಡಿ ನೋಡುವ ವಿಧಾನದ ಪ್ರಾಮುಖ್ಯತೆಯನ್ನು ಕಲಿಸುವ ಬದಲಾವಣೆಯ ಹರಿಕಾರನಾಗಿದೆ. ಎರಡು ಅಂತರಾಷ್ಟ್ರೀಯ ಮಟ್ಟದ ವಿಜ್ಞಾನ ಉತ್ಸವಗಳು ದೇಶದಲ್ಲಿಯೇ ಮೊದಲ ಬಾರಿಗೆ ಆದ ಸಾಧನೆಗಳು.
* ವಿಶ್ವ ಸಂಸ್ಥೆ ಘೋಷಿಸಿದ ಅಂತರಾಷ್ಟ್ರೀಯ ಬೆಳಕಿನ ವರ್ಷದ ಆಚರಣೆ, ಮತ್ತು ಭಾರತ ಸರ್ಕಾರವು ಘೋಷಿಸಿದ ರಾಷ್ಟ್ರೀಯ ಗಣಿತ ವರ್ಷ, ಜೀವವೈವಿಧ್ಯ- ಇವುಗಳ ರಾಷ್ಟ್ರವ್ಯಾಪಿ ಜಾರಿಯನ್ನು ಈ ಸಂಸ್ಥೆಮಾಡಿದ್ದು, ಈ ಕಾರ್ಯಕ್ರಮಗಳ ವ್ಯಾಪ್ತಿಯು ಗಮನಾರ್ಹವಾಗಿದೆ.
* ವಿವಿಧ ವೈಜ್ಞಾನಿಕ ವಿಷಯಗಳ ಮೇಲೆ ದೇಶದ ಸುಮಾರು 85% ಜನಸಂಖ್ಯೆಯನ್ನು ತಲುಪುವ, ವಿಶೇಷವಾಗಿ ಗ್ರಾಮೀಣ ಜನಸಂಖ್ಯೆಯನ್ನು ಅವರದೇ ಭಾಷೆಯಲ್ಲಿ ಭಾರತದ ವಿವಿಧ ರಾಜ್ಯಗಳಲ್ಲಿ ತೊಡಗಿಸಿಕೊಳ್ಳುವ ನಾಟಕಗಳು ಮತ್ತು ಸ್ಥಳೀಯ ಒಳಗೊಳ್ಳುವಿಕೆಯ ಮೂಲಕ ವಿಜ್ಞಾನ ಆಧಾರಿತ ವಿಷಯವನ್ನು ತೆಗೆದುಕೊಳ್ಳಲು 'ಆಕಾಶವಾಣಿ'ಯೊಂದಿಗೆ ಮಾಡಿಕೊಂಡ ಒಪ್ಪಂದ 118 ಕೇಂದ್ರಗಳನ್ನು ಒಳಗೊಂಡಿದೆ, 19 ರಾಷ್ಟ್ರೀಯ ಭಾಷೆಗಳು ಮತ್ತು ಉಪಭಾಷೆಗಳಲ್ಲಿ 1040 ರೇಡಿಯೋ ಕಾರ್ಯಕ್ರಮಗಳನ್ನು ಮಾಡಲಾಗಿದೆ.
* ಬುಡಕಟ್ಟು ಮಕ್ಕಳಿಗಾಗಿ ಮೂವತ್ತೈದು ವಿಜ್ಞಾನ ಮೇಳಗಳು, ಪ್ರದರ್ಶನಗಳು ಮತ್ತು ಮೇಳಗಳನ್ನು ನಡೆಸಿದೆ.
* ಗಾಂಧಿ@150 ಯೋಜನೆ-ಡಿಜಿಟಲ್ ಪ್ರದರ್ಶನವನ್ನು 17 ಸ್ಥಳಗಳಲ್ಲಿ ಈ ಸಂಸ್ಥೆ ಆಯೋಜಿಸಿದೆ.
* ರಾಷ್ಟ್ರೀಯ ಪ್ರಾಮುಖ್ಯತೆ ಮತ್ತು ಹೆಮ್ಮೆಯ ವಿಷಯಗಳ ಬಗ್ಗೆ ವಿಶ್ವಾಸಾರ್ಹ ಮತ್ತು ಅಧಿಕೃತ ಮಾಹಿತಿಯನ್ನು ಒದಗಿಸಲು ವ್ಯಾಪಕ ಪ್ರಯತ್ನಗಳನ್ನು ಇದು ನಡೆಸಿದೆ.
* ಪ್ರಸಿದ್ಧ ವಿಜ್ಞಾನ ಲೇಖಕರು ಮತ್ತು ವಿಜ್ಞಾನಿಗಳ ಸುಮಾರು 300 ಪುಸ್ತಕಗಳನ್ನು ತಯಾರಿಸಿದೆ. ಈ ಪುಸ್ತಕಗಳು ಭಾರತದ ಬಹುತೇಕ ಎಲ್ಲಾ ರಾಜ್ಯಗಳಲ್ಲಿ ಮತ್ತು ದೇಶದ ಹೊರಗೆ ಮೆಚ್ಚುಗೆ ಪಡೆದಿವೆ. ಇದರಲ್ಲಿ ಕೆಲಸ ಮಾಡುತ್ತಿರುವವರು ವಿಜ್ಞಾನವನ್ನು ಜನಪ್ರಿಯಗೊಳಿಸುವಲ್ಲಿ ಯುನೆಸ್ಕೋ ಕಳಿಂಗ ಪ್ರಶಸ್ತಿ, ರಾಷ್ಟ್ರೀಯ ವಿಜ್ಞಾನ ಜನಪ್ರಿಯತೆ ಪ್ರಶಸ್ತಿ, ವಿಜ್ಞಾನದ ಜನಪ್ರಿಯತೆಗಾಗಿ ಇಂದಿರಾಗಾಂಧಿ ಪ್ರಶಸ್ತಿ, ಜನಪ್ರಿಯ ವಿಜ್ಞಾನ ಪುಸ್ತಕ ಬರವಣಿಗೆಗಾಗಿ ಆತ್ಮರಾಮ್ ಪ್ರಶಸ್ತಿ ಮುಂತಾದ ಅನೇಕ ಪ್ರಶಸ್ತಿಗಳನ್ನು ಗಳಿಸಿದ್ದಾರೆ. 'ಡ್ರೀಮ್ 2047' ಎಂಬ ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಮಾಸಿಕ ದ್ವಿಭಾಷಾ ನಿಯತಕಾಲಿಕ ಯುವಕಾಲೇಜು ವಿದ್ಯಾರ್ಥಿಗಳು ಮತ್ತು ಸಮಾಜದ ಇತರ ವರ್ಗಗಳನ್ನು ತಲುಪುತ್ತಿದೆ.

ಅನು: ಜಿ.ಎಸ್. ಮಣಿ

ತಿದ್ದುಪಡಿ: ಕಳೆದ ಸಂಚಿಕೆಯಲ್ಲಿ ಕಣ್ತಪ್ಪಿನಿಂದಾಗಿ ಅಂಕಿ ಅಂಶಗಳು ತಪ್ಪಾಗಿ ಮುದ್ರಿತವಾಗಿತ್ತು.

ಸಿಪಿಐ(ಎಂ) ಗಳಿಸಿದ ಮತಗಳು-2023

ಕ್ರ.ಸಂ.	ಕ್ಷೇತ್ರ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಎಎಪಿ
01	ಬಾಗೇಪಲ್ಲಿ	19,621 (11.32%)	82,128 (47.37%)	62,949 (36.31%)	--	1454 (0.84%)
02	ಕೆಜಿಎಫ್	1008 (0.68%)	81569 (55.1%)	31,102 (21.01%)	1360 (0.92%)	278 (0.19%)
03	ಕೆ.ಆರ್. ಪುರಂ	1220 (0.45%)	1,15,624 (42.91%)	1,39,925 (51.93%)	1975 (0.73%)	2319 (0.86%)
04	ಗುಲ್ಬರ್ಗ (ಗ್ರಾಮೀಣ)	822 (0.51%)	71839 (44.31%)	84466 (52.1%)	--	630 (0.39%)
ಕೆಜಿಎಫ್ - ಆರ್‌ಪಿಐ - 29,795 - (20.12%)						


NEW No. MAG(3)/NPP/205/2021-2022
JANASHAKTHI KANNADA VARA PATRIKE MAY 22-28, 2023 Price: Rs. 10/- Date of Publication: 19 MAY 2023 RNI No. KARKAN /2006/17926 Posted on 23-05-2023
Posted at BG PSO, BG - 560026 **Posted at Periodical Rate** - Rs. 2

‘ವಿಜ್ಞಾನ ಪ್ರಸಾರ’ ಸಂಸ್ಥೆಯನ್ನು ಮುಚ್ಚಬೇಡಿ–ಸಬಲಗೊಳಿಸಿ ಸರಕಾರಕ್ಕೆ ಜನ ವಿಜ್ಞಾನ ಸಂಘಟನೆ ಎಐಪಿಎಸ್‌ಎನ್ ಮನವಿ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ(DST)ಯ ಅಡಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಕಳೆದ 32 ವರ್ಷಗಳಿಂದ ಕೆಲಸ ಮಾಡುತ್ತಿರುವ ‘ವಿಜ್ಞಾನ ಪ್ರಸಾರ’ ವನ್ನು ‘ನೀತಿ ಆಯೋಗ’ದ ಶಿಫಾರಸಿನಂತೆ ಮುಚ್ಚಲಾಗುವುದು ಎಂಬ ಸುದ್ದಿಯ ಬಗ್ಗೆ ‘ಅಖಿಲ ಭಾರತ ಜನ ವಿಜ್ಞಾನ ಜಾಲ’ (ಎಐಪಿಎಸ್‌ಎನ್– AIPSN) ಆಘಾತವನ್ನು ವ್ಯಕ್ತಪಡಿಸುತ್ತ, ಅದನ್ನು ಸಾರ್ವಜನಿಕ ಸಂಪರ್ಕ ಕೋಶದ, ಹೊರಗುತ್ತಿಗೆ ಚಟುವಟಿಕೆಯ ಮಟ್ಟಕ್ಕೆ ಇಳಿಸಬಾರದು" ಎಂದು ಸರಕಾರವನ್ನು ಆಗ್ರಹಿಸಿದೆ. ಬದಲಾಗಿ, ಅದನ್ನು ಅದನ್ನು ಇನ್ನಷ್ಟು ಬಲಪಡಿಸಬೇಕು ಎಂದು ಅದು ಮನವಿ ಮಾಡಿದೆ. ಸಂವಿಧಾನದ ಕಲಮು 51ಎ(ಹೆಚ್) ವಿಧಿಸಿರುವ ಆದೇಶವನ್ನು ‘ವಿಜ್ಞಾನ ಪ್ರಸಾರ’ ಇದುವರೆಗೆ ಈಡೇರಿಸಿಕೊಂಡು ಬಂದಿರುವಾಗ ‘ನೀತಿ’ ಆಯೋಗದ ಈ ಶಿಫಾರಸು ‘ಸಂಕುಚಿತ’ ದೃಷ್ಟಿಯದ್ದು, ಆಘಾತಕಾರಿ ಮತ್ತು ಗೊಂದಲಮಯವಾದದ್ದು ಎಂದು ಎಐಪಿಎಸ್‌ಎನ್ ಖೇದ ವ್ಯಕ್ತಪಡಿಸಿದೆ.

ವಿಜ್ಞಾನವನ್ನು ಜನಪ್ರಿಯಗೊಳಿಸಲು, ಅದರ ಸಂವಹನವನ್ನು ಮತ್ತು ಜನರಲ್ಲಿ ವೈಜ್ಞಾನಿಕ ಮನೋಭಾವವನ್ನು ರೂಪಿಸುವ ಉದ್ದೇಶದೊಂದಿಗೆ 1989ರಲ್ಲಿ ’ವಿಜ್ಞಾನ ಪ್ರಸಾರ’ (ಸಂಕ್ಷಿಪ್ತವಾಗಿ ‘ವಿಪಿ’) ಸಂಸ್ಥೆಯನ್ನು ಸ್ಥಾಪಿಸಲಾಯಿತು. ಅದನ್ನು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಮಾಡಲಾಯಿತು. ಅದು ಈಗ ಈ ಇಲಾಖೆಯ ಸುಪರಿಚಿತ ಮತ್ತು ಎದ್ದುಕಾಣುವ ಸಂಸ್ಥೆಗಳಲ್ಲಿ ಒಂದಾಗಿ ಬೆಳೆದಿದೆ. ಗಮನಾರ್ಹ ಕ್ರಮಗಳನ್ನು ಕೈಗೊಂಡಿರುವ ಈ ಯಶಸ್ವಿ ಸಂಸ್ಥೆಯನ್ನು ಈ ಆಗಸ್ಟ್ ಹೊತ್ತಿಗೆ ಮುಚ್ಚಿ, ಅದನ್ನು ಡಿಎಸ್‌ಟಿಯಲ್ಲಿ ಒಂದು ಕೋಶದ ಮಟ್ಟಕ್ಕೆ ಇಳಿಸಲು ‘ನೀತಿ’ ಆಯೋಗ ಶಿಫಾರಸು ಮಾಡಿದೆ ಎಂದು ವರದಿಯಾಗಿದೆ. ಈ ಮೂಲಕ ಇದಕ್ಕೆ ಒದಗಿಸಬೇಕಾದ ಮಾನವ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಕಡಿತ ಮಾಡಿಯೂ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಬಹುದು ಎಂಬ ಕಲ್ಪನೆ ಇದರ ಹಿಂದಿರುವಂತೆ ಕಾಣುತ್ತದೆ, ಮೇಲಾಗಿ, ಪುನರಾವರ್ತಿತ ವೆಚ್ಚವನ್ನು ಕಡಿಮೆ ಮಾಡುವ ಮಾರ್ಗವಾಗಿ ಹೊರಗುತ್ತಿಗೆ ಕೊಡಲು ಇಂತಹ ವ್ಯವಸ್ಥೆಯು ಅನುಕೂಲಕರವಾಗಿರುತ್ತದೆ ಎಂಬ ವಿಚಾರವೂ ಇರುವಂತೆ ಕಾಣಿಸುತ್ತಿದೆ. ಆದರೆ ಇದು ಗುತ್ತಿಗೆಕರಣ ಮತ್ತು ಖಾಸಗೀಕರಣಕ್ಕೆ ದಾರಿ ಮಾಡಿಕೊಡುತ್ತದೆ. ಇವೆರಡೂ ವಿಜ್ಞಾನವನ್ನು ಜನಪ್ರಿಯಗೊಳಿಸುವ ಮತ್ತು ವೈಜ್ಞಾನಿಕ ಮನೋಭಾವ ಹಾಗೂ ಮತ್ತು ವೈಚಾರಿಕ ಚೇತನವನ್ನು ಬೆಳೆಸುವ ಕೆಲಸದಲ್ಲಿ ಮುಂದೆಯೂ ತೊಡಗುವಲ್ಲಿ ತೊಡಕುಂಟು ಮಾಡುವ ಸಂಗತಿಗಳು ಎಂದು ಎಐಪಿಎಸ್‌ಎನ್ ಎಚ್ಚರಿಸಿದೆ.

ನಾಗರಿಕರಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು ಸಾಂವಿಧಾನಿಕ ಬಾಧ್ಯತೆಯಾಗಿದೆ ಎಂದು ಸೂಚಿಸಿರುವ ಎಐಪಿಎಸ್‌ಎನ್, "ವಿಜ್ಞಾನ ಸಂವಹನವನ್ನು ಡಿಎಸ್‌ಟಿಗೆ ಸಂವಿಧಾನ ವಿಧಿಸಿರುವ ಮೂಲ ಆದೇಶವೆಂಬುದನ್ನು ಒಪ್ಪಿಕೊಳ್ಳಬೇಕು, ಅದನ್ನು ಸಾರ್ವಜನಿಕ ಸಂಪರ್ಕದ ಕೋಶದ, ಹೊರಗುತ್ತಿಗೆ ಚಟುವಟಿಕೆಯ ಮಟ್ಟಕ್ಕೆ ಇಳಿಸಬಾರದು" ಎಂದು ಸರಕಾರವನ್ನು ಆಗ್ರಹಿಸಿದೆ.



‘ವಿಪಿ’ ಮಾಡಿರುವ ಅಗಾಧ ಕೆಲಸ–ಕಾರ್ಯಗಳು

‘ವಿಜ್ಞಾನ ಪ್ರಸಾರ’ ಸಮಾಜದ ಪ್ರತಿಯೊಂದು ಸ್ತರವನ್ನು ತಲುಪುವ, ಎಲ್ಲರನ್ನೂ ಒಳಗೊಳ್ಳುವ ಪಾತ್ರವನ್ನು ವಹಿಸಿದೆ. ಅದು ಮಹಿಳೆಯರಿರಬಹುದು, ವಿಕಲಚೇತನರು, ಬುಡಕಟ್ಟು ಜನಗಳು, ಬಹುದೂರದ, ಭೌಗೋಳಿಕವಾಗಿ ದುರ್ಗಮವಾದ ಪ್ರದೇಶಗಳ ಜನರಿರಬಹುದು, ಎಲ್ಲರನ್ನೂ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನದ, ಅವನ್ನು ಜನಪ್ರಿಯಗೊಳಿಸುವ ಮತ್ತು ವಿಸ್ತರಿಸುವ ಕೆಲಸದಲ್ಲಿ ಅಗತ್ಯ ಸಾಮಗ್ರಿಗಳೊಂದಿಗೆ ತಲುಪಿದೆ, 32 ವರ್ಷಗಳಿಗಿಂತಲೂ ಹೆಚ್ಚಿನ ಕಾಲಾವಧಿಯಲ್ಲಿ 700ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಹಲವಾರು ಶಾಲಾಮಕ್ಕಳನ್ನು ಮತ್ತು ಯುವಜನರ ಬದುಕುಗಳನ್ನು ತಲುಪುವ ಅಗಾಧ ಕೆಲಸವನ್ನು ಅದು ಮಾಡಿದೆ ಎಂದಿರುವ ಎಐಪಿಎಸ್‌ಎನ್ ಹೇಳಿಕೆ ಇವನ್ನು ಕೇವಲ ಸರಕಾರದ ಹಣ ಉಳಿತಾಯದ ದೃಷ್ಟಿಯಿಂದ ನೋಡಬಾರದು ಎಂದಿದೆ.

ಆಧುನಿಕ ಸಮಾಜವನ್ನು ನಿರ್ಮಿಸುವಲ್ಲಿ ವೈಜ್ಞಾನಿಕ ಸಾಕ್ಷರತೆಯ ಪಾತ್ರವನ್ನು ನಗಣ್ಯ ಮಾಡಲು ಸಾಧ್ಯವಿಲ್ಲ. ಈ ಕೆಲಸವನ್ನು ನಮ್ಮ ನೆರೆಯ ಚೀನಾ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. 2002ರಲ್ಲಿ, ಅದು ವಿಜ್ಞಾನವನ್ನು ಜನಪ್ರಿಯಗೊಳಿಸಲು ಕಾನೂನನ್ನು ಜಾರಿಗೊಳಿಸಿತು. 2006ರಲ್ಲಿ “ರಾಷ್ಟ್ರೀಯ ವೈಜ್ಞಾನಿಕ ಸಾಕ್ಷರತಾ ಯೋಜನೆಯ ರೂಪುರೇಷೆ (2006–2010–2020)’ ಎಂಬ ದಸ್ತಾವೇಜನ್ನು ಪ್ರಕಟಿಸಲಾಯಿತು. ‘ಚೀನಾ ವಿಜ್ಞಾನ ಜನಪ್ರಿಯಕರಣ ಸಂಶೋಧನಾ ಸಂಸ್ಥೆ’ (CRISP) ನಡೆಸಿದ ರಾಷ್ಟ್ರೀಯ ಸಮೀಕ್ಷೆಗಳ ಪ್ರಕಾರ, ಚೀನಾದ ನಾಗರಿಕರಲ್ಲಿ ವೈಜ್ಞಾನಿಕ ಸಾಕ್ಷರತೆಯು 2005ರಲ್ಲಿ 1.6% ರಿಂದ 2010ರಲ್ಲಿ 3.7% ಗೆ, 2018ರಲ್ಲಿ 8.47% ಗೆ ಬೆಳೆದಿದೆ. 2020ರ ಮಾರ್ಗಸೂಚಿ ಅದನ್ನು 2025ಕ್ಕೆ 15% ಮತ್ತು 2035ಕ್ಕೆ 25% ಕ್ಕೆ ಏರಿಸುವ ಗುರಿಯನ್ನು ಹಾಕಿಕೊಟ್ಟಿದೆ. ಈ ಮಾರ್ಗಸೂಚಿಯ ಪ್ರಕಾರ "ವಿಜ್ಞಾನದ ಜನಪ್ರಿಯತೆಯು ವೈಜ್ಞಾನಿಕ ಮತ್ತು ತಾಂತ್ರಿಕ ನಾವೀನ್ಯತೆಯಷ್ಟೇ ಮಹತ್ವದ್ದಾಗಿದೆ" ಮತ್ತು ಅದು ದೇಶದ ತಂತ್ರಜ್ಞಾನದ ಹಾಗೂ ಆರ್ಥಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಚೀನಾವು ವಿಜ್ಞಾನವನ್ನು ಜನಪ್ರಿಯಗೊಳಿಸಲು 20,000



ಕೋಟಿ ರೂಪಾಯಿಗಳ ಬಜೆಟ್ ಅನ್ನು ಹೊಂದಿದೆ, ಅದರಲ್ಲಿ 16,000 ಕೋಟಿ ರೂಪಾಯಿಗಳು ಸರ್ಕಾರದ ಧನಸಹಾಯವಾಗಿದೆ.

ನಮ್ಮ ‘ವಿಜ್ಞಾನ ಪ್ರಸಾರ’ ಸಂಸ್ಥೆಯನ್ನು ಮುಚ್ಚುವುದರಿಂದ ಸುಮಾರು 20 ಕೋಟಿ ರೂಪಾಯಿಗಳ ಉಳಿತಾಯವಾಗಬಹುದು, ಆದರೆ ಇದರಿಂದ ನಮ್ಮ ಅರ್ಥವ್ಯವಸ್ಥೆ ಮತ್ತು ರಾಷ್ಟ್ರೀಯ ಹಿತಾಸಕ್ತಿಗೆ ಆಗುವ ದೀರ್ಘಾವಧಿಯ ಹಾನಿಯು ಅಂದಾಜು ಮಾಡಲು ಸಾಧ್ಯವಿಲ್ಲದಷ್ಟಾಗಿರುತ್ತದೆ. ಅಲ್ಲದೆ ಬೇರೆ ಯಾವ ಸಂಸ್ಥೆಯೂ ಮಾಡದ ಕೆಲಸವನ್ನು ಇದು ಮಾಡುತ್ತಿದೆ. ಆದ್ದರಿಂದ ಇದನ್ನು ಮುಚ್ಚುವುದು ದೂರದೃಷ್ಟಿಯಿಲ್ಲದ, ಸರಿಯಾಗಿ ಪರಿಶೀಲಿಸದ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳಿಗೆ ವಿರುದ್ಧವಾದ ಕ್ರಮವಾಗಿದೆ ಎಂದಿರುವ ಎಐಪಿಎಸ್‌ಎನ್ ಮನವಿ "ವಿಜ್ಞಾನದ ಜನಪ್ರಿಯತೆ ಮತ್ತು ವೈಜ್ಞಾನಿಕ ಸಾಕ್ಷರತೆಯು ರಾಷ್ಟ್ರಕ್ಕೆ ಅನಿವಾರ್ಯವಾಗಿದೆ, ಏಕೆಂದರೆ ನಾವು ಆಧುನಿಕ, ತಾಂತ್ರಿಕವಾಗಿ ಮತ್ತು ವೈಜ್ಞಾನಿಕವಾಗಿ ಮುಂದುವರಿದ

ಪುಟ 15 ಕ್ಕೆ



JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**